ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 8–9 ಮೇ 13, 1979 80 ಪೈಸೆ

ಹಳ್ಳಿಯ ಬಡವರ ಹೋರಾಟ ಬೆಳೆಯಲಿ

ಕೇಂದ್ರದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಮತ್ತು ಈಗ ಅಧಿಕಾರದಲ್ಲಿರುವ ಜನತಾ ಪಕ್ಷಗಳ ಆಡಳಿತದಲ್ಲಿ ಹಳ್ಳಿಯ ಬಡವರು ಇನ್ನೂ ಗರೀಬರಾಗುತ್ತಲಿದ್ದಾರೆ. ಜನತಾ ಪಕ್ಷವು ಅಧಿಕಾರಕ್ಕೆ ಬಂದಮೇಲೆ ಕೆಲವೊಂದು ಪ್ರಜಾಪ್ರಭುತ್ವ ಹಕ್ಕುಗಳು ಮತ್ತೆ ದೊರೆಯುವಂತಾದರೂ, ಈಗಿನ ಸರಕಾರವು ಹಿಂದಿನ ಸರಕಾರದಂತೆ ಭೂಮಾಲಕ–ಬಂಡವಾಳಗಾರ ಪರವಾದ ವರ್ಗಧೋರಣೆಗಳನ್ನೆ ಅನುಸರಿಸುತ್ತಲಿದೆ. ನಮ್ಮ ರಾಷ್ಟ್ರವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯಲು ಎಲ್ಲಾ ಪ್ರಯತ್ನಗಳೂ ನಡೆಯುತ್ತಲಿವೆ. ಜನತಾಪಕ್ಷಕ್ಕೆ ಕೃಷಿಕರ ಬಗ್ಗೆ ಇರುವ ಕಾಳಜಿ, ಶ್ರೀ ಚರಣಸಿಂಗರ ಮುಂಗಡಪತ್ರ, ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರವು ಆಗಿಂದಾಗ್ಗೆ ಕೃಷಿಕರಿಗೆ ತೋರಿದ ಒಲವು–ಇವೆಲ್ಲಾ ಹಳ್ಳಿಯ ಶ್ರೀಮಂತರಿಗೆ ಮಾತ್ರ ಅನುಕೂಲವಾಗಿವೆ. ದೊರೆಯುವ ಎಲ್ಲಾ ಅಂಕಿಸಂಖ್ಯೆಗಳು ಬಡರೈತರು, ಮಧ್ಯ ರೈತರು ದಿವಾಳಿಯಾಗಿ ಭೂಮಿಯನ್ನು ಕಳೆದುಕೊಳ್ಳುವುದನ್ನು ತೋರಿಸುತ್ತವೆ. ಕೃಷಿ ಕೂಲಿಗಾರರ ಜೀವನ ಸ್ಥಿತಿಯು ನಿಕೃಷ್ಟವಾಗಿದೆ. ಹಿಂದುಳಿದ ಜಾತಿ, ಜನಾಂಗದವರ ಮೇಲಿನ ದಬ್ಬಾಳಿಕೆ, ಶೋಷಣೆ ಮುಂದುವರಿಯುತ್ತಲಿದೆ.

ಸಂಪಾದಕೀಯ

ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಪಕ್ಷದ ಅಧಿಕಾರವೇ ಇದೆ. ಸರಕಾರದ ಸಮಾಜವಾದದ ಘೋಷಣೆ, ಹಳ್ಳಿಯ ಬಡವರಿಗೆ ಸಹಾಯಕ್ಕೆಂದು ತೋರ್ಕೆಗೆ ಹಾಕಿದ ಕಾರ್ಯಕ್ರಮಗಳು ಏನೇ ಇದ್ದರೂ ಬಡವರು ಇನ್ನೂ ಬಡವರಾಗಿದ್ದಾರೆ. ಸರಕಾರದ ಭೂಸುಧಾರಣೆ ಕಾನೂನು ಜಾರಿಗೆ ಬರುವಷ್ಟರಲ್ಲಿ ಹೆಚ್ಚಿನ ಗೇಣಿದಾರ ರೈತರು ಭೂಮಿಯಿಲ್ಲದ ಕೃಷಿಕೂಲಿಗಾರರಾಗಿರುವರು. ಕಾನೂನಿನ ಅಲ್ಪಸ್ವಲ್ಪ ಪ್ರಯೋಜನ ಪಡೆದ ರೈತರಿಗೂ ಇನ್ನೂ ಭೂಮಿಯ ನಿಜವಾದ ಹಕ್ಕು ದೊರೆತಿಲ್ಲ. ಬೆಳೆಸಿದ ಬೆಳೆಗೆ ಸರಿಯಾದ ಬೆಲೆಯಿಲ್ಲದೆ ಸಣ್ಣಪುಟ್ಟ ರೈತರು, ಅಂದರೆ ಬಡ ಮತ್ತು ಮಧ್ಯಮ ರೈತರು ದಿವಾಳಿಯಾಗುತ್ತಲಿರುವರು. ಸರಕಾರದ ಯೋಜನೆಗಳ ಲಾಭಗಳೆಲ್ಲಾ ಭೂಮಾಲಕ ಮತ್ತು ಶ್ರೀಮಂತ ರೈತರಿಗೇ ದೊರೆಯುತ್ತಿವೆ. ರಾಜ್ಯದಲ್ಲಿ ಕೃಷಿಕೂಲಿಗಾರರಿಗೆ ನಿಗದಿಯಾಗಿರುವ ಕನಿಷ್ಟ ವೇತನವು ಬಹಳ ಕಡಿಮೆ ಇದ್ದು, ಇದೂ ಸಿಗುತ್ತಿಲ್ಲ. ಹಲವಾರು ವರ್ಷಗಳಿಂದ ಸರಕಾರಿ ಬಂಜರು ಭೂಮಿಯಲ್ಲಿ ವಾಸಮಾಡುತ್ತಾ ಬಂದಿರುವ ಲಕ್ಷಗಟ್ಟಲೆ ಬಡಜನರನ್ನು ಬಲಾತ್ಕಾರದಿಂದ ಒಕ್ಕಲೆಬ್ಬಿಸಲಾಗುತ್ತಿದೆ; ಇದೇ ಸಂದರ್ಭ ಭೂಮಾಲಕ ಮತ್ತು ಪ್ಲಾಂಟೇಷನ್ ಮಾಲಿಕೇರು ಲಕ್ಷಗಟ್ಟಲೆ ಎಕರೆ ಸರಕಾರಿ ಭೂಮಿಯನ್ನು ಅಕ್ರಮವಾಗಿ ಅನುಭವಿಸುತ್ತಲಿರುವರು. ಗ್ರಾಮಾಂತರ ಅಭಿವೃದ್ಧಿಗೆ ಆದ್ಯತೆ ಇಲ್ಲದಿದ್ದು, ಇರುವ ಯೋಜನೆಗಳೂ

[24ನೇ ಪುಟ ನೋಡಿ]

ಮೇ ವಿಶೇಷಾಂಕ

ಮೇ ದಿನಾಚರಣೆಯನ್ನು ಕುರಿತು

ಮೇ ದಿನಾಚರಣೆ ಹುಟ್ಟಿಕೊಂಡಿದ್ದು ಇವತ್ತು ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ತೊಟ್ಟಿಲಾಗಿರುವ ಅಮೆರಿಕಾದಲ್ಲಿ ಎಂದರೆ ಯಾರಿಗಾದರೂ ಆಶ್ಚರ್ಯವಾಗಬಹುದು. ಹತ್ತೊಂಬತ್ತನೆ ಶತಮಾನದ ಆದಿಭಾಗದಲ್ಲಿ ದುಡಿಯುವ ಗಂಟೆಗಳ ಕಡಿತಕ್ಕಾಗಿ ಅಲ್ಲೊಂದು ಚಳುವಳಿ ಶರುವಾಯಿತು. ದಿನಕ್ಕೆ ಹದಿನಾಲ್ಕು, ಹದಿನೆಂಟು ಗಂಟೆಗಳ ಕೆಲಸದಿಂದ ಬೇಸತ್ತ ಕೆಲಸಗಾರರು ದಿನಕ್ಕೆ ಹತ್ತು ಗಂಟೆಗಳ ಕೆಲಸ ಮಾತ್ರ ಇರಬೇಕೆಂಬ ಬೇಡಿಕೆ ಮುಂದಿಟ್ಟರು. ಒಂದು ನಗರದಲ್ಲಿ ಹುಟ್ಟಿಕೊಂಡ ಚಳುವಳಿ, ಅಮೆರಿಕಾದ ಅನೇಕ ನಗರಗಳಿಗೆ ವ್ಯಾಪಿಸಿ, ಕಾರ್ಖಾನೆಗಳ ಮಾಲೀಕರಿಗೆ ಮತ್ತು ಸರ್ಕಾರಕ್ಕೆ ಆತಂಕವನ್ನು ಒಡ್ಡಿತು. ಈ ಬೇಡಿಕೆಗಾಗಿ ಮುಷ್ಕರ ನಡೆಸಲು ಕೆಲಸಗಾರರು ಮೇ ಒಂದನೇ ತಾರೀಕನ್ನು ಆರಿಸಿಕೊಂಡರು. ಅಂದಿನಿಂದ ಎಲ್ಲ ರಾಷ್ಟ್ರಗಳಲ್ಲೂ ಕಾರ್ಮಿಕ ವಲಯದಲ್ಲಿ ಮೇ ಒಂದನೇ ತಾರೀಕು ಮಹತ್ವ ಪಡೆದು, ಕಾರ್ಮಿಕರಿಗೆ ಶ್ರೇಷ್ಠದಿನವೆನಿಸಿದೆ. ತಮ್ಮ ಧ್ಯೇಯಗಳ ಗಲುವಾಗಿ ನಡೆಸುವ ಹೋರಾಟದ ಸಂಕೇತದಿನವೆನಿಸಿಕೊಂಡಿದೆ. ದುಡಿಮೆ ಅವಧಿಯ ಕಡಿತದ ಒಂದೇ ಬೇಡಿಕೆಯಿಂದ ಇಂದು ಕಾರ್ಮಿಕರು ಆರ್ಥಿಕರಾಜಕೀಯ ಬೇಡಿಕೆಗಳವರೆಗೆ ಮುಂದುವರೆಯುವ ವರ್ಗಪ್ರಜ್ಞೆಯನ್ನು ಬೆಳೆಸಿಕೊಂಡಿದ್ದಾರೆ.

ಅಮೆರಿಕಾದ ಫಿಲಿಡೆಲ್ಫಿಯಾ, ನ್ಯೂಯಾರ್ಕ್ ನಗರಗಳಲ್ಲಿ ಹತ್ತು ಗಂಟೆಗಳ ಕೆಲಸಕ್ಕಾಗಿ ಕಾರ್ಮಿಕರಿಂದ ವ್ಯಾಪಕವಾದ ಚಳುವಳಿ ನಡೆಯಿತು. ಇದರ ಒತ್ತಾಯಕ್ಕೆ ಮಣಿದು ಅಧ್ಯಕ್ಷ ವಾನ್ ಬರೆನ್, ಸರ್ಕಾರಿ ಕೆಲಸದಲ್ಲಿ ಹತ್ತುಗಂಟೆಗಳ ಕಾಲ ಮಾತ್ರ ದುಡಿಯತಕ್ಕದ್ದೆಂದು ನಿಯಮ ಜಾರಿಗೆ ತಂದರು. ನಂತರ ಅನೇಕ ಕಾರ್ಖಾನೆಗಳಲ್ಲಿ ಎಂಟುಗಂಟೆ ದುಡಿಮೆಯ ಮುಷ್ಕರ ಆರಂಭವಾಯಿತು. ಅಮೆರಿಕಾದೇಶವೊಂದರಲ್ಲೆ ಅಲ್ಲದೆ, ಉದಯವಾಗುತ್ತಿದ್ದ ಬಂಡವಾಳಶಾಹಿಯ ಹಿಡಿತಕ್ಕೆ ಬರುತ್ತಿದ್ದ ಎಲ್ಲ ದೇಶಗಳಲ್ಲೂ ಈ ಚಳುವಳಿ ಹರಡಿತು. ಅಮೆರಿಕಾದ ಈ ಚಳುವಳಿಯಲ್ಲಿ ನ್ಯಾಷನಲ್ ಲೇಬರ್ ಯೂನಿಯನ್ ಮುಖ್ಯ ಪಾತ್ರವನ್ನು ವಹಿಸಿತ್ತು. ಇದರ ಪ್ರಭಾವದಿಂದ ಎಲ್ಲೆಲ್ಲೂ ಎಂಟು ಗಂಟೆ ಲೀಗ್‌ಗಳು ರಚನೆಯಾದವು. 1868ರಲ್ಲಿ ಅಮೆರಿಕಾ ಸಂಸ್ಥಾನದ

[24ನೇ ಪುಟ ನೋಡಿ]



ಭಾರತೀಯ ಕಾಫಿ ಉದ್ಯಮ

ವಿಶಿಷ್ಟವಾದ ಮತ್ತು ರುಚಿಕರವಾದ ಭಾರತೀಯ ಕಾಫಿಯು, ಭಾರತದ ಫಲವತ್ತಾದ ಮಣ್ಣು, ವಾತಾವರಣ ಮತ್ತು ಸಂಸ್ಕೃತಿಗಳಿಂದ ತನ್ನ ವಿಶೇಷ ಪರಿಮಳವನ್ನು ಪಡೆಯುತ್ತದೆ.

ಪೂರ್ವದವರೆಗೂ ವಿಸ್ತರಿಸುವ ಪಶ್ಚಿಮ ಘಟ್ಟಗಳ ತಂಪಾದ ಇಳಿಜಾರುಗಳಲ್ಲಿ ಭಾರತೀಯ ಕಾಫಿಯನ್ನು ಪೋಷಿಸಿ, ಶ್ರೇಷ್ಠತಮ ಕಾಫಿಯ ಬೆಳವಣಿಗೆಗೆ ಯೋಗ್ಯವಾದ ವಾತಾವರಣದಲ್ಲಿ ಅದನ್ನು ಬೆಳೆಸಲಾಗುತ್ತದೆ.

ಭಾರತದಲ್ಲಿ ಕಾಫಿಯನ್ನು 1,88,447 ಹೆಕ್ಟೇರುಗಳಲ್ಲಿ ಬೆಳೆಸಲಾಗುತ್ತದೆ. ಇಲ್ಲಿ 91,246 ಕಾಫಿ ಎಸ್ಟೇಟುಗಳಿವೆ. ಇದರಲ್ಲಿ ಹತ್ತು ಹೆಕ್ಟೇರುಗಳಿಗಿಂತ ಕಡಿಮೆಯ ಹಿಡುವಳಿಗಳು 89,314 ಇದ್ದು, 1,932 ಎಸ್ಟೇಟುಗಳು ಹತ್ತು ಹೆಕ್ಟೇರುಗಳಿಗಿಂತ ಹೆಚ್ಚು ವಿಸ್ತಾರವಾಗಿವೆ. ಈ ಎಸ್ಟೇಟುಗಳಲ್ಲಿ ದಿನವಹಿ 2,31,208 ಕೆಲಸಗಾರರು ದುಡಿಯುತ್ತಾರೆ.

ಕಾಫಿ ಮಂಡಲಿಯು ಭಾರತೀಯ ಕಾಫಿ ಉದ್ಯಮದ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತದೆ. ಕೇಂದ್ರ ಕಾಫಿ ಸಂಶೋಧನಾಲಯವು ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿ ಇದೆ. ಕಾಫಿ ತೋಟಗಳ ವೈಜ್ಞಾನಿಕ ಬೆಳವಣಿಗೆಗೆ, ಸಂಶೋಧನಾ ವಿಭಾಗವು ಅಪಾರ ಸಹಾಯ ಮಾಡಿದೆ.

ಕಾಫಿ ಬೆಳೆಯುವ ಪ್ರದೇಶ

ರಾಜ್ಯ	ಅರೆಬಿಕಾ (ಹೆಕ್ಟೇರುಗಳು)	ರೋಬಸ್ಟಾ (ಹೆಕ್ಟೇರುಗಳು)	ಒಟ್ಟು (ಹೆಕ್ಟೇರುಗಳು)
ಕರ್ನಾಟಕ	68,369	32,557	100,926
ತಮಿಳುನಾಡು	26,705	5,520	32,225
ಕೇರಳ	2,926	49,718	52,644
ಆಂಧ್ರಪ್ರದೇಶ	1,529	29	1,558
ಅಸ್ಸಾಂ	684	50	734
ಇತರ ರಾಜ್ಯಗಳು : ಒರಿಸ್ಸಾ, ಪ. ಬಂಗಾಳ, ಅಂಡಮಾನ್ಸ್ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ (ಪ್ರಾಯೋಗಿಕ ತೋಟಗಳು)	358	2	360
	100,571	87,876	188,447

ಭಾರತದ ಶ್ರೇಷ್ಠ ಕಾಫಿಯ ಒಟ್ಟು ಉತ್ಪಾದನೆ ಒಂದು ಲಕ್ಷ ಟನ್ನುಗಳು.

ಬೆಳೆದ ಕಾಫಿಯನ್ನು ಹಸನು ಮಾಡಬೇಕು. ದೇಶದಲ್ಲಿ 31 ಕಾಫಿ ಹಸನು ಮಾಡುವ ಕೇಂದ್ರಗಳಿವೆ. ಭಾರತೀಯ ಕಾಫಿಯ ಗುಣಮಟ್ಟಕ್ಕೆ ದೇಶದಲ್ಲಿ ನಡೆಯುವ ಈ ಎಲ್ಲ ಕೆಲಸಗಳೂ ಸಹಾಯ ಮಾಡುತ್ತವೆ. ಕಾಫಿ ಹಣ್ಣುಗಳನ್ನು ಎಚ್ಚರಿಕೆಯಿಂದ ಕೀಳುವುದು, ವೈಜ್ಞಾನಿಕವಾಗಿ ಕ್ರಮಗೊಳಿಸುವುದು, ಸಿದ್ಧ ಮಟ್ಟಕ್ಕೆ ತಕ್ಕಂತೆ ಹಸನುಗೊಳಿಸುವುದು ಮತ್ತು ಗುಣಮಟ್ಟವನ್ನು ನಿರ್ಧರಿಸುವುದು ಇವೆಲ್ಲದರಿಂದ ಶ್ರೇಷ್ಠ ಕಾಫಿ ಬೀಜಗಳನ್ನೇ ರಫ್ತು ಮಾಡಲಾಗುತ್ತದೆ.

1978–79ರ ಕಾಫಿ ರಫ್ತಿನಿಂದ 155 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ದೊರೆತಿದೆ.

ರಫ್ತಿನಲ್ಲಿ ಕಂಡುಬರುತ್ತಿರುವ ಹೆಚ್ಚಳದ ಬೇಡಿಕೆಗಳು ಮತ್ತು ಭವಿಷ್ಯದ ಅಂತರರಾಷ್ಟ್ರೀಯ ಕಾಫಿ ಸೇವನೆಯಲ್ಲಿ ಉಂಟಾಗುವ ಹೆಚ್ಚಳ ಇವುಗಳಿಗೆ ತಕ್ಕಂತೆ ಸರಕನ್ನು ಸರಬರಾಜು ಮಾಡುವುದಕ್ಕೋಸ್ಕರ, ಸಾಂಪ್ರದಾಯಿಕ ಪ್ರದೇಶಗಳಲ್ಲಿ ಹೆಚ್ಚು ಉತ್ಪಾದನೆ ಮತ್ತು ಅಸಾಂಪ್ರದಾಯಿಕ ಪ್ರದೇಶಗಳನ್ನು ಕಾಫಿ ಬೆಳೆಗೆ ಒಗ್ಗಿಸುವುದು ಮುಂತಾದ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಕಾಫಿ ಮಂಡಲಿ, ಭಾರತ

ಸಾಹಿತ್ಯ - ಲೇಖಕ - ಜನತೆ

—ಚಾರುಕೀರ್ತಿ

ಭಾರತೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕರ್ನಾಟಕ ಸಾಹಿತ್ಯದ ವಿಚಾರವನ್ನು ಪ್ರಸ್ತಾಪಿಸುವುದೇ ಅಷ್ಟು ಉಚಿತವಾದದ್ದಲ್ಲ. ಏಕೆಂದರೆ, ಸಾಹಿತ್ಯಚಟುವಟಿಕೆಯು ಸಾಮಾಜಿಕ ರಂಗದಲ್ಲಿ ಉಂಟಾಗಿರಬಹುದಾದ ಬೆಳವಣಿಗೆಯನ್ನು ಅವಲಂಬಿಸಿಕೊಂಡೇ ಇರುವುದರಿಂದ, ಕರ್ನಾಟಕದ ಸಾಹಿತ್ಯರಂಗದ ಬೆಳವಣಿಗೆಯನ್ನು ಆಂಧ್ರ, ಕೇರಳ, ಬಂಗಾಳಗಳ ಸಾಹಿತ್ಯರಂಗಕ್ಕೆ ಸಮವಾಗಿಯೇ ಪರಿಗಣಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆಯಾರಾಜ್ಯಗಳಲ್ಲಿ ಉಂಟಾಗಿರುವ ಸಾಮಾಜಿಕ ಎಚ್ಚರವನ್ನು ಅವಲಂಬಿಸಿಕೊಂಡೇ ಅಲ್ಲಿನ ಸಾಹಿತ್ಯರಂಗದ ಎಚ್ಚರವೂ ಬೆಳೆದಿರುತ್ತದೆ.

ಸಾಹಿತ್ಯದ ಹೊಣೆ

ಕಲಾತ್ಮಕ ಅಭಿವ್ಯಕ್ತಿಯಾದ ಸಾಹಿತ್ಯದ ಹೊಣೆಗಾರಿಕೆಯ ಬಗ್ಗೆ ನಮ್ಮ ನಾಡಿನಲ್ಲಿ ಬಹಳ ಹಿಂದಿನಿಂದಲೂ ಚರ್ಚೆ ನಡೆದು ಬಂದಿದೆ. ಸ್ವಾತಂತ್ರ್ಯಾನಂತರ ಹುಟ್ಟಿದ ಪ್ರಗತಿಶೀಲ ಚಳುವಳಿ ಉತ್ಸಾಹಸ್ಥಾಯಿಯಾಗಿ ವಿಜೃಂಭಿಸಿ ತಾತ್ವಿಕ ನೆಲೆಗಟ್ಟಿಲ್ಲದೆ ಶಿಥಿಲಗೊಂಡದನ್ನು ಉದಾಹರಿಸಿ ಅನೇಕರು ತತ್ವಬದ್ಧವಾಗಿ ಸಾಹಿತ್ಯರಚಿಸಲು ಹೋದರೆ ಪ್ರಗತಿಶೀಲರಿಗೆ ಬಂದೊದಗಿದ ಗತಿಯೇ ಮುಂದಿನವರಿಗೂ ಆಗುತ್ತದೆಂದು ಭವಿಷ್ಯ ನುಡಿಯುತ್ತಾರೆ. ತಾವು ಯಾವ ನೆಲೆಗಟ್ಟಿನಲ್ಲಿ ನಿಂತಿದ್ದೇವೆಂಬುದನ್ನು ಅರಿಯದೇ ಹೋದದ್ದು, ಅದರ ಜೊತೆಗೇ ತಾತ್ವಿಕವಾದ ಹೋರಾಟದ ಬೆಳವಣಿಗೆ ಇಲ್ಲವಾದದ್ದು, ಅವರ ವೈಫಲ್ಯಕ್ಕೆ ಕಾರಣಗಳೆಂಬುದನ್ನು ನಾವು ಗಮನಿಸಿದರೆ ಇಂದಿನ ಬರಹಗಾರರು ವಹಿಸಬೇಕಾದ ಎಚ್ಚರವನ್ನೂ ತಿಳಿದುಕೊಂಡಂತಾಗುತ್ತದೆ. ಭಾರತದಲ್ಲಿರುವ ಕರ್ನಾಟಕ ಈಗಾಗಲೇ ಕ್ರಾಂತಿಮಾಡುವ ಅಂಚಿನಲ್ಲಿದೆಯೆಂದು ಭಾವಿಸಿಕೊಳ್ಳುವುದಾಗಲೀ, ಜಡವಾಗಿ ಎಚ್ಚರವೇ ಬರದಿರುವ ನಾಡು ಎಂದಾಗಲೀ ಒಬ್ಬ ಬರಹಗಾರ ಅಂದುಕೊಳ್ಳುವಂತಿಲ್ಲ. ಕೇರಳದಲ್ಲಿ, ಬಂಗಾಳದಲ್ಲಿ ಮತ್ತು ಆಂಧ್ರದಲ್ಲಿ ಬರಹಗಾರನಿಗೆ ಕಾಣಿಸುವ ಸಮಾಜದ ಸ್ವರೂಪಕ್ಕೂ ಕರ್ನಾಟಕದಲ್ಲಿರುವುದಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ಈ ನೆಲದ ಬರಹಗಾರರು ಗುರುತಿಸಿಕೊಳ್ಳದೆ ಬೇರೆಯವರು ಗುರುತಿಸಿಕೊಳ್ಳಲಾರರು. ಇಷ್ಟಾಗಿ ಸಾಹಿತ್ಯದ ಹೊಣೆಗಾರಿಕೆಯ ಬಗೆಗೂ ಲೇಖಕನಿಗೆ ಸ್ಪಷ್ಟವಾದ ಕಲ್ಪನೆ ಅತ್ಯಗತ್ಯ. 'ಕಲೆಗಾಗಿ ಕಲೆ', ಅದಕ್ಕೆ ಬೇರಾವುದೇ ಹೊಣೆಗಾರಿಕೆ ಇಲ್ಲವೆಂದು ಹೇಳುವ ಮಾತಿಗೆ ಈಗಾಗಲೇ ಚಲಾವಣೆ ತಪ್ಪಿಹೋಗಿದೆ. ಅಥವಾ ಹಾಗೆ ಹೇಳುವವರೂ ಒಂದಲ್ಲ ಒಂದು ರೂಪದಲ್ಲಿ ವ್ಯವಸ್ಥೆಯ ಪ್ರತಿಪಾದಕರಾಗಿರುತ್ತಾರೆಂಬ ಅಂಶವೂ ಹೊರಬಿದ್ದಿದೆ. ಆದರೆ ಈಗ ಇನ್ನೂ ವಿವಾದದಲ್ಲಿರುವ ಒಂದು ಅಂಶವಿದೆ. ಬಹುಪಾಲು ಜನತೆಯ ಆಶೋತ್ತರಗಳನ್ನು ಈಡೇರಿಸುವ ಉದ್ದೇಶದಿಂದ ಸಾಹಿತ್ಯರಚನೆಗೆ ತೊಡಗಿದರೆ ಅದು ಉತ್ತಮ ಸಾಹಿತ್ಯವಾಗುವುದಿಲ್ಲ ಎಂದು ಮೂಗು ಮುರಿಯುವುದು ಸಂಪ್ರದಾಯವಾದಿಗಳ ವಾಡಿಕೆಯಾಗಿದೆ. ಈ ಸಂಪ್ರದಾಯವಾದಿಗಳ ಮಾತಿನಂತೆ ಜನಹಿತಕ್ಕೆ ವಿರೋಧಿಯಾದದ್ದೇ ಉತ್ತಮಸಾಹಿತ್ಯ ಎನ್ನಿಸಿಕೊಳ್ಳಬೇಕಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಅವರು ಪರಿಗಣಿಸುವುದು ಅಂತಹುದೇ ಆಗಿರುತ್ತದೆ. ಇದಕ್ಕೆ ಕಲೆಗಾಗಿಕಲೆ ಎನ್ನುವ ಪಲಾಯನವಾದವನ್ನು ಅಂಟಿಸಲಾಗುತ್ತದೆ. ಧರ್ಮಕ್ಕೆ ರಾಜನಿಗೆ ಬದ್ಧವಾಗಿಯೂ ಉತ್ತಮ ಅತ್ಯುತ್ತಮ ಎನ್ನಬಹುದಾದ ಸಾಹಿತ್ಯಕೃತಿಗಳು ಸೃಷ್ಟಿಯಾಗಿದೆ ಎಂದು ಹೇಳುವುದಾದರೆ, 'ಜನತೆಗಾಗಿ ಕಲೆ' ಎಂದು ಘೋಷಿಸಿ, ಇದುವರೆಗೂ ಸಂಕುಚಿತಗೊಂಡಿರುವ ಸಾಹಿತ್ಯದ ವಸ್ತುವಿನ ವಲಯವನ್ನು ವಿಶಾಲಗೊಳಿಸಿದರೆ ಅದು ವೈವಿಧ್ಯಮಯ ಬೆಳವಣಿಗೆಯನ್ನು ಕಾಣುವುದರಲ್ಲಿ ಸಂಶಯವಿಲ್ಲ. ಜಗತ್ತಿನ ಅನೇಕ ದೇಶಗಳಲ್ಲಿ ನಡೆದಿರುವ ಸಾಹಿತ್ಯ ಚಟುವಟಿಕೆಗಳು ಇದಕ್ಕೆ ಸಾಕ್ಷಿ ಹೇಳುತ್ತವೆ.

ವಸ್ತುವಿನ ವಿಸ್ತಾರ ಮತ್ತು ಸಾಹಿತಿ

ಸಾಹಿತ್ಯ ವಸ್ತುವಿನ ವಿಸ್ತಾರವನ್ನು ಕುರಿತು ಮಾತನಾಡುವಾಗ ನಮ್ಮ ಸಾಹಿತಿ ಇರುವ ಪರಿಸ್ಥಿತಿ, ಅರ್ಥಾತ್ ನಾವಿರುವ ಪರಿಸ್ಥಿತಿಯೂ ನಮ್ಮ ಗಮನಕ್ಕೆ ಬಾರದೆಹೋಗದು. ಶೇಕಡಾ ಮೂವತ್ತರಷ್ಟು ಅಕ್ಷರಸ್ಥರಿರುವ ನಾಡಿನಲ್ಲಿ ಅಕ್ಷರದಮೂಲಕ ಪ್ರಕಟವಾಗುವ ಸಾಹಿತ್ಯದ ಸಾಹಚರ್ಯ ಅದರ ಮೂರನೇ ಒಂದು ಭಾಗಕ್ಕೂ ಸೀಮಿತವಾದದ್ದೆಂದು ತಿಳಿದರೆ ಹೆಚ್ಚಾಯಿತೇನೋ? ಈ ಮೂರನೇ ಒಂದು ಭಾಗದ ಬಹುಪಾಲು ಓದುಗರೂ ನಗರವನ್ನವಲಂಬಿಸಿದ ಮಧ್ಯಮ ವರ್ಗದವರು. ಈ ವರ್ಗದ ಆಶಯಗಳನ್ನು ಹೊತ್ತುಕೊಂಡೇ ಬರುವ-ಮತ್ತು ಇದೇ ವರ್ಗದವರಾಗಿಯೇ ಇರುವ ಲೇಖಕರಿಗೆ ಈ ವಲಯದಾಚೆಗಿನ ಸಂವೇದನೆಗಳು ಮುಟ್ಟುವುದಾದರೂ ಹೇಗೆ? ಈ ವರ್ಗದ ಲೇಖಕರು, ತಮ್ಮ ತೆಕ್ಕೆಗೆ ಒಗ್ಗಿದ ಅನುಭವಗಳಿಗೆ ಅಭಿವ್ಯಕ್ತಿಯನ್ನು ರೂಪಿಸಿಕೊಳ್ಳುವುದರಲ್ಲಿ ಸಫಲರಾದರೆ ತಮ್ಮ ಉದ್ದೇಶ ಈಡೇರಿತೆಂದು ಭಾವಿಸುತ್ತಾರೆ. ಅದೇ ವರ್ಗದ ಓದುಗರಿಂದ ಒಪ್ಪಿಗೆಯನ್ನು ಪಡೆದುಕೊಂಡ ಕೂಡಲೇ ಅವರು ಜನತೆಯ ಬರಹಗಾರರಾದಂತೆ ಭಾವಿಸಲಾಗುತ್ತದೆ. ಆದರೆ ವಾಸ್ತವವಾಗಿ ನೂರಕ್ಕೆ ತೊಂಬತ್ತು ಭಾಗ ಈ ಮಧ್ಯಮ ವರ್ಗದ ಕಣ್ಣಿಗೇ ಬರದ ರೈತ-ಕಾರ್ಮಿಕರೇ ಮೊದಲಾದ ಇತರ ಶ್ರಮಜೀವಿಗಳನ್ನು ಅವರು ಗಮನಿಸುತ್ತಲೇ ಇಲ್ಲವೆಂಬ ಅಂಶ ಬೆಳಕಿಗೇ ಬರುವುದಿಲ್ಲ. ಹೀಗೆ ಗಮನಿಸದೇ ಇರುವುದೆಂದರೆ, ಸಾಹಿತಿ ತಪ್ಪುಮಾಡುತ್ತಿದ್ದಾನೆಂದಾಗಲೀ, ಆ ವರ್ಗದಿಂದ ಬರುವ ಬರಹಗಾರರಿಗೆ ರೈತ-ಕಾರ್ಮಿಕರ ಬಗೆಗೆ ಬರೆಯುವ ತಿಳಿಯುವ ಹಕ್ಕೇ ಇಲ್ಲವೆಂದಾಗಲೀ ಅರ್ಥವಲ್ಲ. ಮಧ್ಯಮವರ್ಗದ ಲೇಖಕನೊಬ್ಬ ಸದ್ಯಕ್ಕೆ ಇಬ್ಬಂದಿಯಾಗಿಯೇ ಇದ್ದಾನೆನ್ನುವುದು ನಮಗೆ ಮುಖ್ಯ. ಈ ಇಬ್ಬಂದಿತನಕ್ಕೆ ಕಾರಣಗಳನ್ನು ನಾವು ನಮ್ಮ ಸಮಾಜದಲ್ಲಿಯೂ, ಲೇಖಕನಲ್ಲಿಯೂ ಹುಡುಕಬಹುದು.

ಇಬ್ಬಂದಿತನಕ್ಕೆ ಕಾರಣ

ಲೇಖಕ ಪ್ರವಾದಿಯಾಗಿಯೂ ಹುಟ್ಟುವುದಿಲ್ಲ-ಬಂದೂಕನ್ನು ಹಿಡಿದು ಹೋರಾಡುವ ಕ್ರಾಂತಿಕಾರಿಯಾಗಿಯೂ ಹುಟ್ಟುವುದಿಲ್ಲ. ಸಮಾಜದಲ್ಲಿನ ಹೋರಾಟದ ಬೆಳವಣಿಗೆಯ ಜೊತೆ ಆ ಹೋರಾಟವೇ ಅವನನ್ನೂ ಬೆಳೆಸುತ್ತಾ ಹೋಗುತ್ತದೆ. ಕ್ರಾಂತಿಕಾರಿ ಹೋರಾಟದಲ್ಲಿ ಸಾಹಿತ್ಯಕ್ಕೆ ಒಂದು ಸ್ಥಾನವಿದೆ. ಅದನ್ನು ಸರಿಯಾಗಿ ಅರ್ಥೈಸಿಕೊಳ್ಳದಿದ್ದರೆ, ಸಾಹಿತ್ಯದಿಂದಲೇ ಕ್ರಾಂತಿ ಸಾಧ್ಯವೆಂಬ ಅಪಕ್ವ ತೀರ್ಮಾನಕ್ಕೋ ಸಾಹಿತ್ಯಕ್ಕೂ ಕ್ರಾಂತಿಗೂ ಸಂಬಂಧವಿಲ್ಲವೆಂಬ ಸಮಯಸಾಧಕತನಕ್ಕೋ ಹೋಗಿಬಿಡಬಹುದು. ಸಾಹಿತ್ಯ ಸಮಾಜದ ಮೇಲ್ಮೈ ರಚನೆಯ ಒಂದು ಅಂಶ. ಈ ಮೇಲ್ಮೈ ರಚನೆಯ ಅಂಶ ಸಮಾಜದ ಮೂಲ ರಚನಾಂಶವಾದ ಆರ್ಥಿಕರಚನೆಯ ಮೇಲೆ ತನ್ನ ಪ್ರಭಾವ ಪರಿಣಾಮಗಳನ್ನು ಉಂಟುಮಾಡುತ್ತಾ ಇರಲೂ ಬಹುದು. ಆದರೆ ಅದೇ ಮೂಲ ಸಮಸ್ಯೆಯ ಮೂಲೋತ್ಪಾಟನಕ್ಕೆ ದಾರಿಮಾಡಿಕೊಡುವುದಿಲ್ಲ. ಎಲ್ಲಿ ಕ್ರಾಂತಿಕಾರಿ ರಾಜಕೀಯ ಹೋರಾಟ ತೀವ್ರ ಸ್ವರೂಪವನ್ನು ತಳೆಯುತ್ತದೋ ಅಲ್ಲಿ ಸಾಹಿತ್ಯ ಚಟುವಟಿಕೆಯೂ ಕ್ರಾಂತಿಕಾರಿ ಸ್ವರೂಪವನ್ನು ತಾನಾಗಿ ಪಡೆದುಕೊಳ್ಳುತ್ತದೆ. ಇಬ್ಬಂದಿಗಳಾದ ಲೇಖಕರು ತಾವು ಯಾವ ಕಡೆಯವರು ಎಂಬುದನ್ನು ಗುರುತಿಸಿಕೊಳ್ಳುತ್ತಾರೆ. ಅನೇಕರು ಕ್ರಾಂತಿಕಾರಿ ಚಟುವಟಿಕೆಗಳ ಬೆಳವಣಿಗೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಾರೆ. ಕ್ರಾಂತಿಕಾರಿ ಸೈದ್ಧಾಂತಿಕ ಹೋರಾಟದ ಬೆಳವಣಿಗೆಯೇ ಇಲ್ಲದಿರುವ ಕಡೆ ಕ್ರಾಂತಿಕಾರಿ ಕವಿಗಳು ಸಾಹಿತಿಗಳು ಸೃಷ್ಟಿಯಾಗಬೇಕೆಂದು ಬೊಬ್ಬೆಹಾಕುವುದು ಮಂತ್ರಕ್ಕೆ ಮಾವಿನಕಾಯಿ ಉದುರಿಸಿದಂತೆ. ಕ್ರಾಂತಿಕಾರಿ ಹೋರಾಟದಲ್ಲಿ ಸಾಹಿತ್ಯ ಮತ್ತು ಕಲೆಗಳಿಗಿರುವ ಸ್ಥಾನವನ್ನು ವಿವರಿಸುತ್ತಾ ಅವು ಕ್ರಾಂತಿಯಂತ್ರದಲ್ಲಿ ಚಕ್ರದ ಹಲ್ಲು ಮತ್ತು ಸ್ಕ್ರೂಗಳಿದ್ದಹಾಗೆ (Cogs and screws) ಎಂದು ಲೆನಿನ್ ಅರ್ಥಪೂರ್ಣವಾಗಿ ಹೇಳಿದ್ದಾನೆ. ಅವುಗಳಿಲ್ಲದೆ ಯಂತ್ರ ಚಲಿಸಲಾರದು ನಿಜ. ಆದರೆ ಅವುಗಳೇ ಯಂತ್ರವೂ ಆಗುವುದಿಲ್ಲ. ಅಂದರೆ, ಕ್ರಾಂತಿಯಂತ್ರಚಾಲನೆಯ ಅವಿಭಾಜ್ಯ ಅಂಗಗಳಾಗಿ ಕಲೆ ಮತ್ತು ಸಾಹಿತ್ಯಗಳು ಕೆಲಸಮಾಡುವುದು ಅಗತ್ಯವಾಗುತ್ತದೆ. ಕ್ರಾಂತಿಗೆ ಸಿದ್ಧರಾಗಬೇಕಾದ ಜನತೆಯನ್ನು ತರಪೇತುಗೊಳಿಸುವಲ್ಲಿ, ಅವರನ್ನು ಹೊಳಹಿಕ್ಕುವಲ್ಲಿ ಅವುಗಳ ಪಾತ್ರ ಮಹತ್ತರವಾದದ್ದು. ಈ ಮಹತ್ತರ ಪಾತ್ರದ ನಿರ್ವಹಣೆಗೆ ಬೇಕಾಗಬಹುದಾದ ರಾಜಕೀಯ ಹೋರಾಟದ ಬೆಳವಣಿಗೆಯ ದಿಶೆಯಲ್ಲೂ ಲೇಖಕ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ.

ಹೋರಾಟ

ಭಾರತ ಅರ್ಥಾತ್ ಕರ್ನಾಟಕದಲ್ಲಿ ಲೇಖಕ ಬೇರೆ ಹೋರಾಟಗಾರನೇ ಬೇರೆ ಎಂದು ವಿಭಾಗಿಸಬರುವುದಿಲ್ಲ. ಎಚ್ಚೆತ್ತುಕೊಂಡ ಜನತೆ ಬಹಳಷ್ಟು ಕಡಿಮೆಸಂಖ್ಯೆಯಲ್ಲಿರುವಾಗ ಈ ಎರಡೂ ರಂಗಗಳಲ್ಲಿ ಒಬ್ಬನೇ ತೊಡಗಬೇಕಾಗುತ್ತದೆ. ಹೀಗೆ ತನ್ನನ್ನು ತೊಡಗಿಸಿಕೊಳ್ಳುವಾಗ ಬರಹಗಾರ ತನ್ನ ಹಿಂದಿನ ಬರಹಗಾರನಿಗಿಂತ ಬೇರೆಯವನೇ ಆಗಬೇಕಾಗುತ್ತದೆ. ಬರೆಯುವವನು ತನ್ನ ಅನುಭವಕ್ಕೆ ಮಾತ್ರ ಪ್ರಾಮಾಣಿಕನಾಗಿದ್ದರೆ ಸಾಕು ಎಂಬ ಮಾತೊಂದೇ ಇಲ್ಲಿ ಸಾಕಾಗುವುದಿಲ್ಲ. ಎಂದರೆ ಬರೆಯುವವನಿಗೆ ಅನುಭವ ಬೇಡ ಎಂದಲ್ಲ—ಆದ, ಬೇಕೇ ಬೇಕು. ಆದರೆ ಹಾಗೆ ಅನುಭವವನ್ನು ಕೊಡುವ ಘಟನೆಯ ಹಿಂದಿರುವ ಕಾರ್ಯಕಾರಣ ಸಂಬಂಧವನ್ನು—ಅಂತಹ ಘಟನೆಯು ನಡೆಯುವುದಕ್ಕೆ ಮೂಲವಾದ ಸಾಮಾಜಿಕ ವ್ಯವಸ್ಥೆಯ ಸ್ವರೂಪವನ್ನೂ ಒಳಹೊಕ್ಕು ತಿಳಿಯುವ ಶ್ರಮವನ್ನೂ ವಹಿಸಬೇಕಾಗುತ್ತದೆ. ಮನುಷ್ಯ ಚರಿತ್ರೆಯ ಸತ್ಯಸಂಗತಿಗಳನ್ನು ಶೋಧಿಸುವ ವಿಜ್ಞಾನಿಯೂ ಆಗಬೇಕಾಗುತ್ತದೆ. ಅಪೂರ್ಣವಾದ ದೃಷ್ಟಿಯಿಂದ ಗ್ರಹಿಸಿದ ಅನುಭವವೇ ಉತ್ತಮ ಸಾಹಿತ್ಯವಾಗಿದೆ ಎಂದು ಹೇಳುವುದಾದರೆ, ಚಾರಿತ್ರಿಕ ದೃಷ್ಟಿಕೋನದಿಂದ ಗ್ರಹಿಸಿದ ಅನುಭವ ಮತ್ತೂ ಉತ್ತಮ ಸಾಹಿತ್ಯವಾಗಬಹುದು. ಆಗಲಾರದು ಎಂದು ವಾದಿಸುವವರಿಗೆ ಮನುಷ್ಯಜನಾಂಗಕ್ಕೆ ಹಿತ ಕೋರುವುದು ಇಷ್ಟವಿಲ್ಲವೆಂಧಷ್ಟೆ ತಿಳಿಯಬೇಕಾಗುತ್ತದೆ. ಇಂತಹದೊಂದು ದೃಷ್ಟಿಕೋನವನ್ನು ಪಡೆದು ಕಣ್ಣಿಟ್ಟ ಲೇಖಕನಿಗೆ ಜನತೆಯನಡುವೆ ಸುಲಭವಾಗಿ ಜಾಗ ಸಿಕ್ಕುತ್ತದೆ.

ಜನತೆಯ ನಡುವೆ

ಜನತೆಯ ನಡುವೆ ಲೇಖಕನಿಗೆ ಸುಲಭವಾಗಿ ಜಾಗ ಸಿಗುತ್ತದೆ ಎಂದೆ. ಹೌದು. ಯಾವ ಬರಹಗಾರ ತನ್ನ ವರ್ಗವೊಂದನ್ನೇ ಗಮನಿಸದೆ, ಶೋಷಿತರಾಗಿರುವ ಬಹುಪಾಲು ಜನತೆಯನ್ನು ಚರಿತ್ರೆಯನಿರ್ಮಾಪಕರೆಂದೂ, ಅವರನ್ನೇ ನಿಜವಾದ ಬದುಕಿನ ಮೂಲನೆಲೆ ಎಂದೂ ತಿಳಿದು ಬರೆಯಲು ನಿರ್ಧರಿಸುತ್ತಾನೋ ಅವನಿಗೆ ಅದು ಸುಲಭವಾಗುತ್ತದೆ. ಹೀಗೆಂದಾಕ್ಷಣಕ್ಕೆ ಅವನಿಗೆ ಸರ್ವಜ್ಞತ್ವಪ್ರಾಪ್ತಿಯಾಯಿತೆಂದು ಯಾರೂ ಹೇಳವುದಿಲ್ಲ. ಒಬ್ಬ ಸಂಪ್ರದಾಯವಾದಿ ಬರಹಗಾರ ತನ್ನ ಸಂವೇದನೆಗಳನ್ನು ಹೊರಹಾಕಲು ಒಂದು ರೂಪವನ್ನು ಕಲಾತ್ಮಕವಾಗಿ ಸೃಷ್ಟಿಸಿಕೊಳ್ಳಲು ಏನೆಲ್ಲಾ ಕಷ್ಟ ಪಡುತ್ತಾನೋ ಅದಕ್ಕಿಂತ ಹೆಚ್ಚಿನ ಕಷ್ಟವನ್ನು ಜನತೆಯ ಬರಹಗಾರ ಪಡೆಯಬೇಕಾಗುತ್ತದೆ. ಏಕೆಂದರೆ ಸಾಂಪ್ರದಾಯಿಕ ಬರಹಗಾರನಿಗೆ ಈಗಾಗಲೇ ತರಬೇತು ಪಡೆದ ಒಂದು ಸಿದ್ಧ ಓದುಗರ ಗುಂಪಿದೆ. ಆದರೆ ಕ್ರಾಂತಿಕಾರಿ ಬರಹಗಾರನಿಗೆ, ಅಕ್ಷರಬಲ್ಲ, ಬರದಿರುವ, ಆದರೆ ಸಾಹಿತ್ಯಕ್ಕೆ ದೂರವಾಗಿರುವ, ಸಿದ್ಧಗೊಳಿಸಬೇಕಾದ ಓದುಗರು ದೇಶದ ತುಂಬೆಲ್ಲಾ ಹರಡಿದ್ದಾರೆ. ಇವರಿಗೆ ಅರಿವಾಗುವಂತೆ, ಶಕ್ತಿಪೂರ್ಣವಾಗಿ ಕಲಾತ್ಮಕತೆಗೆ ಭಂಗಬಾರದಂತೆ ಹೇಳುವ ಜವಾಬ್ದಾರಿ ಅವನ ಹೆಗಲ ಮೇಲಿದೆ. ಇದು ಸಾಧ್ಯವಾಗುವುದು ಹೇಗೆ ಎನ್ನುವುದೇ ಮುಖ್ಯಪ್ರಶ್ನೆ.

ಹೇಗೆ ಸಾಧ್ಯ?

ಶೋಷಿತರನ್ನು ಕುರಿತು ಬರೆಯುವವನು ಶೋಷಿತರೆಲ್ಲಾ ಪರಿನಾರಾಣೆ ಒಳ್ಳೆಯವರು, ಶೋಷಕರೆಲ್ಲಾ ಕೆಟ್ಟವರು ಎಂದು ಸರಳೀಕರಿಸುವುದಾದರೆ, ಮನುಷ್ಯರನ್ನು ಈ ಬರಹಗಾರ ಗಮನಿಸಿಲ್ಲ ಎಂದಷ್ಟೆ ಮಾತ್ರವಲ್ಲ, ಅವನು ಕ್ರಾಂತಿಕಾರಿ ಹೋರಾಟಕ್ಕೆ ಹಿನ್ನಡೆಯನ್ನೊದಗಿಸುತ್ತಿದ್ದಾನೆಂದೂ ಅರ್ಥ. ಶೋಷಕ ಶೋಷಿತರಿಬ್ಬರಲ್ಲೂ ಇರುವ ಮಾನವಸಹಜವಾದ ಗುಣದೋಷಗಳ ಜೊತೆಗೇ ಅವರವರಲ್ಲಿರುವ ವರ್ಗಪ್ರಜ್ಞೆಗಳು ಹೇಗೆ ಕೆಲಸಮಾಡಿ ಸಮಾಜದ ಚಲನೆಗೆ ಕಾರಣವಾಗುತ್ತಿವೆ ಎಂಬುದನ್ನು ಗ್ರಹಿಸುವುದು ಮುಖ್ಯವಾಗುತ್ತದೆ. ಶೋಷಕ ಸಮಾಜದ ಅನೇಕ ಮುಖವಾಡಗಳನ್ನು, ತಂತ್ರಗಳನ್ನು, ಅವುಗಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು ಬಹಳ ಕುಶಲತೆಯಿಂದ ಬಿಡಿಸಬೇಕಾಗುತ್ತದೆ. ಶೋಷಿತ ಎಂದಕೂಡಲೇ ಸದಾ ಅಳುವ, ನೋವಿನಿಂದ ಕೂಡಿದ, ಶಕ್ತಿಹೀನ ಮನುಷ್ಯ ಎಂದು ತಿಳಿಯುವುದಕ್ಕೆ ಬದಲಾಗಿ, ತುಳಿತದ ನಡುವೆಯೂ ಬದುಕನ್ನು ಅದರ ಚೆಲುವನ್ನು ಸವಿಯುವ ಮಾನವ ಶಕ್ತಿಯ ಅದಮ್ಯ ಚೈತನ್ಯ ಅವನಲ್ಲಿದೆ ಎಂಬುದನ್ನು ಗುರುತಿಸಿ, ಅದೇ ಹೋರಾಟಕ್ಕೆ ನಿರಂತರ ನೆಲೆ ಎಂಬುದನ್ನು ಅನಾವರಣಗೊಳಿಸಬೇಕಾಗುತ್ತದೆ. ಮಾನವ ಸಮಾಜಕ್ಕೆ ಇಂತಹ ಅನನ್ಯ ಸೇವೆಯನ್ನು ಬರಹಗಾರ ಸಲ್ಲಿಸಬೇಕಾದರೆ, ಆ ಜನತೆಯ ಆಗುಹೋಗುಗಳಲ್ಲಿ, ದುಃಖದುಮ್ಮಾನಗಳಲ್ಲಿ ಹೋರಾಟಗಳಲ್ಲಿ ತನ್ನ ಪಾಲನ್ನು ಹೆಚ್ಚಿಸಿಕೊಳ್ಳಬೇಕು. ಲಕ್ಷಾಂತರ ಮಂದಿ ಕಾರ್ಖಾನೆ ಕೂಲಿಗಾರರ, ಕೃಷಿಕೂಲಿಗಾರರ, ಇತರ ಶ್ರಮಜೀವಿಗಳ ಬದುಕು ಇನ್ನೂ ಸಾಹಿತ್ಯ ಲೋಕಕ್ಕೆ ವಸ್ತುವಾಗಿ ಬರಬೇಕಾಗಿದೆ. ವಸ್ತು ಮಹತ್ವಪೂರ್ಣವಾದದ್ದೆಂದಾಕ್ಷಣ ಕೃತಿ ಉತ್ತಮವಾಯಿತೆನ್ನುವಂತಿಲ್ಲ. ಆ ಉತ್ತಮ ವಸ್ತುವನ್ನು ಉತ್ತಮವಾಗಿ ಹೇಳುವುದೂ ಅಗತ್ಯವಾಗುತ್ತದೆ.

(23ನೇ ಪುಟಕ್ಕೆ)

ಅಖಿಲ ಭಾರತ ಕಿಸಾನ್ ಸಭೆಯ ನೂತನ ಅಧ್ಯಕ್ಷ

ಕಾಂ. ಬಿನೊಯ್ ಚೌಧುರಿ ಭಾಷಣ

ಪಶ್ಚಿಮ ಬಂಗಾಳದ ಕಿಸಾನ್ ಸಭೆಯ ಅಧ್ಯಕ್ಷರೂ ಮತ್ತು ಆ ರಾಜ್ಯದ ಎಡರಂಗ ಸರಕಾರದ ಭೂಕಂದಾಯ ಮಂತ್ರಿಯೂ ಆಗಿರುವ ಕಾಂ. ಬಿನೊಯ್ ಕೃಷ್ಣ ಚೌಧುರಿಯವರನ್ನು ಅಖಿಲ ಭಾರತ ಕಿಸಾನ್ ಸಭೆಯ 23ನೇ ಸಮ್ಮೇಳನದಲ್ಲಿ ನೂತನ ಅಧ್ಯಕ್ಷರನ್ನಾಗಿ ಆರಿಸಿದ ಕೂಡಲೇ ಕಾಂ. ಚೌಧುರಿಯವರು ಪ್ರತಿನಿಧಿಗಳ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣದ ಭಾವಾನುವಾದವನ್ನು ಇಲ್ಲಿ ಪ್ರಕಟಿಸಲಾಗಿದೆ.

ಕಾಮ್ರೇಡ್ ಪ್ರತಿನಿಧಿಗಳೇ,

ದೇಶದ ಸಧ್ಯದ ಸಂದಿಗ್ಧ ಪರಿಸ್ಥಿತಿಯಲ್ಲಿ ಕಿಸಾನ್ ಸಭೆಯಿಂದ ಜನಕೋಟಿ ಬಹಳಷ್ಟು ನಿರೀಕ್ಷಿಸುತ್ತಿರುವಾಗ ಮತ್ತು ಎರಡು ದಶಕಗಳಿಂದ ಅಖಿಲ ಭಾರತ ಕಿಸಾನ್ ಸಭೆಯ ಅಧ್ಯಕ್ಷತೆಯನ್ನು ಅತ್ಯಂತ ದಕ್ಷತೆಯಿಂದ ವಹಿಸಿಕೊಂಡು ಬಂದಿರುವ ಮಹಾನ್ ವ್ಯಕ್ತಿ ಎ. ಕೆ. ಜಿ. ಕಣ್ಮರೆಯಾಗಿರುವಾಗ, ನನ್ನ ಮೇಲೆ ಹೊಸತಾಗಿ ಹೊರಿಸಿರುವ ಅಧ್ಯಕ್ಷತೆಯ ಮಹತ್ವದ ಹೊಣೆಗಾರಿಕೆಯನ್ನು ನಾನು ಚೆನ್ನಾಗಿ ಅರಿತಿದ್ದೇನೆ; ನನ್ನ ಇತಿಮಿತಿಗಳನ್ನೂ ಕುಂದುಕೊರತೆಗಳನ್ನೂ ನಾನು ತಿಳಿದಿದ್ದೇನೆ. ಆದರೆ, ನೀವೆಲ್ಲರೂ ನಿಶ್ಚಯಿಸಿದ ಮೇಲೆ, ನಾನು ನಿಮ್ಮ ನಿಶ್ಚಯದಂತೆ ನಡೆದುಕೊಳ್ಳುವುದು ಅನಿವಾರ್ಯವಾಗಿದೆ. ನಿಮ್ಮ ಸಹಾಯ ಮತ್ತು ಸಹಕಾರದಿಂದ ನನ್ನ ಜವಾಬ್ದಾರಿಯನ್ನು ಶಕ್ತಿಮೀರಿ ನಿರ್ವಹಿಸಲು ಪ್ರಯತ್ನಿಸುತ್ತೇನೆ. ನೀವೆಲ್ಲರೂ ನನ್ನಲ್ಲಿಟ್ಟ ಭರವಸೆಗಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. ನಿಮ್ಮ ಭರವಸೆಗೆ ಸತ್‌ಪಾತ್ರನಾಗಲು ನಾನು ಪ್ರಯತ್ನಿಸುತ್ತೇನೆಂದು ಭರವಸೆ ನೀಡುತ್ತೇನೆ. ಪರಿಣಾಮಕಾರಿಯಾದ ಸಾಮುದಾಯಿಕ ಧುರೀಣತ್ವವನ್ನು ಬೆಳೆಸಲು ನಾವೆಲ್ಲರೂ ಪ್ರಯತ್ನಿಸೋಣ ಎಂದು ನಾನು ಹಾರೈಸುತ್ತೇನೆ. ಈ ಕಾರ್ಯಭಾರವನ್ನು ಸಮರ್ಪಕವಾಗಿ ನಿರ್ವಹಿಸಲು ಇದೊಂದೇ ಮಾರ್ಗ ಎಂದು ನಾನು ತಿಳಿಯುತ್ತೇನೆ.

ನಿಮಗೆಲ್ಲರಿಗೂ ತಿಳಿದಿರುವಂತೆ, ಪಶ್ಚಿಮ ಬಂಗಾಳದಲ್ಲಿ ಕಿಸಾನ್ ಚಳವಳಿವು ಅತ್ಯಂತ ಕಷ್ಟಕಾರ್ಪಣ್ಯಗಳ ಸತ್ವಪರೀಕ್ಷೆಗೆ ಒಳಗಾಗಬೇಕಿತ್ತು. ಆದರೂ ಅದು ಎಲ್ಲಾ ವಿಧದ ದಮನಕಾರಿ ಕೃತ್ಯಗಳನ್ನು ಮೆಟ್ಟಿನಿಲ್ಲುವಷ್ಟು ಸಶಕ್ತವಾಗಿದ್ದು 1977ರ ಚುನಾವಣೆಯಲ್ಲಿ ಎಡರಂಗದ ವಿಜಯಕ್ಕೆ ಮಹತ್ತರ ಕೊಡುಗೆಯನ್ನಿತ್ತಿದೆ. ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ವಿದ್ಯಮಾನಗಳ ಕುರಿತಾಗಲೀ, ಇಡೀ ದೇಶದ ಕೃಷಿವಲಯದ ಕುರಿತು ವ್ಯಾಪಕವಾದ ವಿಮರ್ಶೆಯನ್ನಾಗಲೀ ನಾನು ವಿವರಿಸಹೋಗುವುದಿಲ್ಲ. ಕಾರಣ ಅವೆಲ್ಲವುಗಳ ಕುರಿತು ಪ್ರಧಾನ ಕಾರ್ಯದರ್ಶಿಯ ವರದಿಯಲ್ಲಿ ತಿಳಿಸಲಾಗಿದೆ.

ಎಡರಂಗ ಸರಕಾರದ ಸಾಧನೆ :

ಪ. ಬಂಗಾಳದಲ್ಲಿ ಎಡರಂಗ ಸರಕಾರವಿರುವುದರಿಂದ, ನಾವು ಅಲ್ಲಿ ಏನು ಮಾಡುತ್ತಿದ್ದೇವೆ ಎನ್ನುವುದನ್ನು ತಿಳಿಯಲು ಹೆಚ್ಚಿನ ಒಡನಾಡಿಗಳು ಸಹಜವಾಗಿಯೇ ಆಸಕ್ತರಾಗಿರಬಹುದು. ಆ ವಿಷಯದ ಕುರಿತು ತಿಳಿಯಪಡಿಸಲು ನಾನು ಸ್ವಲ್ಪ ಸಮಯ ತೆಗೆದುಕೊಳ್ಳುತ್ತೇನೆ. ಮೊತ್ತಮೊದಲಿಗೆ ನಾನು ನಿಮಗೆ ತಿಳಿಸಬಯಸುವುದೇನೆಂದರೆ, ನಮಗೆಲ್ಲರಿಗೂ ತಿಳಿದಿರುವಂತೆ, ರಾಜ್ಯ ಸರಕಾರದ ಅಧಿಕಾರ ಪರಿಮಿತಿಯಿಂದಾಗಿ ಮತ್ತು ವ್ಯವಸ್ಥೆಯಲ್ಲಿ ಅಡಕವಾಗಿರುವ ಇತರ ಅನೇಕ ಅಡಚಣೆಗಳಿಂದಾಗಿ ಈ ವಿಷಯದಲ್ಲಿ ಚಮತ್ಕಾರವನ್ನೇನೂ ನಾವು ನಿರೀಕ್ಷಿಸಬಾರದು. ಈ ರಾಜ್ಯದಲ್ಲಿ ಕಿಸಾನ್ ಚಳವಳವು ಬೆಳೆದು ಬರಲು ಎಡರಂಗ ಸರಕಾರವು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆ ಕುರಿತು ಒಂದು ಸಂಕ್ಷಿಪ್ತ ಸಮೀಕ್ಷೆಯನ್ನು ನೀಡಲು ಅನೇಕ ಒಡನಾಡಿಗಳು ನನ್ನನ್ನು ಕೇಳಿಕೊಂಡಿರುವರು.

ಎಡರಂಗ ಸರಕಾರ ರಚನೆಯಾದ ಕೂಡಲೇ, ಪಾಲುಬೆಳೆಗಾರರನ್ನು (Share croppers) ಒಕ್ಕಲೆಬ್ಬಿಸುವುದರ ವಿರುದ್ಧ ಮತ್ತು ಅವರ ಹಕ್ಕುಗಳನ್ನು ರಕ್ಷಿಸಲು 1977ರ ಸೆಪ್ಟೆಂಬರ್‌ನಲ್ಲಿ ಒಂದು ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಲಾಯಿತು. ಮಸೂದೆಯ ಮುಖ್ಯಾಂಶಗಳು ಹೀಗಿವೆ: 'ಸ್ವಂತ ವ್ಯವಸಾಯ'ದ ವಿವರಣೆಯನ್ನು ತಿದ್ದುಪಡಿಮಾಡಲಾಯಿತು. ಅದರಂತೆ, ಭೂಮಾಲಕನು ಈ ಕೆಳಗಿನ ಮೂರು ಶರತ್ತುಗಳನ್ನು ಈಡೇರಿಸದಿದ್ದರೆ, ಅವನು 'ಸ್ವಂತ ವ್ಯವಸಾಯ'ಕ್ಕೆಂದು ತನ್ನ ಭೂಮಿಯನ್ನು ಪಾಲುಬೆಳೆಗಾರರಿಂದ ಬಿಡಿಸಿಕೊಳ್ಳುವಂತಿಲ್ಲ. 1. ಅವನು ವರುಷದ ಬಹುಕಾಲ ತನ್ನ ಭೂಮಿ ಇರುವಲ್ಲಿಂದ ಎಂಟು ಕಿಲೋಮೀಟರ್ ಒಳಗೇ ವಾಸಿಸುತ್ತಿರಬೇಕು; 2. ಅವನ ಜೀವನದ ಮುಖ್ಯ ಆಧಾರವು ಅವನ ಭೂಮಿಯಿಂದಾಗಿರಬೇಕು ಮತ್ತು ಅವನಿಗೆ ಸಾಕಷ್ಟು ಆದಾಯ ಸಿಗುವ ಇತರ ಯಾವ ಮೂಲವೂ ಇರಕೂಡದು; 3. ಭೂಮಿಯನ್ನು ಸ್ವಾಧೀನ ಪಡಿಸಿಕೊಂಡ ದಿನದಿಂದ ಅದನ್ನು ಅವನೇ ಅವನ ಕುಟುಂಬದ ಸದಸ್ಯರೊಂದಿಗೆ ವ್ಯವಸಾಯ ಮಾಡಬೇಕು.

ಒಬ್ಬ ವ್ಯಕ್ತಿಯು ಬೇರೆಯವನ ಭೂಮಿಯನ್ನು ವ್ಯವಸಾಯ ಮಾಡುತ್ತಿದ್ದರೆ, ಆತನು ಭೂಮಾಲಕನ ಕುಟುಂಬದ ಸದಸ್ಯನಲ್ಲವಾದರೆ, ಅವನನ್ನು ಪಾಲು ಬೆಳೆಗಾರನೆಂದು ಭಾವಿಸುವ ವಿಶೇಷ ಏರ್ಪಾಡು ಹೊಸ ಭೂಮಸೂದೆಯಲ್ಲಿದೆ. ಅಂತಹ ವ್ಯಕ್ತಿಯು ಪಾಲು ಬೆಳೆಗಾರನಲ್ಲ ಎಂದು ಸಾಬೀತು ಪಡಿಸುವ ಜವಾಬ್ದಾರಿಯು ಭೂಮಾಲಕನ ಮೇಲೆಯೇ ಇರುವುದು.

ಫಸಲಿನಲ್ಲಿ ಪಾಲುಬೆಳೆಗಾರನಿಂದ ಭೂಮಾಲಕನು ತನ್ನ ಪಾಲು ಪಡೆದಾಗ ಅದಕ್ಕೆ ಸರಿಯಾದ ರಶೀದಿ ಕೊಡಬೇಕು. ಅವನು ರಶೀದಿ ಕೊಡದಿದ್ದರೆ, ಅದು ನ್ಯಾಯ ವಿಚಾರಣೆಗೊಳಗಾಗುವ ಅಪರಾಧವಾಗುವುದು ಮತ್ತು ಅದಕ್ಕನುಗುಣವಾಗಿ ಅವನಿಗೆ ರೂ. 1000 ಜುಲುಮಾನೆ ಅಥವಾ ಒಂದು ವರುಷದ ಸೆರೆಮನೆವಾಸ ಅಥವಾ ಈ ಎರಡೂ ಶಿಕ್ಷೆಗಳನ್ನು ವಿಧಿಸಲಾಗುವುದು. ಈ ತಿದ್ದುಪಡಿ ಮಸೂದೆಯು ರಾಜ್ಯ ವಿಧಾನಸಭೆಯಲ್ಲಿ ಅಂಗೀಕಾರವಾದ ಮೇಲೆ, ರಾಷ್ಟ್ರಾಧ್ಯಕ್ಷರ ಸಮ್ಮತಿ ಪಡೆಯಲು ಆರು ತಿಂಗಳು ಬೇಕಾಯಿತು.

ಪಾಲು ಬೆಳೆಗಾರರ ದಾಖಲಾತಿ :

ಪಾಲು ಬೆಳೆಗಾರರನ್ನು ದಾಖಲಾತಿ ಮಾಡಿಕೊಳ್ಳುವ ಕಾರ್ಯಕ್ರಮವು-ಈಗಾಗಲೇ ತಿಳಿದಿರುವಂತೆ 'Operation Barga' ಎಂಬ ವಿಶೇಷ ಕಾರ್ಯಕ್ರಮವು ತ್ವರಿತ ವಿಧಾನದಿಂದ ನಡೆಯುತ್ತಿದೆ. ಮೊದಲು ಪಾಲು ಬೆಳೆಗಾರರು ಹೆಚ್ಚು ಸಂಖ್ಯೆಯಲ್ಲಿ ಇರುವ ಕ್ಷೇತ್ರಗಳನ್ನು ಗುರುತಿಸಲಾಗುವುದು. ನಂತರ ಅಂತಹ ಪ್ರತಿಯೊಂದು ಕ್ಷೇತ್ರಕ್ಕೂ ಅಧಿಕಾರಿಗಳ ಒಂದು ತಂಡವನ್ನು ಕಳಿಸಲಾಗುವುದು. ಅಧಿಕಾರಿಗಳು ಅಲ್ಲಿನ ಕಿಸಾನ್‌ಸಭಾ ಮತ್ತು ಪಂಚಾಯತುಗಳ ಸಹಾಯದಿಂದ ಪಾಲು ಬೆಳೆಗಾರರನ್ನು ಗುರುತಿಸಿ ದಾಖಲೆ ಮಾಡಿಕೊಳ್ಳುವರು. ಇತ್ತೀಚಿಯ ಅಂಕೆ ಸಂಖ್ಯೆಗಳಂತೆ, ಎಡರಂಗ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಸುಮಾರು 275000 ಹೊಸ ಪಾಲು ಬೆಳೆಗಾರರನ್ನು ದಾಖಲೆ ಮಾಡಿಕೊಳ್ಳಲಾಯಿತು. ಎಡರಂಗ ಸರಕಾರ ಅಧಿಕಾರಕ್ಕೆ ಬರುವ ಮೊದಲು ಕಾಂಗ್ರೆಸ್ ಅಧಿಕಾರಾವಧಿಯ ಎಲ್ಲಾ ವರುಷಗಳಲ್ಲಿ ಒಟ್ಟಿಗೆ ಕೇವಲ 325000 ಪಾಲು ಬೆಳೆಗಾರರನ್ನು ದಾಖಲೆ ಮಾಡಿಕೊಳ್ಳಲಾಗಿತ್ತು. ಎಡರಂಗ ಸರಕಾರವು ಪಾಲು ಬೆಳೆಗಾರರ ದಾಖಲಾತಿಯನ್ನು ಈ ವರ್ಷಾಂತ್ಯದಲ್ಲಿಯೇ ಪೂರ್ಣಗೊಳಿಸಲು ಪ್ರಯತ್ನಿಸುತ್ತಿದೆ. (ಒಟ್ಟು ಪಾಲು ಬೆಳೆಗಾರರ ಸಂಖ್ಯೆ ಸುಮಾರು 20 ಲಕ್ಷ : ಅನುವಾದಕ)

ನಿಮಗೆಲ್ಲರಿಗೂ ತಿಳಿದಿರುವಂತೆ, ಪಾಲು ಬೆಳೆಗಾರರು ತಮ್ಮ ದಿನಬಳಕೆಯ ಮತ್ತು ವ್ಯವಸಾಯದ ಸಾಲಗಳಿಗಾಗಿ ಹೆಚ್ಚಾಗಿ ಭೂಮಾಲಕರನ್ನೇ ಅವಲಂಬಿಸಿರಬೇಕಾಗುವುದು. ಇಂತಹ ಸಾಲಗಳ ಬಂಧನದಿಂದ ಅವರನ್ನು ಮುಕ್ತಗೊಳಿಸಲು ರಾಷ್ಟ್ರೀಕೃತ ಹಾಗೂ ಇತರ ವ್ಯಾಪಾರೀ ಬ್ಯಾಂಕುಗಳಿಂದ ಸ್ವಲ್ಪಮಟ್ಟಿಗೆ ಅವರಿಗೆ ಸಾಲಸೌಲಭ್ಯಗಳನ್ನು ಒದಗಿಸಿಕೊಡಲು ರಾಜ್ಯ ಸರಕಾರ ಪ್ರಯತ್ನಿಸುತ್ತಿದೆ. ದಾಖಲಾತಿಯಾಗಿರುವ ಪಾಲುಬೆಳೆಗಾರರಿಗೆ ಸಾಲ ಕೊಡಲು ಬ್ಯಾಂಕುಗಳು ಒಪ್ಪಿವೆ. ಆದರೆ, ಇದು ತನಕ ಅವರಲ್ಲಿ ಅತ್ಯಲ್ಪ ಜನರಿಗೆ ಇಂತಹ ಬದಲೀ ಮೂಲಗಳಿಂದ ಸಾಲಕೊಡಿಸಲಾಗಿದೆ. ಎಡರಂಗ ಸರಕಾರವು ಈ ಸೌಕರ್ಯವನ್ನು ವಿಸ್ತರಿಸಲು ಪ್ರಯತ್ನಿಸುತ್ತಿದೆ. ಪಾಲು ಬೆಳೆಗಾರರಿಗೆ ನೀಡುವ ಸಾಲದ ಮೇಲಿನ ಬಡ್ಡಿದರವನ್ನು ಶೇ. 4ಕ್ಕೆ ಇಳಿಸಲು ಸರಕಾರ ಪ್ರಯತ್ನಿಸುತ್ತಿದೆ. ಸಾಲವನ್ನು ಮರು ವರುಷದ ಮಾರ್ಚ್ 31ರ ಒಳಗೆ ಮರುಪಾವತಿ ಮಾಡಿದರೆ, ಅದರ ಮೇಲಿನ ಬಡ್ಡಿಯನ್ನು ಸರಕಾರವೇ ತೆರುವುದೆಂದು ನಿರ್ಧರಿಸಲಾಗಿದೆ.

ಕೃಷಿ ಕೂಲಿಕಾರರ ಕುರಿತಾಗಿ ಹೇಳುವುದಾದರೆ, ಕನಿಷ್ಟ ಕೂಲಿ ಕಾಯಿದೆಯಂತೆ ನಿಗದಿಯಾದ ರೂ. 8–10ನ್ನು ಜಾರಿಗೆ ತರಲು ನಾವು ಪ್ರಯತ್ನಿಸುತ್ತಿದ್ದೇವೆ. ಆದರೆ, ಹೈಕೋರ್ಟಿನ ತಡೆಯಾಜ್ಞೆಯಿಂದಾಗಿ ಈ ವಿಷಯದಲ್ಲಿ ತೊಂದರೆಗಳಿವೆ. ಕನಿಷ್ಟ ಕೂಲಿ ಕಾಯಿದೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿ ಕೃಷಿಕೂಲಿಕಾರರು ಮುಷ್ಕರಗಳೂ ಸೇರಿದಂತೆ ಹೋರಾಟಗಳನ್ನು ನಡೆಸುತ್ತಿದ್ದಾರೆ. ಇದರಿಂದಾಗಿ, ಸರ್ವಸಾಮಾನ್ಯವಾಗಿ ಪ್ರತಿಯೊಂದು ಪ್ರದೇಶದಲ್ಲಿಯೂ ಕನಿಷ್ಟ ಕೂಲಿದರವು ರೂ. 2 ರಿಂದ ರೂ. 3 ರಷ್ಟು ಹೆಚ್ಚಾಗಿದೆ. ಆದರೆ ಕೆಲವೇ ಕಡೆಗಳಲ್ಲಿ ತುಂಬಾ ಕೆಲಸದ ಸಮಯದಲ್ಲಿ ಕನಿಷ್ಟಕೂಲಿ ರೂ. 8ಕ್ಕೇರಿಸಬಹುದಾಗಿತ್ತು, ಅಷ್ಟೆ. ಹೆಚ್ಚಿನ ಪ್ರದೇಶಗಳಲ್ಲಿ ಊಟ, ಕಾಫಿ–ತಿಂಡಿ ಸಹಿತ ಕೂಲಿದರ ರೂ. 6 ರಿಂದ 7ರ ವರೆಗೆ ಚಾಲ್ತಿಯಲ್ಲಿದೆ. ಅತ್ಯಂತ ಹಿಂದುಳಿದ ಕೆಲವೇ ಪ್ರದೇಶಗಳಲ್ಲಿ ಕೂಲಿ ದರವು ಇದಕ್ಕಿಂತಲೂ ಕಡಿಮೆಯಾಗಿದೆ.

ಹೆಚ್ಚು ಕೆಲಸವಿಲ್ಲದ ಕಾಲದಲ್ಲಿ 'ಕೆಲಸಕ್ಕೆ ಆಹಾರ' (Food for work) ಕಾರ್ಯಕ್ರಮವು ಕೃಷಿಕೂಲಿಗಾರರಿಗೆ ಅತ್ಯಂತ ಸಹಾಯಕವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯತುಗಳ ಮೂಲಕ 'ಕೆಲಸಕ್ಕಾಗಿ ಆಹಾರ' ಕಾರ್ಯಕ್ರಮವನ್ನು ಭಾರೀ ಪ್ರಮಾಣದಲ್ಲಿ ನೆರವೇರಿಸುತ್ತಿರುವುದರಿಂದ, ಕೃಷಿಕೂಲಿಕಾರರು ಭೂಮಾಲಕರ ಅಧೀನದಲ್ಲಿ ಉಳಿದು ಉಪವಾಸ ಸಾಯಬೇಕಾಗಿಲ್ಲ. ಈ ಹೊಸ ಕಾರ್ಯಕ್ರಮವು ಅವರ ಹೋರಾಟಕ್ಕೆ ಅಪ್ರತ್ಯಕ್ಷವಾಗಿ ನೆರವಾಗುವುದು.

ವರ್ಗೀಕರಿಸಿದ ಭೂಕಂದಾಯ :

ನಿಮಗೆಲ್ಲರಿಗೂ ತಿಳಿದಿರುವಂತೆ, ನಾಲ್ಕು ಎಕರೆಗಳ ವರೆಗಿನ ನೀರಾವರಿ ಇರುವ ಭೂಹಿಡುವಳಿಗಳನ್ನೂ ಮತ್ತು ಆರು ಎಕರೆಗಳ ವರೆಗಿನ ನೀರಾವರಿ ಇಲ್ಲದ ಭೂಹಿಡುವಳಿಗಳನ್ನೂ ಭೂಕಂದಾಯದಿಂದ ವಿನಾಯತಿಗೊಳಿಸಲಾಗಿದೆ. ಭೂಕಂದಾಯ ತೆರಬೇಕಾದ ಇತರ ಹಿಡುವಳಿಗಳ ಮೇಲಿನ ಕಂದಾಯವನ್ನು ಅರ್ಧದಷ್ಟು ಇಳಿಸಲಾಗಿದೆ. ಕಾರಣ, ಹಿಂದೆ ಕಾಂಗ್ರೆಸ್ ಆಳ್ವಿಕೆಯಲ್ಲಿ ಭೂಕಂದಾಯವನ್ನು ನೀರಾವರಿ ಪ್ರದೇಶಗಳಲ್ಲಿ ಮೂರು ಪಾಲು ಮತ್ತು ನೀರಾವರಿ ಇಲ್ಲದಿರುವ ಪ್ರದೇಶಗಳಲ್ಲಿ ಎರಡು ಪಾಲು ಹೆಚ್ಚಿಸಲಾಗಿತ್ತು. ರೂ. 50000 ದವರೆಗೆ ಬೆಲೆ ಬಾಳುವ ಭೂಹಿಡುವಳಿಗಳಿಗೆ ಭೂಕಂದಾಯ ವಿನಾಯತಿ ನೀಡುವ ಒಂದು ಮಸೂದೆಯನ್ನು ಸರಕಾರವು ಈಗಾಗಲೇ ತಂದಿದೆ. ಅದು ಸಿಲೆಕ್ಟ್ ಕಮಿಟಿಯ ಪರಿಶೀಲನೆಯಲ್ಲಿದೆ. ಇವುಗಳಿಗಿಂತಲೂ ಹೆಚ್ಚು ಬೆಲೆಬಾಳುವ ಭೂಹಿಡುವಳಿಗಳಿಗೆ ವರ್ಗೀಕರಿಸಿದ ದರಗಳಲ್ಲಿ ಕಂದಾಯ ನಿರ್ಧರಿಸಲಾಗುವುದು.

ಭೂಸಮಸ್ಯೆಯ ಪರಿಸ್ಥಿತಿಯ ಕುರಿತು ಅನೇಕ ಒಡನಾಡಿಗಳು ತಿಳಿಯಲು ಆಸಕ್ತರಾಗಿರಬಹುದು. ನಿಮಗೆಲ್ಲರಿಗೂ ತಿಳಿದಿರುವಂತೆ, 1967 ಮತ್ತು 1969ರ ಸಂಯುಕ್ತರಂಗ ಸರಕಾರಗಳ ಅವಧಿಯಲ್ಲಿ ರೈತರು ಆರು ಲಕ್ಷ ಎಕರೆಗಳಷ್ಟು ಸ್ವಾಧೀನದ ಮತ್ತು ಬಿನಾಮಿಯ ಭೂಮಿಯನ್ನು ಕೈವಶ ಮಾಡಿಕೊಂಡರು. ಮಾರ್ಚ್ 1970ರಲ್ಲಿ ಎರಡನೇ ಸಂಯುಕ್ತ ರಂಗವು ಒಡಮೇಲುಗೊಂಡಾಗ, ಮುಖ್ಯವಾಗಿ 1972ರ ಮೋಸದ ಚುನಾವಣೆಯ ನಂತರ, ಅರೆ–ಫ್ಯಾಸಿಸ್ಟ್ ಭಯೋತ್ಪಾದನೆಯ ಎದುರಿನಲ್ಲಿ, ರೈತರು ಈ ಹಿಂದೆ ವಶಪಡಿಸಿಕೊಂಡ ಭೂಮಿಯ ಶೇ. 30ರಿಂದ 40 ರಷ್ಟನ್ನು ತಮ್ಮಲ್ಲಿ ಇಟ್ಟುಕೊಳ್ಳಲಾರದಾದರು.

ಆದರೆ, 1973ರ ನಂತರ, ಕಿಸಾನ್ ಚಳುವಳವು ಪುನಃ ಬಲಗೊಂಡಂತೆ, ರೈತರು ತಾವು ಕಳೆದುಕೊಂಡ ಭೂಮಿಯ ಶೇ. 15ರಷ್ಟನ್ನು ಹಿಂದಕ್ಕೆ ಪಡೆಯಲು ಸಮರ್ಥರಾದರು. ಆ ಕಾರ್ಯಕ್ರಮ ಇನ್ನೂ ಮುಂದುವರಿಯುತ್ತಿದೆ. ಈ ವಿಷಯದಲ್ಲಿ, ಕಾಂಗ್ರೆಸ್ ಆಳ್ವಿಕೆಯಲ್ಲಿ ಅನರ್ಹ ವ್ಯಕ್ತಿಗಳಿಗೆ ಕೊಟ್ಟ ಭೂಮಿಯ ಪಟ್ಟವನ್ನು ಪಂಚಾಯತುಗಳ ಸಹಕಾರದಿಂದ ಪುನರ್ವಿಮರ್ಶಿಸಲು ಎಡರಂಗ ಸರಕಾರವು ಒಂದು ಆದೇಶವನ್ನು ಹೊರಡಿಸಿದೆ.

ಅಂತೆಯೇ, ಒಕ್ಕಲೆಬ್ಬಿಸಿದ ಪಾಲು ಬೆಳೆಗಾರರನ್ನು, ಮುಖ್ಯವಾಗಿ 1972 ನಂತರದಲ್ಲಿ ಒಕ್ಕಲೆಬ್ಬಿಸಿದವರನ್ನು ಪುನಃ ಸೇರ್ಪಡೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಧ್ಯದ ಸ್ಥಿತಿ ಹೀಗಿದೆ: ಡಿಸೆಂಬರ್ 31, 1978ರಷ್ಟರಲ್ಲಿ 1,122,576.68 ಎಕರೆಗಳಷ್ಟು ಕೃಷಿ ಭೂಮಿಯು ಸರಕಾರದ ಸ್ವಾಧೀನಕ್ಕೆ ಬಂದಿದೆ. ಅವುಗಳಲ್ಲಿ 968,675.30 ಎಕರೆಗಳಷ್ಟು ಸರಕಾರ ವಶಮಾಡಿಕೊಂಡಿದ್ದು, 164,733.16 ಎಕರೆಗಳಷ್ಟು ಕೋರ್ಟು ತಡೆಯಾಜ್ಞೆಗಳಿಗೆ ಒಳಗಾಗಿವೆ. ಇದು ತನಕ 962,900 ಪ್ರಯೋಜನದಾರರಿಗೆ 612,505.38 ಎಕರೆಗಳಷ್ಟು ಭೂಮಿಯನ್ನು ಹಂಚಲಾಗಿದೆ. ಸರಕಾರ ಮತ್ತು ಜನರು ನೆರೆ ಪರಿಹಾರದ ಮತ್ತು ಮರು ವಸತಿ

(23ನೇ ಪುಟ ನೋಡಿ)

ಬರ್ಟೋಲ್ಟ್ ಬ್ರೆಕ್ಟ್

ಕವಿ, ವಿಚಾರವಾದಿ, ನಾಟಕಕಾರ ಮತ್ತು ಹೋರಾಟಗಾರ

—ಸಾ.ಚಿ. ನಾಗರಾಜ

ಬ್ರೆಕ್ಟ್ ಎಂಬತ್ತು ವರ್ಷಗಳ ಹಿಂದೆ 1898ನೇ ಫೆಬ್ರವರಿ 10 ರಂದು ಜರ್ಮನಿಯ ಆಗ್ಸ್‌ಬರ್ಗ್‌ನಲ್ಲಿ ಹುಟ್ಟಿದನು. ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಜನಿಸಿದ ಬ್ರೆಕ್ಟ್ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಮ್ಯೂನಿಕ್ ವಿಶ್ವವಿದ್ಯಾಲಯವನ್ನು ಸೇರಿದನು. ಮೊದಲನೇ ಮಹಾಯುದ್ಧದಲ್ಲಿ ಅವನು ವೈದ್ಯಕೀಯ ಸೇವಕನಾಗಿ ಸೇವೆ ಸಲ್ಲಿಸಿದನು.

ಇಪ್ಪತ್ತನೇ ಶತಮಾನದ ಕೆಲವೇ ನಾಟಕಕಾರರಲ್ಲಿ ಬ್ರೆಕ್ಟ್‌ನಂತಹ ಮತ್ತೊಬ್ಬ ವಿವಾದಾಸ್ಪದ ಬರಹಗಾರನಿಲ್ಲ. ಜರ್ಮನಿಯ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯ ಬಗ್ಗೆ ಅವನು ಚಿಂತಾಕ್ರಾಂತನಾದ. ಮೊದಲನೇ ಮಹಾಯುದ್ಧದ ನಂತರ ಜರ್ಮನಿಯಲ್ಲಿ ಉಂಟಾದ ನಾಜಿಗಳ ಪ್ರಭುತ್ವ ಅವನನ್ನು ಚಿಂತಿಸುವಂತೆ ಮಾಡಿತು. ಅವನು ಮೊದಲಿನಿಂದಲೂ ಕಮ್ಯುನಿಸ್ಟ್ ತತ್ವಗಳನ್ನು ಬಲವಾಗಿ ನಂಬಿದ್ದರಿಂದ ಸಹಜವಾಗಿಯೇ ಅವನು ನಾಜೀ ವಿರೋಧಿಯಾದನು.

ಬ್ರೆಕ್ಟ್ ತನ್ನ ಆರು ದಶಕಗಳ ಬದುಕಿನಲ್ಲಿ (ಮರಣ : ಆಗಸ್ಟ್ 14, 1956) ಜರ್ಮನಿ ಮತ್ತು ಇಡೀ ವಿಶ್ವದಲ್ಲಿ ಅನೇಕ ಬದಲಾವಣೆಗಳನ್ನು ಕಂಡನು. ಹಳೆಯ ಜರ್ಮನಿಯ ಪತನ, ಹಿಟ್ಲರನ ಸರ್ವಾಧಿಕಾರ ಮತ್ತು ಅದರ ಅವನತಿ, ಎರಡು ಮಹಾಯುದ್ಧಗಳು, ಸೋವಿಯತ್ ದೇಶದ ಕ್ರಾಂತಿ ಮತ್ತು ಸೋಷಲಿಸ್ಟ್ ಸಮಾಜದ ನಿರ್ಮಾಣ, ಜಿ. ಡಿ. ಆರ್. ಹುಟ್ಟು...

ಬ್ರೆಕ್ಟ್ ತನ್ನ ಸಮಾಜದಲ್ಲಿದ್ದ ಅನ್ಯಾಯಗಳನ್ನು ಮೌನವಾಗಿ ನೋಡುವ ಪ್ರೇಕ್ಷಕನಾಗಿರಲಿಲ್ಲ. ಆತ ತನ್ನ ಕ್ರಾಂತಿಕಾರಕ ಲೇಖನಿಯಿಂದ ಸಾಮಾನ್ಯನ ರಕ್ತ ಹೀರುತ್ತಿದ್ದ, ಶ್ರಮಿಕ ವರ್ಗವನ್ನು ಶೋಷಿಸುತ್ತಿದ್ದ ಬಂಡವಾಳಶಾಹಿಗಳ ವಿರುದ್ಧ ಸಿಡಿದೆದ್ದ. ಅನ್ಯಾಯವನ್ನು ಖಂಡಿಸಿದ. ಅವನು ಮಾರ್ಕ್ಸ್ ಮತ್ತು ಲೆನಿನ್ ಸಿದ್ಧಾಂತಗಳನ್ನು ಬಲವಾಗಿ ನಂಬಿದ್ದರಿಂದ ಮತ್ತು ಅವನ ಎಲ್ಲಾ ನಾಟಕಗಳು ಮತ್ತು ಬರಹಗಳು ಒಂದಲ್ಲ ಒಂದು ರೀತಿಯಲ್ಲಿ ಕಮ್ಯುನಿಸ್ಟ್ ತತ್ವಗಳನ್ನು ಒಳಗೊಂಡಿದ್ದರಿಂದ ಸಹಜವಾಗಿ ಅವನಿಗೂ, ನಾಜೀಗಳಿಗೂ ಘರ್ಷಣೆ ಅನಿವಾರ್ಯವಾಯಿತು.

ಕಾರ್ಮಿಕ ಹೋರಾಟದ ಬಗ್ಗೆ, ಬಂಡವಾಳಶಾಹಿಗಳ ಬೂರ್ಜ್ವಾ ತನದ ಬಗ್ಗೆ ಮ್ಯಾಕ್ಸಿಮ್ ಗಾರ್ಕಿಯ 'ತಾಯಿ' (ದಿ ಮದರ್) ಕಾದಂಬರಿಯನ್ನು ಆಧರಿಸಿ ಅದೇ ಹೆಸರಿನ ನಾಟಕವನ್ನು ರಚಿಸಿದ. ಜರ್ಮನಿಯಲ್ಲಿ ನಾಜೀಗಳು ಪ್ರಭಲಗೊಂಡು ಅಧಿಕಾರಕ್ಕೆ ಬಂದ ಮೇಲೆ ಬ್ರೆಕ್ಟ್‌ನ ಎಲ್ಲಾ ನಾಟಕಗಳನ್ನು ಜರ್ಮನಿಯಲ್ಲಿ ಬಹಿಷ್ಕರಿಸಿದರು.

1933ರಲ್ಲಿ ಜರ್ಮನಿಯನ್ನು ಬಿಟ್ಟು ಡೆನ್ಮಾರ್ಕ್‌ನಲ್ಲಿ ಬಂದು ನೆಲೆಸಿದ. ಅವನು ಡೆನ್ಮಾರ್ಕ್‌ನಲ್ಲಿದ್ದ ವೇಳೆಯಲ್ಲಿ ತನ್ನ ಖ್ಯಾತ ನಾಟಕ 'ದಿ ಲೈಫ್ ಆಫ್ ಗೆಲಿಲಿಯೋ' ರಚಿಸಿದನು. 1939 ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾದ ಮೇಲೆ ನಾಜೀಗಳ ಪ್ರಾಭಲ್ಯ ದಿನೇ ದಿನೇ ಬೆಳೆಯುತ್ತಾ ಹೋಯಿತು. ಹಿಟ್ಲರನ ಸರ್ವಾಧಿಕಾರದ ಬಿಸಿ ಎಲ್ಲಾ ರಾಷ್ಟ್ರಗಳಿಗೂ ತಟ್ಟಿತು. ಹಿಟ್ಲರನ ಕ್ರೂರ ದೃಷ್ಟಿಗೆ ಗುರಿಯಾದ ಬ್ರೆಕ್ಟ್ ಡೆನ್ಮಾರ್ಕನ್ನು ಬಿಟ್ಟ. ಅವನಿಗೆ ಅಮೆರಿಕಾದಲ್ಲಿ ನೆಲೆಸಲು ಅನುಮತಿ ದೊರೆಯಿತು. ಆದರೆ ಅಲ್ಲಿಯೂ ಅವನು ಬಹುಕಾಲ ನೆಲೆಸಲಿಲ್ಲ. 1947ರಲ್ಲಿ ಅವನನ್ನು ಕಮ್ಯುನಿಸ್ಟ್‌ನೆಂದು ಶಂಕಿಸಿ ವಿಚಾರಣೆಗೊಳಪಡಿಸಿದರು.

ಬ್ರೆಕ್ಟ್ ಅಮೆರಿಕಾದಲ್ಲಿ ನೆಲೆಸಿದ್ದ ಕಾಲದಲ್ಲಿ ಅನೇಕ ನಾಟಕಗಳನ್ನು ರಚಿಸಿದ. ಅದರಲ್ಲಿ ಪ್ರಸಿದ್ಧ ನಾಟಕಗಳೆಂದರೆ 'ದಿ ಗುಡ್ ವುಮನ್ ಆಫ್ ಸೆಜುವಾನ್', 'ದಿ ಕಕೇಸಿಯನ್ ಚಾಕ್ ಸರ್ಕಲ್', 'ಮದರ್ ಕರೇಜ್' ಮುಂತಾದವು.

ಅವನು ಡೆನ್ಮಾರ್ಕಿನಲ್ಲಿದ್ದಾಗ ರಚಿಸಿದ್ದ 'ದಿ ಲೈಫ್ ಆಫ್ ಗೆಲಿಲಿಯೋ' ವಿಜ್ಞಾನಿಯೊಬ್ಬನನ್ನು ಕೇಂದ್ರವಾಗಿಟ್ಟುಕೊಂಡು, ವಿಜ್ಞಾನಕ್ಕೂ ಮತ್ತು ಸಮಾಜಕ್ಕೂ ಇರುವ ಸಂಬಂಧವನ್ನೂ, ವಿಜ್ಞಾನಿಗಳ ಸಾಮಾಜಿಕ ಹೊಣೆಗಾರಿಕೆಯನ್ನು ಕುರಿತು ಚರ್ಚಿಸುವ ನಾಟಕ. ಹೀಗೆ ವಿಜ್ಞಾನಿಯೊಬ್ಬನನ್ನು ಕುರಿತು ರಚಿಸಿದ ನಾಟಕ ಬೇರೆ ಯಾವ ಭಾಷೆಯಲ್ಲಿಯೂ ಸಿಗಲಾರದು.

ಯುದ್ಧ ಮುಗಿದ ಕೆಲವು ದಿನಗಳ ನಂತರ 1949ರಲ್ಲಿ ಅವನು ಪೂರ್ವ ಜರ್ಮನಿಗೆ ಬಂದನು. ನಾಟಕಗಳಲ್ಲಿ ತನ್ನದೇ ಹೊಸ ವಿಚಾರಗಳನ್ನು ಪ್ರಯೋಗಿಸುವುದಕ್ಕಾಗಿ 'ಬರ್ಲಿನರ್ ಅನ್ಸೆಂಬ್ಲ್' ಎಂಬ ಹೊಸ ನಾಟಕ ಕಂಪನಿಯನ್ನು ಕಟ್ಟಿದನು. ಅನೇಕ ವೈಚಾರಿಕ ನಾಟಕಗಳನ್ನು ಇದರ ಮೂಲಕ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಿದನು. ಸರ್ಕಾರವು ಅವನ ಉಪಯೋಗಕ್ಕಾಗಿ ಒಂದು ನಾಟಕ ಮಂದಿರವನ್ನು ಒದಗಿಸಿತ್ತು.

ಅವನು ತನ್ನದೇ ಆದ 'ಎಪಿಕ್ ಥಿಯೇಟರ್' (Epic Theatre) ಎಂಬ ಹೊಸ ಸಿದ್ಧಾಂತವನ್ನು ನಾಟಕದಲ್ಲಿ ಪ್ರತಿಪಾದಿಸಿದ. ಅವನ 'ಎಪಿಕ್ ಥಿಯೇಟರ್' ಸಿದ್ಧಾಂತದ ಪ್ರಕಾರ ಪ್ರೇಕ್ಷಕನಿಗೂ ಮತ್ತು ನಟನಿಗೂ ಒಂದು ನಿರ್ದಿಷ್ಟ ಅಂತರವಿರುವುದು ಅವಶ್ಯ. ಪ್ರೇಕ್ಷಕನಿಗೆ ತಾನು ನೋಡುತ್ತಿರುವುದು ನಾಟಕ ಎಂಬ ಅರಿವಿದ್ದರೆ ಮಾತ್ರ ನಾಟಕದ ಮೂಲಕ ಜೀವನವನ್ನು ವಿಮರ್ಶಕ ದೃಷ್ಟಿಯಿಂದ ಮತ್ತು ಚಿಕಿತ್ಸಕ ದೃಷ್ಟಿಯಿಂದ ನೋಡುವುದು ಸಾಧ್ಯವಾಗುವುದು. ನಟ ಕೂಡ ಅಷ್ಟೆ: ತನ್ನ ಪಾತ್ರದಲ್ಲಿ ತಲ್ಲೀನನಾಗದೆ ತಾನೊಬ್ಬ ಪಾತ್ರದಾರಿ ಎಂಬ ಅರಿವಿದ್ದರೆ ನಾಟಕದ ಉದ್ದೇಶ ಸಫಲವಾಗುತ್ತದೆ ಎನ್ನುತ್ತಾನೆ. ಅತೀ ಭಾವುಕತೆಯಿಂದ ನಾಟಕದ ವಿಚಾರವನ್ನು ಕಳೆಗುಂದಿಸುವುದರಿಂದ ಇಡೀ ನಾಟಕದ ಉದ್ದೇಶವೇ ಹಾಳಾಗುತ್ತದೆ. ನಾಟಕದ ಸದ್ಯದ ಗುರಿ ಮನರಂಜನೆಯಾದರೂ ಅದರ ಮೂಲಕ ಜೀವನ ವಿಮರ್ಶೆಯಾಗಬೇಕೆಂದನು. ಅವನ ಎಲ್ಲಾ ನಾಟಕಗಳೂ ಈ ಸಿದ್ಧಾಂತದ ಮೇಲೆಯೇ ರಚಿತವಾದವು.

ಮಾನವನಲ್ಲಿ ನಿದ್ದೆ ಮಾಡುವ ವಿಚಾರ ಶಕ್ತಿಗಳನ್ನು ಬಡಿದೆಬ್ಬಿಸುವುದೇ ಬ್ರೆಕ್ಟ್ ನಾಟಕದ ಘನ ಉದ್ದೇಶವಾಗಿತ್ತು. ಹೊಸ ಸಮಾಜದ ರಚನೆಗೆ ಸಹಾಯವಾಗುವ ವಿಚಾರಗಳ ಬಗೆಗೆ ಅವನಲ್ಲಿ ಅತ್ಯಂತ ಶ್ರದ್ಧೆ ಮತ್ತು ನಂಬಿಕೆಯಿತ್ತು. ಅದಕ್ಕಾಗಿ ಅವನು ತನ್ನ ಎಲ್ಲಾ ನಾಟಕಗಳಲ್ಲಿಯೂ ತಾನು ನಂಬಿದ್ದ ಮಾರ್ಕ್ಸ್ ಸಿದ್ಧಾಂತಗಳನ್ನು ಬಳಸಿಕೊಂಡ. ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯ ಲೋಪದೋಷಗಳು, ಸಾಮಾಜಿಕ ಅನ್ಯಾಯ, ನೂತನ ಸಮಾಜ ನಿರ್ಮಾಣಕ್ಕೆ ಬೇಕಾದ ಕ್ರಾಂತಿಕಾರೀ ಹೋರಾಟ, ವರ್ಗ ಹೋರಾಟ ಇವುಗಳು ಅವನ ಪ್ರತಿಯೊಂದು ಬರಹಗಳಲ್ಲಿಯೂ ಮತ್ತು ನಾಟಕಗಳಲ್ಲಿಯೂ ನಿಚ್ಛಳವಾಗಿ ಪ್ರತಿಬಿಂಬಿತವಾಗಿವೆ.

ಬ್ರೆಕ್ಟ್ ಒಬ್ಬ ನಾಟಕಕಾರನಷ್ಟೇ ಅಲ್ಲ. ಅವನು ಕವಿ, ಪ್ರಭಂದಕಾರ, ರಾಜಕಾರಣಿ ಮತ್ತು ಮಾರ್ಕ್ಸ್‌ವತಾವಾದಿ. ಅವನ ಪ್ರಖ್ಯಾತ ಕವನ, 'ದಿ ಗ್ರೇಟ್ ಅಕ್ಟೋಬರ್' ಅಕ್ಟೋಬರ್ ಕ್ರಾಂತಿಯ 20ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ 1937ರಲ್ಲಿ ಬರೆದದ್ದು. ಅದರಲ್ಲಿ ಕಾರ್ಮಿಕರ, ನಿಸ್ಸಹಾಯಕ ಶ್ರಮಿಕರ ನಾಯಿ ಬದುಕಿನ ಬಗ್ಗೆ, ಬಂಡವಾಳಶಾಹಿಗಳ ಕ್ರೂರ ಆಡಳಿತದ ಬಗ್ಗೆ ಹೇಳುತ್ತಾ ಪ್ರತಿಯೊಬ್ಬ ಬಡ ಕಾರ್ಮಿಕನ ಹೃದಯದಲ್ಲಿ ಅಕ್ಟೋಬರ್ ಕ್ರಾಂತಿ ಜೀವಂ



ತವಾಗಿದೆ ಎಂದು ನೆನಪು ಮಾಡಿಕೊಡುತ್ತಾನೆ.

ಲೆನಿನ್ ಮತ್ತು ಮಾರ್ಕ್ಸ್ ಸಿದ್ಧಾಂತಗಳು ಅವನ ಬದುಕಿನ ಆದರ್ಶವಾಗಿತ್ತು. ಕಮ್ಯುನಿಸ್ಟ್ ಸಿದ್ಧಾಂತಗಳನ್ನು ಪದ್ಯರೂಪದಲ್ಲಿ ಬರೆದು ಅದನ್ನು ಜನಸಮುದಾಯಕ್ಕೆ ಮುಟ್ಟಿಸಬೇಕೆಂಬ ಅವನ ಆಸೆ ಫಲ ಕೊಡುವ ಮುಂಚೆಯೇ ಅವನು ಮರಣ ಹೊಂದಿದನು. ಅವನ ಮಹಾತ್ಕಾರ್ಯ ಅಪೂರ್ಣವಾಗಿಯೇ ಉಳಿಯಿತು.

'ಜಗತ್ತನ್ನು ಬದಲಾವಣೆಯತ್ತ ಕೊಂಡೊಯ್ಯಿರಿ-ಜಗತ್ತಿಗೆ ಅದು ಬೇಕು' ಎಂದು ಸಾರಿದನು. ಮತ್ತೊಂದು ಸಂದ

[23ನೇ ಪುಟ ನೋಡಿ]

'ಕೆಲಸ ಕ್ರಮ ತಪ್ಪಿದಾಗ ವಿಶ್ರಾಂತಿ ಪಡೆಯಿರಿ'

(ಲೇಶ್)

ಸಮಾಜವಾದ ಮತ್ತು ಧರ್ಮ

ಇಂದಿನ ಸಮಾಜವು [illegible] ಕೈಯಲ್ಲಿನ ಒಂದು ಸಣ್ಣ ಅಲ್ಪಸಂಖ್ಯಾತರೆನಿಸಿಕೊಳ್ಳುವ ಜಮೀನ್ದಾರರ ಮತ್ತು ಬಂಡವಾಳ ವರ್ಗದಿಂದ: ದುಡಿಯುವ ವಿಶಾಲ ಜನಸಮೂಹದ ಶೋಷಣೆಯ ಮೇಲೆಯೇ ಪೂರ್ಣವಾಗಿ ನಿಂತಿದೆ. ಇದೊಂದು ಗುಲಾಮ ಸಮಾಜ. ಏಕೆಂದರೆ ಆ ಬಂಡವಾಳಶಾಹಿಗಳಿಗಾಗಿ ತಮ್ಮ ಜೀವನ ಪರ್ಯಂತವೂ ದುಡಿಯುವ ಆ "ಸ್ವತಂತ್ರ" ಕೆಲಸಗಾರರು ಬಂಡವಾಳಶಾಹಿ ಗುಲಾಮಿ ಪದ್ಧತಿಯನ್ನು ರಕ್ಷಿಸುವುದಕ್ಕೂ ಮತ್ತು ಅದನ್ನು ಮುಂದುವರೆಸಿಕೊಂಡು ಹೋಗುವುದಕ್ಕೂ ಮತ್ತು ಲಾಭವನ್ನು ಸಂಪಾದಿಸಿಕೊಡುವ ಗುಲಾಮರನ್ನು ಉಳಿಸಿಕೊಂಡು ಬರುವುದಕ್ಕಾಗಿ ಅಗತ್ಯವೆನಿಸುವಷ್ಟು ಜೀವನಾವಶ್ಯಕತೆಗಳಿಗೆ ಮಾತ್ರ "ಹಕ್ಕುದಾರರಾಗಿರುತ್ತಾರೆ".

ದುಡಿಯುವ ಜನತೆಯನ್ನು ಆರ್ಥಿಕವಾಗಿ ತುಳಿಯುವಾಗ ಅದು ಅನಿವಾರ್ಯವಾಗಿ ಮತ್ತು ಅವಶ್ಯಕವೆನಿಸಿ ಎಲ್ಲ ರೀತಿಯ ರಾಜಕೀಯ ತುಳಿತ ಮತ್ತು ಸಾಮಾಜಿಕ ಅವಹೇಳನವನ್ನು ಹುಟ್ಟಿಸುತ್ತದೆ. ಇದು ಜನಸಮೂಹದ ಆಧ್ಯಾತ್ಮಿಕ ಮತ್ತು ನೈತಿಕ ಬಾಳನ್ನು ಹದಗೆಡಿಸಿ ಮಬ್ಬುಗವಿಸುತ್ತದೆ. ದುಡಿಯುವ ಜನತೆಯು ತಮ್ಮ ಆರ್ಥಿಕ ವಿಮೋಚನೆಗಾಗಿ ಹೋರಾಡಲು ಸ್ವಲ್ಪ ಕಡಿಮೆಯ ಅಥವ ಹೆಚ್ಚಿನ ಮಟ್ಟದ ರಾಜಕೀಯ ಸ್ವಾತಂತ್ರವನ್ನು ಗಳಿಸಬಹುದು. ಆದರೆ ಬಂಡವಾಳದ ಅಧಿಕಾರವನ್ನು ಕಿತ್ತೆಸೆಯುವವರೆಗೂ ಎಷ್ಟೇ ಪ್ರಮಾಣದ ಸ್ವಾತಂತ್ರವು ಅವರನ್ನು ಬಡತನ, ನಿರುದ್ಯೋಗ ಮತ್ತು ತುಳಿತಗಳಿಂದ ತಪ್ಪಿಸುವುದಿಲ್ಲ. ಧರ್ಮವು ಆಧ್ಯಾತ್ಮಿಕವಾಗಿ ಜನಸಮೂಹವನ್ನು ತುಳಿಯುವ ರೂಪಗಳಲ್ಲೊಂದಾಗಿದೆ. ದುಡಿಯುವ ಜನಸಮೂಹವು ಒಂದೇ ಸಮನೆ ಇತರರಿಗಾಗಿ ದುಡಿಯುವ ದಣಿವಿನ ಜೊತೆಗೆ ಬಡತನ ಮತ್ತು ಬಿಡಿತನಗಳಿಂದ ಜಜ್ಜಿಹೋಗಿರುವಾಗ ಧರ್ಮವು ಅವರನ್ನು ಪ್ರತಿಯೊಂದು ಕಡೆಯಿಂದಲೂ ಇನ್ನೂ ಹೆಚ್ಚು ಹೆಚ್ಚಾಗಿ ತುಳಿಯುತ್ತಿರುತ್ತದೆ. ಪ್ರಕೃತಿಯೊಂದಿಗಿನ ತಮ್ಮ ಹೋರಾಟದಲ್ಲಿ ಕಿರಾತಜನರಲ್ಲಿ ಅವರ ದೌರ್ಬಲ್ಯದ ಕಾರಣ ದೇವರು, ದೆವ್ವ, ಪವಾಡ ಮತ್ತಿತರಗಳಲ್ಲಿ ನಂಬಿಕೆ ಮಾಡಿಕೊಳ್ಳುವಂತೆಯೇ; ಅಷ್ಟೇ ಅನಿವಾರ್ಯವಾಗಿ ಶೋಷಿತ ವರ್ಗದಲ್ಲಿ ಶೋಷಕರ ಎದುರಾದ ತಮ್ಮ ಹೋರಾಟದ ದೌರ್ಬಲ್ಯದ ಕಾರಣ ಸಾವಿನ ನಂತರ ಉತ್ತಮ ಬಾಳಿನ ನಂಬಿಕೆಯೂ ಮೂಡಿಕೊಳ್ಳುತ್ತದೆ. ತಮ್ಮ ಜೀವನ ಪರ್ಯಂತವೂ ದುಡಿಯುತ್ತಲೇ ಇರುವ ಮತ್ತು ಬಡತನದಲ್ಲಿಯೇ ಇರುವಂಥಹ ಬಡವರಿಗೆ 'ನೀವು ಇಲ್ಲಿ ಭೂಮಿಯ ಮೇಲೆ ಇರುವಾಗ ವಿಧೇಯತೆ ಮತ್ತು ಸಮಾಧಾನಗಳಿಂದ ಇದ್ದು ಮತ್ತು ಸ್ವರ್ಗವು ಸಿಗುವುದೆಂಬ ನಿರೀಕ್ಷೆಯಲ್ಲಿ ಸಮಾಧಾನ ಪಡೆಯಿರಿ' ಎಂದು ಧರ್ಮವು ಬೋಧಿಸುತ್ತದೆ. ಆದರೆ ಅದೇ ಸಮಯದಲ್ಲಿ ಇತರರ ದುಡಿಮೆಯ ಮೇಲೆ ಜೀವನ ನಡೆಸುವಂತಹ 'ಶ್ರೀಮಂತರಿಗೆ' ಧರ್ಮದ ಬೋಧನೆಯು ಏನು ಗೊತ್ತೆ? "ನೀವು ಭೂಮಿಯ ಮೇಲೆ ಇರುವಾಗ ದಾನಗಳನ್ನು ನೀಡಿ" ಎಂದು. ಹೀಗೆ ಧರ್ಮವು ಶೋಷಿತರಾಗಿರುವವರ ಇರುವಿಕೆಯನ್ನು ಅತಿ ಅಗ್ಗದ ರೀತಿಯಲ್ಲಿ ಸಮರ್ಥಿಸುತ್ತದೆ. ಮತ್ತು ಸ್ವರ್ಗದಲ್ಲಿ ಸುಖವಾಗಿರುವುದಕ್ಕೆ ಸುಲಭ ಬೆಲೆಯಲ್ಲಿ ಅಪ್ಪಣೆ ಚೀಟಿಯನ್ನು ನೀಡುತ್ತದೆ. ಧರ್ಮವು ಜನತೆಗೆ ಒಂದು ಮಾದಕ ದ್ರವವಾಗಿದೆ. ಧರ್ಮವು ಒಂದು ರೀತಿಯ ಆಧ್ಯಾತ್ಮಿಕ ಮತ್ತೇರಿಕೆಯಾಗಿದೆ. ಬಂಡವಾಳಕ್ಕೆ ಗುಲಾಮರಾಗಿರುವ ದುಡಿಯುವ ಜನರು ಇದರಲ್ಲಿ ತಮ್ಮ ಪ್ರತಿರೂಪವನ್ನು, ಮಾನವನಿಗೆ ತದರ್ಹವಾದ ಒಂದು ಬಾಳಿಗಾಗಿ ತಮ್ಮ ಬೇಡಿಕೆಯನ್ನು ಮುಳುಗಿಸಿಬಿಡುತ್ತಾರೆ.

ಆದರೆ ತನ್ನ ಗುಲಾಮತನದ ಬಗ್ಗೆ ಎಚ್ಚರಗೊಂಡಿರುವ ಮತ್ತು ತನ್ನ ವಿಮೋಚನೆಗಾಗಿ ಎಚ್ಚೆತ್ತಿರುವ ಗುಲಾಮನು ಈಗಾಗಲೇ ತನ್ನ ಗುಲಾಮತನದಲ್ಲಿ ಅರ್ಧದಷ್ಟು ಪ್ರಮಾಣವನ್ನು ಕೊನೆಗೊಳಿಸಿದ್ದಾನೆ. ಬೃಹತ್‌ಪ್ರಮಾಣದ ಕೈಗಾರಿಕೆಗಳಿಂದ ಬೆಳೆಸಲ್ಪಟ್ಟು ಮತ್ತು ನಗರ ಜೀವನದ ಬಾಳಿನಿಂದ ತಿಳುವಳಿಕೆ ಪಡೆದಿರುವ ಆಧುನಿಕ ವರ್ಗಪ್ರಜ್ಞೆಯುಳ್ಳ ಕೆಲಸಗಾರನು ಧಾರ್ಮಿಕ ಪೂರ್ವಕಲ್ಪನೆಗಳನ್ನು ತಿರಸ್ಕಾರಭಾವದಿಂದ ಪಕ್ಕಕ್ಕೆ ತಳ್ಳುತ್ತಾನೆ. ಸ್ವರ್ಗವನ್ನು ಪುರೋಹಿತ ಪೂಜಾರಿಗಳಿಗೂ ಮತ್ತು ಬೂರ್ಜ್ವ ಮತಾಂಧರಿಗೂ ಬಿಟ್ಟು ತನಗೆ ಈ ಭೂಮಿಯ ಮೇಲೆ ಉತ್ತಮ ಜೀವನ ಪ್ರಾಪ್ತಿಗಾಗಿ ಪ್ರಯತ್ನಿಸುತ್ತಾನೆ. ಇಂದಿನ ಕಾಲದ ಶ್ರಮಜೀವಿಯು ಧರ್ಮದ ಮುಸುಕಿನ ಎದುರಾದ ಹೋರಾಟದಲ್ಲಿ ವಿಜ್ಞಾನವನ್ನು ಎತ್ತಿಹಿಡಿಯುವ ಮತ್ತು ಎತ್ತಿಕೊಳ್ಳುವ ಸಮಾಜವಾದದ ಪರವಹಿಸುತ್ತಾನೆ; ಹಾಗೂ ಈ ಭೂಮಿಯ ಮೇಲೆಯೇ ಉತ್ತಮ ಜೀವನಕ್ಕಾಗಿ ಪ್ರಸಕ್ತದಲ್ಲೇ ಹೋರಾಡಲು ಕಾರ್ಮಿಕರನ್ನು ಒಗ್ಗೂಡಿಸುವುದರ ಮೂಲಕ ಸಾವಿನ ನಂತರದ ಬಾಳಿನ ಅಪರ ನಂಬಿಕೆಯಿಂದ ಎಲ್ಲ ಕಾರ್ಮಿಕರನ್ನು ಮುಕ್ತಗೊಳಿಸುತ್ತಾನೆ.

ಧರ್ಮವನ್ನು ಒಂದು ಖಾಸಗಿ ವಿಷಯವೆಂದು ಪರಿಗಣಿಸಬೇಕು. ಧರ್ಮದ ಬಗ್ಗೆ ಸಮಾಜವಾದಿಗಳು ಸಾಮಾನ್ಯವಾಗಿ ಈ ರೀತಿ ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆ. ಆದರೆ ಈ ಮಾತುಗಳ ಅರ್ಥವನ್ನು, ಯಾವುದೇ ತಪ್ಪು ತಿಳುವಳಿಕೆ ಉಂಟಾಗದಂತೆ ತಡೆಯಲು ಸರಿಯಾದ ರೀತಿಯಲ್ಲಿ ವಿವರಿಸಬೇಕು. ನಮ್ಮ (ಸಮಾಜವಾದಿಗಳ) ಬೇಡಿಕೆ ಏನೆಂದರೆ; ಪ್ರಭುತ್ವದಷ್ಟಕ್ಕೆ ಸಂಬಂಧಪಟ್ಟಂತೆ ಧರ್ಮವು ಒಂದು ಖಾಸಗಿ ವಿಷಯವಾಗಿ ಪರಿಗಣಿಸಲ್ಪಡಬೇಕು. ಆದರೆ ಯಾವುದೇ ಅರ್ಥದಲ್ಲೂ ಪಾರ್ಟಿಗೆ ಸಂಬಂಧಪಟ್ಟಂತೆ (ಕಮ್ಯುನಿಸ್ಟ್ ಪಾರ್ಟಿ) ಧರ್ಮವು ಒಂದು ಖಾಸಗಿ ವಿಷಯವೆಂದು ನಾವು ಪರಿಗಣಿಸಲಾರೆವು. ಪ್ರಭುತ್ವಕ್ಕೆ ಯಾವುದೇ ಸಂಬಂಧದಲ್ಲೂ ಧರ್ಮವು ಇರಕೂಡದು. ಧಾರ್ಮಿಕ ಸಂಸ್ಥೆಗಳು ಸರ್ಕಾರದ ಅಧಿಕಾರದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರಕೂಡದು. ಪ್ರತಿಯೋರ್ವ ವ್ಯಕ್ತಿಯೂ ತನಗೆ ಇಷ್ಟವಾದ ಯಾವುದೇ ಧರ್ಮವನ್ನು ಅಂಗೀಕರಿಸಬಹುದು ಅಥವ ಯಾವುದೇ ಧರ್ಮವಿಲ್ಲದವನಂತೆ ಅಂದರೆ ಒಂದು ನಿಯಮದಂತೆ, ಪ್ರತಿಯೊಬ್ಬ ಸಮಾಜವಾದಿಯೂ ಇರುವಂತೆ, ನಾಸ್ತಿಕವಾದವನ್ನು ಪ್ರತಿಪಾದಿಸಲೂ ಸ್ವತಂತ್ರನಾಗಿರಬೇಕು. ಅವರ ಧಾರ್ಮಿಕ ನಂಬಿಕೆಯ ಗಣನೆಯ ಮೇಲೆ ನಾಗರೀಕರಲ್ಲಿ ತಾರತಮ್ಯವೆಣಿಸುವುದು ಸಂಪೂರ್ಣವಾಗಿ ಅಸಹನೀಯವಾದುದು. ಅಧಿಕೃತ ದಾಖಲೆಗಳಲ್ಲಿ ಓರ್ವ ನಾಗರೀಕನ ಕೇವಲ ಧಾರ್ಮಿಕ ಸೂಚನೆಯನ್ನು ಸಹ ಪ್ರಶ್ನಾತೀತವಾಗಿ ತೊಡೆದು ಹಾಕಬೇಕು. ಸ್ಥಾಪಿತ ಧಾರ್ಮಿಕ ಪೀಠಗಳಿಗೆ ಯಾವುದೇ ಸಹಾಯಧನವನ್ನು ಸರ್ಕಾರವು ಮಂಜೂರು ಮಾಡಬಾರದು. ಪುರೋಹಿತ ಪೂಜಾರಿಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸರ್ಕಾರದ ನೆರವು ಇರಕೂಡದು. ಇಂಥವುಗಳೆಲ್ಲಾ ಸಂಪೂರ್ಣವಾಗಿ ಪ್ರಭುತ್ವದಿಂದ ಸ್ವತಂತ್ರವಾದ ಏಕಮನಸ್ಕ ಜನರ ಸ್ವತಂತ್ರ ಸಂಸ್ಥೆಗಳಾಗಿರಬೇಕು. ಈ ಬೇಡಿಕೆಗಳು ಪೂರ್ಣವಾಗಿ ಈಡೇರುವುದರಿಂದ ಮಾತ್ರವೇ ಧಾರ್ಮಿಕ ಸಂಸ್ಥೆಗಳಲ್ಲಿ ನಡೆಯುತ್ತಿರುವ ಎಲ್ಲ ಅನಿಷ್ಟಗಳು ಕೊನೆಗಾಣುವುವು. ಆಧುನಿಕ ಪ್ರಭುತ್ವ ಮತ್ತು ಆಧುನಿಕ ಮಠಗಳಿಂದ ಸಮಾಜವಾದಿಗಳು, ಶ್ರಮಜೀವಿಗಳು ಕೇಳುವುದಾದರೂ ಇಷ್ಟನ್ನೆ: ಮಠಗಳು ಮತ್ತು ಪ್ರಭುತ್ವವು ಬೇರ್ಪಡಬೇಕು.

ರಷ್ಯಾದ ಕ್ರಾಂತಿಯು, ರಾಜಕೀಯ ಸ್ವಾತಂತ್ರದ ಒಂದು ಪೂರಕ ಭಾಗದಂತೆ ಈ ಬೇಡಿಕೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಈ ವಿಚಾರದಲ್ಲಿ ರಷ್ಯಾದ ಕ್ರಾಂತಿಯು ಒಂದು ವಿಶೇಷ ಅನುಕೂಲ ಪರಿಸ್ಥಿತಿಯಲ್ಲಿದೆ: ಏಕೆಂದರೆ ಪೋಲೀಸರಿಂದ ತುಂಬಿಕೊಂಡಿರುವ ಮೇಲೆ ಬೀಳುವ ಪಾಳೆಯಶಾಹಿ ಸರ್ವಾಧಿಕಾರದ ಅಧಿಕಾರಿಶಾಹಿತನವು ಪಾದ್ರಿ ಪೂಜಾರಿಗಳಲ್ಲಿಯೂ ಸಹ ಅತೃಪ್ತಿ, ಅಸಮದಾನ ಮತ್ತು ಸಿಟ್ಟನ್ನು ಹುಟ್ಟಿಸಿವೆ. ರಷ್ಯಾದ ಪರಂಪರಾ ಮಡಿವಂತಿಕೆಯು ಪಾದ್ರಿ ಪೂಜಾರಿಗಳು ಅದಿನ್ನೆಷ್ಟೇ ತುಚ್ಛರಾಗಿರಲಿ, ಎಷ್ಟೇ ಅಜ್ಞಾನಿಗಳಾಗಿರಬಹುದು, ರಷ್ಯಾದಲ್ಲಿನ ಹಳೆಯ ಮಧ್ಯಯುಗದ ವ್ಯವಸ್ಥೆಯು ಉರುಳಿ ಬೀಳುವ ಭಯ ಅವರನ್ನು ಎಚ್ಚರಗೊಳಿಸಿದೆ. ಅವರೂ ಸಹ ಸ್ವಾತಂತ್ರದ ಬೇಡಿಕೆಯೊಂದಿಗೆ ಸೇರುತ್ತಿದ್ದಾರೆ. ಅಧಿಕಾರಿಶಾಹಿತನದ ನಡತೆ ಮತ್ತು ಅಧಿಕಾರ ದರ್ಪದ ಎದುರಾಗಿ "ದೇವರ ಸೇವಕರ" ಮೇಲೆ ಪೋಲೀಸರನ್ನು ಗೂಢಚರ್ಯೆಗಾಗಿ ಗೊತ್ತು ಮಾಡಿರುವುದರ ವಿರುದ್ಧ ಅವರು ಪ್ರತಿಭಟಿಸುತ್ತಿದ್ದಾರೆ. ಸಮಾಜವಾದಿಗಳಾದ ನಾವು ಈ ಚಳುವಳಿಗೆ ಬೆಂಬಲ ಕೊಡಬೇಕು.

ಪಾದ್ರಿ ಪೂಜಾರಿಗಳ ಪೈಕಿಯ ನಿಷ್ಠಾವಂತ ಪ್ರಾಮಾಣಿಕ ಸದಸ್ಯರ ಬೇಡಿಕೆಗಳನ್ನು ಕೊನೆಮುಟ್ಟುವವರೆಗೂ ನಡೆಸಿಕೊಡಬೇಕು. ಸ್ವಾತಂತ್ರದ ಬಗ್ಗೆ ಅವರ ಮಾತಿಗೆ ಅವರು ಅಂಟಿಕೊಂಡಿರುವಂತೆ ಮಾಡಬೇಕು. ಧರ್ಮ ಮತ್ತು ಪೋಲೀಸರ ನಡುವಿನ ಎಲ್ಲಾ ಸಂಬಂಧಗಳನ್ನು ಸಂಪೂರ್ಣವಾಗಿ ಕಡಿದುಹಾಕುವಂತೆ ಅವರನ್ನು ನಾವು ಕೇಳಬೇಕು. ಅವರು ಪ್ರಾಮಾಣಿಕರಾಗಿದ್ದಲ್ಲಿ ಮಠ ಮತ್ತು ಪ್ರಭುತ್ವ, ಶಾಲೆ ಮತ್ತು ಮಠಗಳು ಸಂಪೂರ್ಣ ಬೇರೆಬೇರೆಯಾಗಿರುವುದಕ್ಕಾಗಿ ಅವರು ನಿಲ್ಲಬೇಕು, ಹಾಗೂ ಧರ್ಮವು ಇಡಿಯಾಗಿ ಮತ್ತು ಪರಿಪೂರ್ಣವಾಗಿ ಒಂದು ಖಾಸಗಿ ವಿಷಯವಾಗಬೇಕೆಂದು ಅವರು ಸಾರಬೇಕು. ಹಾಗಿಲ್ಲದಿದ್ದ ಪಕ್ಷದಲ್ಲಿ ಅವರು ಸ್ವಾತಂತ್ರದ ಈ ದೃಢವಾದ ಬೇಡಿಕೆಗಳನ್ನು ಒಪ್ಪುತ್ತಿಲ್ಲ. ಅವರಿನ್ನೂ ಆಸ್ತಿಕವಿಚಾರಗಳ ಪರಂಪರೆಯಿಂದ ಬಂಧಿತರಾಗಿದ್ದಾರೆಂಬುದೇ ಸ್ಪಷ್ಟ. ಅವರು ಇನ್ನೂ ಸುಖಕರ ಸರ್ಕಾರಿ ನೌಕರಿಗಳಿಗೂ ಮತ್ತು ಸರ್ಕಾರದಿಂದ ಬರುವ ಆದಾಯಗಳಿಗೂ ಅಂಟಿಕೊಂಡಿದ್ದಾರೆ ಎಂಬುದೇ ಸ್ಪಷ್ಟ. ಮತ್ತು ಪ್ರಭುತ್ವದಿಂದ ಲಂಚಗಳ ಸ್ವೀಕಾರವನ್ನು ಮುಂದುವರಿಸುತ್ತಾರೆಂಬುದೂ ಅಷ್ಟೇ ಸ್ಪಷ್ಟ. ವಿಷಯಗಳು ಹೀಗಿರುವ ಸಂದರ್ಭಗಳಲ್ಲಿ ರಷ್ಯಾದ ಇಡೀ ವರ್ಗಜಾಗೃತ ಕಾರ್ಮಿಕರು ಅವರ ಮೇಲೆ ನಿರ್ದಯ ಯುದ್ಧವನ್ನು ಘೋಷಿಸುವರು.

ಸಮಾಜವಾದಿ ಪಾರ್ಟಿಯಷ್ಟಕ್ಕೇ (ಕಮ್ಯುನಿಸ್ಟ್ ಪಕ್ಷ) ಸಂಬಂಧಪಟ್ಟಂತೆ ಧರ್ಮವು ಒಂದು ಖಾಸಗೀ ವಿಷಯವೇನಲ್ಲ. ನಮ್ಮ ಪಾರ್ಟಿಯು ವರ್ಗಜಾಗೃತವೂ ಮತ್ತು ದುಡಿಯುವ ವರ್ಗದ ವಿಮೋಚನೆಗಾಗಿರುವ ಮುಂಚೂಣಿ ಹೋರಾಟಗಾರರ ಒಂದು ಕೂಟವಾಗಿದೆ. ಇಂತಹ ಒಂದು ಕೂಟವು ಧಾರ್ಮಿಕ ನಂಬಿಕೆಗಳ ರೂಪದಲ್ಲಿರುವ ವರ್ಗಪ್ರಜ್ಞೆಯ ಕೊರತೆ, ಅಜ್ಞಾನ ಅಥವ ಅಂಧಶ್ರದ್ಧೆಗಳ ಬಗ್ಗೆ ಅಲಕ್ಷ್ಯದಿಂದಿರಲಾರದು. ಮತ್ತು ಇದು ಹಾಗಿರಬಾರದು ಕೂಡ. ಧಾರ್ಮಿಕ ಮಬ್ಬುಗವಿಕೆಯನ್ನು ಸ್ವಚ್ಛ ವಿಚಾರಧಾರೆಯಿಂದಲೇ ಮತ್ತು ವಿಚಾರಧಾರಾತ್ಮಕ ಅಸ್ತ್ರದಿಂದ ಮಾತ್ರವೇ ನಮ್ಮ ಪತ್ರಿಕೆಯ ಮುಖಾಂತರ ಹೋರಾಡಲು ಸಾಧ್ಯವಾಗುವಂತೆ, ಮಠಗಳಿಗಿರುವ ಸರ್ಕಾರಿ ಆದಾಯವನ್ನು ಸಂಪೂರ್ಣ ನಿರಾಧಾರಗೊಳಿಸಬೇಕೆಂದು ನಾವು ಕೇಳುತ್ತೇವೆ. ಅದೇ ರೀತಿ ನಾವು ನಮ್ಮ ಕೂಟವನ್ನು (ರಷ್ಯನ್ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ) ಸ್ಥಾಪಿಸಿದ್ದು-ನಿಜವಾಗಿಯೂ ಕಾರ್ಮಿಕರನ್ನು ಎಲ್ಲ ರೀತಿಯ ಧಾರ್ಮಿಕ ಮತ್ತೇರಿಕೆಯಿಂದ ಮುಕ್ತಗೊಳಿಸುವ ಹೋರಾಟಕ್ಕಾಗಿಯೇ. ವಸ್ತುಸ್ಥಿತಿ ಹೀಗಿರುವುದರಿಂದಲೇ ನಮಗೆ ವಿಚಾರಾತ್ಮಕ ಹೋರಾಟವು ಒಂದು ಖಾಸಗೀ ವಿಷಯವಾಗುವುದಿಲ್ಲ.

ವಸ್ತುಸ್ಥಿತಿಯು ಇಷ್ಟೊಂದು ನಿಚ್ಚಳವಾಗಿರುವಾಗ ನಾವು ನಮ್ಮ ಕಾರ್ಯಕ್ರಮದಲ್ಲಿ, ನಾವುಗಳು ನಾಸ್ತಿಕವಾದಿಗಳೆಂದು ಏಕೆ ಹೇಳಿಕೊಳ್ಳುವುದಿಲ್ಲ? ಕ್ರಿಶ್ಚಿಯನ್ನರು(ಇಂಡಿಯಾಕ್ಕೆ ಸಂಬಂಧಪಟ್ಟಂತೆ ಹಿಂದೂಗಳು, ಮುಸಲ್ಮಾನರು. ಕ್ರಿಶ್ಚಿಯನ್ನರು ಮತ್ತಿತರ ಎಲ್ಲ ಧರ್ಮೀಯರೆಂದು ಓದಿಕೊಳ್ಳಬೇಕು-ಅನು) ಮತ್ತು ದೇವರಲ್ಲಿ ನಂಬಿಕೆ ಇರುವ ಇತರರು ನಮ್ಮ ಪಾರ್ಟಿಗೆ ಸೇರಿಕೊಳ್ಳುವುದನ್ನು ನಾವು ಅದೇಕೆ ನಿಷೇಧಿಸಿಲ್ಲ?

ಧಾರ್ಮಿಕ ಪ್ರಶ್ನೆಯನ್ನು ಬೂರ್ಜ್ವ ಪ್ರಜಾಪ್ರಭುತ್ವವಾದಿಗಳು ಮಂಡಿಸುವುದರಲ್ಲಿಯೂ ಮತ್ತು ಸಮಾಜವಾದಿ ಪ್ರಜಾಪ್ರಭುತ್ವವಾದಿಗಳು ಮಂಡಿಸುವುದರಲ್ಲಿಯೂ ಯಾವ ರೀತಿಯ ಮುಖ್ಯ ವ್ಯತ್ಯಾಸವಿದೆ ಎಂಬುದನ್ನು ಈ ಪ್ರಶ್ನೆಯ ಉತ್ತರವು ವಿವರಿಸಿದಂತಾಗುತ್ತದೆ.

ನಮ್ಮ ಇಡೀ ಕಾರ್ಯಕ್ರಮವು ವೈಜ್ಞಾನಿಕವಷ್ಟೇ ಅಲ್ಲದೆ ಭೌತವಾದಿ ಪ್ರಪಂಚ ದೃಷ್ಟಿಕೋನದ ಮೇಲೆ ಆಧಾರಗೊಂಡಿರುವುದಾಗಿದೆ. ಆದ್ದರಿಂದ ನಮ್ಮ ಕಾರ್ಯಕ್ರಮದ ವಿವರಣೆಯು ಧಾರ್ಮಿಕ ಮಬ್ಬುಗವಿಕೆಯ ವಾಸ್ತವ ಚಾರಿತ್ರಿಕ ಮತ್ತು ಆರ್ಥಿಕ ಮೂಲಗಳ ವಿವರಣೆಯನ್ನು ಅವಶ್ಯಕವಾಗಿ ಒಳಗೊಂಡಿರುವುದು. ನಮ್ಮ ಪ್ರಚಾರವು ಅಗತ್ಯವಾಗಿಯೂ ನಾಸ್ತಿಕವಾದದ ಪ್ರಚಾರ

ಧಾರ್ಮಿಕ ನಂಬಿಕೆಗಳ ಬಗ್ಗೆ ಧಾರ್ಮಿಕ ಆಚರಣೆಗಳ ಬಗ್ಗೆ ಕಮ್ಯುನಿಸ್ಟರ ನಿಲುವುಗಳೇನು ಎಂಬುದನ್ನು ಇತಿಹಾಸದಲ್ಲಿನ ಅಸಾಮಾನ್ಯ ಕ್ರಾಂತಿಪುರುಷ ಎನಿಸಿಕೊಂಡ ವಿ. ಐ. ಲೆನಿನ್ ಅವರು 1902 ರ ಸುಮಾರಿಗೇ ಬರೆದು ರಷ್ಯಾದ "ಇಸ್ಕ್ರಾ" ಪತ್ರಿಕೆಯಲ್ಲಿ ಪ್ರಕಟಿಸಿದ್ದರು.

ವಿನೋಬಭಾವೆಯವರು ಇತ್ತೀಚೆಗೆ ಎತ್ತಿರುವ ಗೋಹತ್ಯೆ ನಿಷೇಧ ಕಾರ್ಯಕ್ರಮಕ್ಕೆ ಕಮ್ಯುನಿಸ್ಟರ ಉತ್ತರವೇನು ಎಂಬುದನ್ನು ಲೆನಿನ್‌ರ ಈ ಲೇಖನ ಹೇಳುತ್ತದೆ. ಅದನ್ನು ನಮ್ಮ ವಾಚಕರಿಗಾಗಿ ಇಲ್ಲಿ ಕೊಡಲಾಗಿದೆ.

—ಸಂ.

ವನ್ನು ಒಳಗೊಂಡಿರುವುದು. ನಿರಂಕುಶ ಪಾಳೆಯಶಾಹಿ ಸರ್ಕಾರವು ಈವರೆಗೂ ಕಟ್ಟುನಿಟ್ಟಾಗಿ ನಿಷೇಧಿಸಿದ್ದ ಮತ್ತು ಅದರ ಬೆನ್ನತ್ತಿ ಪೀಡಿಸುತ್ತಿದ್ದ ಕರಾರು ವೈಜ್ಞಾನಿಕ ಸಾಹಿತ್ಯಪ್ರಕಟಣೆಯು ನಮ್ಮ ಪಾರ್ಟಿಯ ಕಾರ್ಯವಲಯಗಳಲ್ಲೊಂದಾಗಬೇಕು. ಏಂಗೆಲ್ಸರು ಜರ್ಮನ್ ಸಮಾಜವಾದಿಗಳಿಗಿತ್ತ ಬುದ್ಧಿವಾದವನ್ನು ಅಂದರೆ 18 ನೇ ಶತಮಾನದ ಜ್ಞಾನೋದಯದವರ ಮತ್ತು ನಾಸ್ತಿಕರ ಸಾಹಿತ್ಯವನ್ನು ಭಾಷಾಂತರಿಸಿ ಅದನ್ನು ಎಲ್ಲೆಡೆ ವಿಶಾಲವಾಗಿ ಹರಡಬೇಕು ಎಂಬುದನ್ನು ಅನುಸರಿಸಬೇಕು ಎಂಬುದು ಬಹುಶಃ ಈಗ ನಮಗೆ ಸರಿಹೊಂದುತ್ತದೆ.

ಆದರೆ ಯಾವುದೇ ಸಂದರ್ಭದಡಿಯಲ್ಲಿಯೂ ಧಾರ್ಮಿಕ ಪ್ರಶ್ನೆಯನ್ನು ಒಂದು ಅಮೂರ್ತ ಆದರ್ಶವಾದದ ರೀತಿಯಲ್ಲಿ ಒಂದು "ಬೌದ್ಧಿಕ" ಪ್ರಶ್ನೆಯಂತೆ, ಬೂರ್ಜ್ವಾಗಳ ಪೈಕಿ ತೀವ್ರ ಸುಧಾರಣಾವಾದಿ ಪ್ರಜಾಪ್ರಭುತ್ವವಾದಿಗಳು ಎಡೆಬಿಡದೆ ಮಾಡುತ್ತಿರುವಂತೆ, ವರ್ಗಹೋರಾಟದೊಂದಿಗೆ ಸಂಬಂಧವಿಲ್ಲದ ಒಂದು ಅಮೂರ್ತ ಆದರ್ಶವಾದಿ ರೀತಿಯಲ್ಲಿ ಎತ್ತಿಕೊಳ್ಳುವ ತಪ್ಪಿಗೆ ಸಿಕ್ಕಿಕೊಳ್ಳಬಾರದು. ಸಮಾಜದಲ್ಲಿನ ಕೊನೆಯಿಲ್ಲದ ಶೋಷಿತ ಮತ್ತು ಕಾರ್ಮಿಕರ ಸಮೂಹಗಳನ್ನೇ ಅಸಂಸ್ಕೃತಗೊಳಿಸುವುದರ ಮೇಲೆ ಆಧಾರಗೊಂಡಿರುವ ಧಾರ್ಮಿಕ ಪೂರ್ವಕಲ್ಪನೆಗಳನ್ನು ಕೇವಲ ಪ್ರಚಾರ ವಿಧಾನಗಳಿಂದ ಹೋಗಲಾಡಿಸಬಲ್ಲವೆಂದು ಯೋಚಿಸುವುದು ಅತ್ಯಂತ ಮೂರ್ಖತನವಾಗುವುದು. ಮಾನವ ಕುಲದ ಮೇಲೆ ಹೇರಿಕೊಂಡಿರುವ ಧಾರ್ಮಿಕ ನಂಬಿಕೆಗಳ ಹೊರೆಯು ಸಮಾಜದೊಳಗಿನ ಕೇವಲ ಆರ್ಥಿಕ ಹೊರೆಯ ಪರಿಣಾಮ ಮತ್ತು ಪ್ರತಿಬಿಂಬವೆಂಬುದನ್ನು ಮರೆತರೆ ಅದು ಬೂರ್ಜ್ವಾ ಸಂಕುಚಿತ ಮನೋಗತವಾಗುವುದು. ಬಂಡವಾಳವಾದದ ರಾಕ್ಷಸೀ ಶಕ್ತಿಯ ವಿರುದ್ಧ ತಮ್ಮದೇ ಸ್ವಂತ ಹೋರಾಟಗಳಿಂದ ಅದು ಜ್ಞಾನ ಪಡೆಯದಿದ್ದರೆ, ಎಷ್ಟೇ ಪ್ರಮಾಣದ ಪ್ರಚಾರ, ಪ್ರಕಟಣೆಗಳಿಂದಾಗಲೀ, ಎಷ್ಟೇ ಬೋಧನೆಗಳಿಂದಾಗಲೀ ಶ್ರಮಜೀವಿಗಳನ್ನು ಜ್ಞಾನವಂತರನ್ನಾಗಿ ಮಾಡಲು ಸಾಧ್ಯವಿಲ್ಲ. ದೇವಲೋಕದ ಸ್ವರ್ಗದ ಮೇಲಿನ ಶ್ರಮಜೀವಿ ಭಾವನೆಯ ಐಕ್ಯತೆಗಿಂತಲೂ ನಮಗೆ ಭೂಮಿಯ ಮೇಲೆಯೇ ಸ್ವರ್ಗವನ್ನು ಸೃಷ್ಟಿಸುವ ಈ ನಿಜವಾದ ಕ್ರಾಂತಿಕಾರಿ ಹೋರಾಟದಲ್ಲಿನ ಐಕ್ಯತೆಯು ಬಹುಮುಖ್ಯವಾದುದು.

ಈ ಕಾರಣಕ್ಕಾಗಿಯೇ ನಾವು ನಮ್ಮ ಕಾರ್ಯಕ್ರಮದಲ್ಲಿ ನಾಸ್ತಿಕವಾದವನ್ನು ಮುಂದಿಡುವುದಿಲ್ಲ ಮತ್ತು ಮುಂದಿಡಕೂಡದು. ಇದೇ ಕಾರಣದಿಂದಾಗಿಯೇ, ತಮ್ಮ ಹಳೆಯ ಪೂರ್ವಕಲ್ಪನೆಗಳ ಅವಶೇಷಗಳನ್ನು ಇನ್ನೂ ಉಳಿಸಿಕೊಂಡಿರುವ ಶ್ರಮಜೀವಿಗಳು ನಮ್ಮ ಪಾರ್ಟಿಯೊಂದಿಗೆ ಸಹಕರಿಸಲು ನಿಷೇಧಿಸಬಾರದು ಎಂದು ನಾವು ಹೇಳುವುದು. ಸದಾ ಕಾಲವೂ ನಾವು ವೈಜ್ಞಾನಿಕಪ್ರಪಂಚ ದೃಷ್ಟಿಕೋನವನ್ನೇ ಬೋಧಿಸುತ್ತೇವೆ ಮತ್ತು ಆಚರಿಸುತ್ತೇವೆ. ವಿವಿಧ "ಕ್ರಿಶ್ಚಿಯನ್ನ"ರ ಅದೃಢತೆಯೊಂದಿಗೆ ಹೋರಾಡಲು ಅದು ನಮಗೆ ಅಗತ್ಯವಿದೆ. ಆದರೆ ಇದರ ಅರ್ಥ ಧಾರ್ಮಿಕ ಪ್ರಶ್ನೆಯನ್ನು ಯಾವುದೇ ಅಳತೆಯಿಂದಲೂ ಪ್ರಥಮ ಸ್ಥಾನಕ್ಕೆ ತರುವುದೇನಲ್ಲ. ಅಷ್ಟಕ್ಕೆ ಅದು ಅರ್ಹವೂ ಅಲ್ಲ. ಅಲ್ಲದೆ ಅದರ ಅರ್ಥ, ಕೆಲಸಕ್ಕೆ ಬಾರದ ಅಭಿಪ್ರಾಯಗಳ ಅಥವ ಅರ್ಥಹೀನ ವಿಚಾರಗಳಿಗಾಗಿ ಎಲ್ಲಾ ರಾಜಕೀಯ ಪ್ರಾಮುಖ್ಯತೆಯನ್ನು ವೇಗದಿಂದ ಕಳೆದುಕೊಳ್ಳುತ್ತಿರುವ, ಆರ್ಥಿಕ ಅಭಿವೃದ್ಧಿಯ ಕ್ರಮದಿಂದಾಗಿ ಕೆಲಸಕ್ಕೆ ಬಾರದ್ದೆಂದು ಅತಿ ವೇಗದಿಂದಲೇ ಕೈಬಿಡಲ್ಪಡುತ್ತಿರುವ ಕೆಲಸಕ್ಕೆ ಬಾರದ ಅಭಿಪ್ರಾಯಗಳ ಅಥವ ಅರ್ಥವಿಹೀನ ವಿಚಾರಗಳಿಗಾಗಿ ನಿಜವಾದ ಕ್ರಾಂತಿಕಾರಿ ಆರ್ಥಿಕ ಮತ್ತು ರಾಜಕೀಯ ಹೋರಾಟದ ಶಕ್ತಿಗಳು ಛಿದ್ರವಾಗುವುದಕ್ಕೆ ಅವಕಾಶಕೊಡಬಾರದು.

ಧಾರ್ಮಿಕ ತಿಕ್ಕಾಟಗಳನ್ನು ಎಬ್ಬಿಸಲು ಪ್ರತಿಗಾಮಿ ಬೂರ್ಜ್ವಾಗಳು ಪ್ರತಿಯೊಂದು ಕಡೆಯೂ ತಲೆಹಾಕುತ್ತಿದ್ದಾರೆ. ಇವರು ಹೀಗೆ ತಲೆ ಹಾಕುವುದಲ್ಲದೆ ರಷ್ಯದ ಶ್ರಮಜೀವಿಗಳು ನಿಜವಾಗಿಯೂ ಮುಖ್ಯವಾದ ಮತ್ತು ಮೂಲಭೂತವಾದ ಆರ್ಥಿಕ ಮತ್ತು ರಾಜಕೀಯ ಹೋರಾಟಗಳಲ್ಲಿ ಒಂದಾಗುತ್ತಿರುವುದರ ಕಡೆಯಿಂದ ಜನಸಮೂಹಗಳ ಗಮನವನ್ನು ಬೇರೆ ಕಡೆ ತಿರುಗಿಸಲು ಈ ಪ್ರತಿಗಾಮಿ ಬೂರ್ಜ್ವಾಗಳು ಧಾರ್ಮಿಕ ತಿಕ್ಕಾಟಗಳನ್ನು ಎಬ್ಬಿಸುವುದರಲ್ಲಿ ತಾವೇ ಆಸಕ್ತರಾಗಿದ್ದಾರೆ. ಇಂದಿನ ಈ ಪ್ರತಿಗಾಮಿ ನೀತಿಗಳು ನಾಳೆ ಬೇರಾವುದೋ ಸೂಕ್ಷ್ಮ ರೂಪ ತಾಳಬಹುದು. ಏನೇ ಆಗಲಿ ನಾವಂತೂ ಪ್ರಾಮುಖ್ಯವಲ್ಲದ, ಭಿನ್ನಾಭಿಪ್ರಾಯಗಳನ್ನು ಕೆರಳಿಸದಿರುವ ಶ್ರಮಜೀವಿಗಳ ಐಕ್ಯತೆ ಮತ್ತು ವೈಜ್ಞಾನಿಕ ಪ್ರಪಂಚ ದೃಷ್ಟಿಕೋನವನ್ನು ಎಡೆಬಿಡದೆ ಸಮಾಧಾನದಿಂದ ಬೋಧಿಸುತ್ತೇವೆ.

ಕ್ರಾಂತಿಕಾರಿ ಶ್ರಮಜೀವಿಗಳು ಪ್ರಭುತ್ವದಷ್ಟಕ್ಕೆ ಸಂಬಂಧಪಟ್ಟಂತೆ ಧರ್ಮವನ್ನು ನಿಜವಾಗಿಯೂ ಒಂದು ಖಾಸಗೀ ವಿಷಯವನ್ನಾಗಿ ಮಾಡುವುದರಲ್ಲಿ ಜಯಶೀಲರಾಗಿಯೇ ಆಗುವರು. ಮತ್ತು ಮಧ್ಯಕಾಲೀನ ನಂಬಿಕೆಗಳಿಂದ ಬಿಡುಗಡೆಯಾದ ಅಂಥ ಒಂದು ರಾಜಕೀಯ ವ್ಯವಸ್ಥೆಯಡಿಯಲ್ಲಿ ಶ್ರಮಜೀವಿಯು ಮಾನವಕುಲವನ್ನು ವಂಚಿಸುತ್ತಿರುವ ಧಾರ್ಮಿಕ ನಂಬಿಕೆಗಳ ನಿಜಮೂಲವಾಗಿರುವ ಆರ್ಥಿಕ ಗುಲಾಮತನವನ್ನು ತೊಡೆದು ಹಾಕುವುದರಲ್ಲಿ ವಿಶಾಲವೂ ವಿಚಾರಪೂರಿತವೂ ಆದ ಬಹಿರಂಗ ಹೋರಾಟವನ್ನು ನಡೆಸಿಯೇ ನಡೆಸುವರು.

ಕನ್ನಡಕ್ಕೆ : ಕೃಷ್ಣಸ್ವಾಮಿ.

ವಿದ್ಯಾಭ್ಯಾಸ ಪದ್ಧತಿ-ಜನತಾ ದಾರಿ

—ಮು. ಇಕ್‌ಬಾಲ್ ಹುಸೇನ್

30 ವರ್ಷಗಳ ಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಜನತಾಪಕ್ಷ ಅಧಿಕಾರಕ್ಕೆ ಬಂದಾಗ ದೇಶದ ರಾಜಕೀಯದಲ್ಲಿ ಆದಂತೆ ವಿದ್ಯಾಭ್ಯಾಸ ಕ್ಷೇತ್ರದಲ್ಲಿಯೂ ಹಲವಾರು ಬದಲಾವಣೆಗಳನ್ನು ನಿರೀಕ್ಷಿಸಿದ್ದವರಿಗೆ, 1978–83ನೇ ಸಾಲಿನ ಕರಡು ಯೋಜನೆಯನ್ನು ವೀಕ್ಷಿಸಿದರೆ ನಿರಾಶೆಯುಂಟಾಗುತ್ತದೆ. ಯಾವ ಹೊಸ ಬದಲಾವಣೆಯೂ ಇಲ್ಲದೆ, ಜನತಾಪಕ್ಷ ಹಿಂದಿನ ಕಾಂಗ್ರೆಸ್ ಸರಕಾರದ ಹಾದಿಯನ್ನೇ ಹಿಡಿದಿದೆ.

ಯಾವುದೇ ಸರಕಾರ ಎಂತಹ ವಿದ್ಯಾಭ್ಯಾಸ ಪದ್ಧತಿ ಹೊಂದಿದೆ, ಏನನ್ನು ಯುವ ಪೀಳಿಗೆಗೆ ಹೇಳಿಕೊಡಲು ಬಯಸುತ್ತದೆ ಎಂಬುದು ಆಳುವ ಸರಕಾರ ಸಮಾಜದ ಯಾವ ವರ್ಗಗಳನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಅವಲಂಬಿಸಿದೆ. ಅಂತಿಮವಾಗಿ ಸಾಮಾಜಿಕ ಪದ್ಧತಿಯನ್ನು ರೂಪಿಸುವ ಅಸ್ತ್ರಗಳಲ್ಲಿ ವಿದ್ಯಾಭ್ಯಾಸವೂ ಒಂದು ಮುಖ್ಯ ಅಸ್ತ್ರವಾಗಿರುವುದರಿಂದ, ಸದ್ಯದ ಸಾಮಾಜಿಕ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಬೇಕೋ ? ಬೇಡವೊ ? ಎಂಬ ಸರಕಾರದ ತೀರ್ಮಾನದ ಮೇಲೆ ಕೂಡ ವಿದ್ಯಾಭ್ಯಾಸ ಪದ್ಧತಿ ಅವಲಂಬಿಸಿದೆ.

ಆಳುವ ವರ್ಗಗಳಿಗೆ ಎಂತಹ ಆಡಳಿತಗಾರರು, ಇಂಜಿನೀಯರು, ವಿಜ್ಞಾನಿಗಳು ಮತ್ತು ಬುದ್ಧಿಜೀವಿಗಳು ಬೇಕು ಎಂಬುದು, ವಿದ್ಯಾರ್ಥಿಗಳಿಗೆ ಎಂತಹ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ತಾತ್ವಿಕ ಶಿಕ್ಷಣ ಕೊಡಬೇಕು ಎನ್ನುವುದನ್ನು ನಿರ್ಧರಿಸುತ್ತದೆ. ಸಹಜವಾಗಿ ಆಳುವ ವರ್ಗಗಳ ಹಿತವನ್ನು ಕಾಪಾಡುವ ಶಿಕ್ಷಣವನ್ನೇ ಕೊಡಲಾಗುತ್ತದೆ. ಆದ್ದರಿಂದ, ಬೊಂಬಾಯಿಯ ಪ್ರೊ : ಕಾಮತ್‌ರವರು ಹೇಳುತ್ತಾರೆ.

"ವಿದ್ಯಾಭ್ಯಾಸ ಪದ್ಧತಿಯ ಬಗ್ಗೆ ಯಾರ ದೃಷ್ಟಿಕೋನ ಹೇಗೆ ಇದ್ದರೂ, ಆಧುನಿಕ ದೇಶಗಳ ವಿದ್ಯಾಭ್ಯಾಸವು ದೇಶದ ನೀತಿಯ ಮೇಲೆ ಅವಲಂಬಿಸಿದೆ. ಶಿಕ್ಷಣ ಪದ್ಧತಿ ತನ್ನ ಹಣಕಾಸಿಗಾಗಿ ಸರಕಾರದ ಆಶ್ರಯವನ್ನೇ ನಂಬಬೇಕಾಗಿರುವುದರಿಂದ, ಶಿಕ್ಷಣ ಕ್ರಮ, ಬೋಧನೆ, ಪರೀಕ್ಷೆ ಮುಂತಾದ ಮುಖ್ಯ ತೀರ್ಮಾನಗಳನ್ನು ಸರಕಾರದ ಶಿಕ್ಷಣ ನೀತಿ ರೂಪಿಸುತ್ತದೆ, ಅಂದರೆ ನಿಜವಾಗಿ ಈ ನೀತಿಯನ್ನು ರೂಪಿಸುವುದು ಸರಕಾರದ ರಾಜಕೀಯ ನಿಲುಮೆ".

ಜನತಾ ಸರಕಾರಕ್ಕೆ ಹಿಂದಿನ ಕಾಂಗ್ರೆಸ್ ಸರಕಾರದ ರಾಜಕೀಯ ನಿಲುಮೆ ಉಪ್ಪಾಗಲೀ, ವಿದ್ಯಾಭ್ಯಾಸ ಪದ್ಧತಿ ಉಪ್ಪಾಗಲೀ ಬದಲಾಯಿಸಲು ಇಷ್ಟವಿಲ್ಲ; ಜನತಾಪಕ್ಷದ ದೃಷ್ಟಿಯಲ್ಲಿ ವಿದ್ಯಾಭ್ಯಾಸ ಎಲ್ಲರಿಗೂ ಸಾಂಸ್ಕೃತಿಕ ಅಗತ್ಯವಲ್ಲ, ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು, ಪ್ರಜಾಸತ್ತಾತ್ಮಕ ಭಾರತದ ಜವಾಬ್ದಾರಿಯುತ ಪ್ರಜೆಯಾಗಲು ಹೆಚ್ಚಿನ ವಿದ್ಯಾಭ್ಯಾಸದ ಅಗತ್ಯವಿಲ್ಲ. ವಿದ್ಯಾಭ್ಯಾಸ ಹೇಗೆ ಹರಡಬೇಕೆಂದರೆ, ಜನತಾದವರ ದೃಷ್ಟಿಯಲ್ಲಿ ಅದು ಆಳುವ ವರ್ಗಗಳ ಮತ್ತು ಪದ್ಧತಿಯ ವಿರುದ್ಧ ಅತೃಪ್ತಿಯನ್ನು ಉಂಟುಮಾಡಬಾರದು.

ಬ್ರಿಟಿಷರು ಭಾರತವನ್ನು ಆಳುವಾಗ ಭಾರತೀಯರಿಗೆ ಉಚ್ಚ ಶಿಕ್ಷಣ ನೀಡಲು ಹೆದರುತ್ತಿದ್ದರು; ಬ್ರಿಟಿಷ್ ಆಡಳಿತೆಗೆಬೇಕಾದ ಗುಮಾಸ್ತರು ಮತ್ತು ಆಡಳಿತಗಾರರನ್ನು ಸ್ಥಳೀಯವಾಗಿ ಪಡೆಯಲು ಮಾತ್ರ ವಿಶ್ವವಿದ್ಯಾಲಯ ಶಿಕ್ಷಣ ಕೊಡುತ್ತಿದ್ದರು. ಬ್ರಿಟಿಷರ ದೃಷ್ಟಿಯಲ್ಲಿ ವಿಶ್ವವಿದ್ಯಾಲಯಗಳು ಬ್ರಿಟಿಷ್ ವಿರೋಧಿ, ಕ್ರಾಂತಿಕಾರಿ ಪಿತೂರಿಗಾರರ ನರ್ಸರಿಗಳು.

ಕಾಂಗ್ರೆಸ್ ಮತ್ತು ಜನತಾ ಆಡಳಿತಗಾರರಿಗೂ ವಿಶ್ವವಿದ್ಯಾಲಯಗಳ ಬಗ್ಗೆ ಸಂಶಯವಿರುವುದರಿಂದ ಉಚ್ಚ ಶಿಕ್ಷಣ ಬೇಡವೆನ್ನುತ್ತಾರೆ. ಉಚ್ಚ ಶಿಕ್ಷಣ ಬೇಡವೆಂದು ಕಾಂಗ್ರೆಸ್ ಮತ್ತು ಜನತಾದವರು ನೀಡುವ ಕಾರಣಗಳು ಜನಗಳನ್ನು ದಾರಿ ತಪ್ಪಿಸುವಂತಹುದು. ಅವರ ವಾದ ಏನೆಂದರೆ, ವಿಶ್ವವಿದ್ಯಾಲಯದ ವಿದ್ಯಾಭ್ಯಾಸವೆಂದರೆ, ಮೇಲು ವರ್ಗದವರ ವಿದ್ಯಾಭ್ಯಾಸ. ಕೆಳವರ್ಗದವರಿಗೆ, ಪ್ರಾಥಮಿಕ ವಿದ್ಯಾಭ್ಯಾಸವೇ ಇಲ್ಲದಿರುವಾಗ ಹೆಚ್ಚಿನ ವಿದ್ಯಾಭ್ಯಾಸ ಏಕೆಂಬುದು ಅವರ ಪ್ರಶ್ನೆ. ಅವರ ಪ್ರಶ್ನೆ ಕೆಳವರ್ಗದವರ ಹಿತವನ್ನು ಕಾಪಾಡುವಂತೆ ಕಂಡರೂ, ಇಲ್ಲಿ ಕೇಳಬೇಕಾದ ಪ್ರಶ್ನೆಯೆಂದರೆ, ಕೆಳವರ್ಗದವರಿಗೆ ಬರೀ ಪ್ರಾಥಮಿಕ ವಿದ್ಯಾಭ್ಯಾಸವೇ ಸಾಕೆ ? ಇದು ವರ್ಣಾಶ್ರಮ ಪದ್ಧತಿಯಲ್ಲಿ ಬ್ರಾಹ್ಮಣರು ಬೋಧಿಸುತ್ತಿದ್ದ ನೀತಿ ಹಾಗೂ ವರ್ಗಸಹಯೋಗ ನೀತಿಯಾಗಿದೆ.

ಇಂದು ದೇಶದ ಕೋಟಿ ಕೋಟಿ ಯುವ ಜನಾಂಗಕ್ಕೆ ಒಳ್ಳೆಯ ಉದ್ಯೋಗ, ಹಾಗೂ ಸಾಮಾಜಿಕ ಸೌಲಭ್ಯಗಳನ್ನು ದೊರಕಿಸಲು ವಿಶ್ವವಿದ್ಯಾಲಯ ಮಟ್ಟದ ವಿದ್ಯಾಭ್ಯಾಸ ಅಗತ್ಯವಾಗಿದೆ. ವಾಸ್ತವವಾಗಿ, ವಿಶ್ವವಿದ್ಯಾಲಯ ವಿದ್ಯಾಭ್ಯಾಸ ಬೇಡವೆನ್ನುವುದು, ಹಿಂದುಳಿದ ವರ್ಗಗಳ, ಕೆಳಮಧ್ಯಮ ವರ್ಗದ ಹಾಗೂ ರೈತ, ಕಾರ್ಮಿಕರ ಮಕ್ಕಳನ್ನು ವಿಶ್ವವಿದ್ಯಾಲಯಗಳಿಂದ ದೂರವಿರಿಸುವ ತಂತ್ರವಾಗಿದೆ.

ಕರಡು ಜನತಾ ಯೋಜನೆ (ಪುಟ ಸಂ. 2) ತನ್ನ ವರದಿಯಲ್ಲಿ ಹೀಗೆ ಹೇಳಿದೆ "ಪ್ರೌಢಶಾಲೆಗಿಂತ ಮೇಲಿನ ಶಿಕ್ಷಣಕ್ಕಾಗಿ ಸೇರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ 1950-51ರಲ್ಲಿ 4,16000 ದಿಂದ 3 ಮಿಲಿಯನ್‌ಗೆ ಏರಿರುವುದು, ಯುವಶಕ್ತಿಯ ಅನುಪಯುಕ್ತತೆ ಮತ್ತು ಹೆಚ್ಚಿನ ನಿರುದ್ಯೋಗಿ ಪದವೀಧರರನ್ನು ನಿರ್ಮಿಸುತ್ತಿದೆ". ಯೂನಿವರ್ಸಿಟಿ ಶಿಕ್ಷಣವನ್ನು ಮೊದಲೇ ನಿರ್ಬಂಧಿಸಿರುವಾಗ, ಜನತಾದವರ ಆರನೇ ಯೋಜನೆ ಕರಡು ವರದಿ ಹೀಗಿದೆ. "ನಾಲ್ಕನೇ ಯೋಜನೆವರೆಗೂ ದೇಶದಲ್ಲಿ ಸರಿಯಾದ ಯೋಜನೆಯಿಲ್ಲದೆ, ಉಚ್ಚ ಶಿಕ್ಷಣವನ್ನು ಹರಡಲು ಉತ್ತೇಜನ ನೀಡಲಾಯಿತು. ಐದನೇ ಯೋಜನೆಯಲ್ಲಿ, ಉಚ್ಚ ಶಿಕ್ಷಣಕ್ಕೆ ಪ್ರವೇಶವನ್ನು ನಿಯಂತ್ರಿಸಿದರಿಂದ ಹಾಗೂ ಹೊಸ ಶಿಕ್ಷಣ ಪದ್ಧತಿಯ ಅಳವಡಿಕೆಯಿಂದ ಕಾಲೇಜು ಶಿಕ್ಷಣ ಪಡೆದವರ ಸಂಖ್ಯೆ ನಿಯಮಿತಗೊಳಿಸಲಾಯಿತು. ಯೂನಿವರ್ಸಿಟಿ ವಿದ್ಯಾಭ್ಯಾಸವನ್ನು ನಿಯಂತ್ರಿಸುವುದೇ ಹೊಸ ಶಿಕ್ಷಣ ನೀತಿಯಾಗಿದೆ. ಇದು ಹೊಸ ಬೆಳವಣಿಗೆಯಾಗಿದ್ದು, ಇದರ ಪ್ರಯೋಜನ ಮುಂದಿನ ಯೋಜನೆಯಲ್ಲಿ ಫಲನೀಡುವುದು" (ಕರಡು ಯೋಜನೆ ಪು. 223).

ಜನತಾ ಸರಕಾರ, ಕಾಂಗ್ರೆಸ್‌ನ ವರ್ಷ ಪ್ರಾರಂಭಿಸಿದ ಕೆಲಸವನ್ನು ಸಂಪೂರ್ಣಮಾಡಿ ಅದರ ಫಲ ಪಡೆಯಲು ನಿರ್ಧರಿಸಿದೆ. ಕಾಲೇಜಿಗೆ ಪ್ರವೇಶ ಸಿಗದೆ ನಿರಾಶರಾದ ಸಹಸ್ರಾರು ಯುವಕರು ಜನತಾಪಕ್ಷ, ಕಾಂಗ್ರೆಸ್‌ಪಕ್ಷದ ಹಾದಿಯಲ್ಲಿಯೇ ಸಾಗುತ್ತಿರುವುದನ್ನು ಗಮನಿಸಬೇಕಾಗಿದೆ. ಸರ್ವಾಧಿಕಾರಿ ಶಕ್ತಿಗಳನ್ನು ಬೆಂಬಲಿಸುವ ಹಾಗೂ ವಿರೋಧಿಸುವ ಪಕ್ಷಗಳು ವಿದ್ಯಾಭ್ಯಾಸದ ಬಗ್ಗೆ ಏಕಾಭಿಪ್ರಾಯವನ್ನು ಹೊಂದಿರುವುದು ಹೇಗೆ ? ಹೇಗೆಂದರೆ, ಎರಡೂ ಪಕ್ಷಗಳು ಪ್ರತಿನಿಧಿಸುತ್ತಿರುವುದು ಒಂದೇ ವರ್ಗವನ್ನು.

ಶೋಷಿತ ವರ್ಗದವರನ್ನು ಉಚ್ಚ ಶಿಕ್ಷಣದಿಂದ ದೂರವಿರಿಸುವುದಕ್ಕೆ, ಡೊನೇಷನ್, ಹೆಚ್ಚಿನ ತಿಂಗಳ ಶುಲ್ಕ, ಮೆರಿಟ್, ವಶೀಲಿ ಮತ್ತು ವಿದ್ಯಾರ್ಥಿಗಳ ಆಯ್ಕೆಯ ನಾಟಕ ನಡೆಯುತ್ತದೆ.

ಉಚ್ಚ ಶಿಕ್ಷಣದ ನಿರುಪಯುಕ್ತತೆ ಮತ್ತು ನಿರುದ್ಯೋಗಿ ಪದವೀಧರರ ಸೈನ್ಯ ಬಂಡವಾಳಶಾಹಿ ಪದ್ಧತಿಯ ದೋಷಗಳನ್ನು ಎತ್ತಿ ತೋರಿಸುತ್ತಿದೆ. ತಾಂತ್ರಿಕ ಶಿಕ್ಷಣ ಪಡೆದಿರುವವರ ಸ್ಥಿತಿಯಾದರೂ ಏನು ? ಕರಡು ಆರನೇಯೋಜನೆಇಂಜಿನೀಯರುಗಳನ್ನು ಸಹಾ ಇತರೆ ಸಾಮಗ್ರಿಗಳಂತೆ ಪರಿಗಣಿಸಿದೆ, "ಇಂಜಿನೀಯರಿಂಗ್ ಪದವೀಧರರು ಮತ್ತು ಡಿಪ್ಲೋಮಾ ಪಡೆದಿರುವವರ ಸಂಖ್ಯೆ ಮಾರುಕಟ್ಟೆಯ ಬೇಡಿಕೆಗಿಂತ ಅಧಿಕವಾಗಿದೆ, ಸದ್ಯ ಇರುವ ಕಾಲೇಜುಗಳಿಂದ ಬರುತ್ತಿರುವ ಇಂಜಿನೀಯರಿಂಗ್ ಪದವೀಧರರು ಮತ್ತು ಡಿಪ್ಲೋಮಾದಾರರು ನಮ್ಮ ಅವಶ್ಯಕತೆಗಿಂತ ಹೆಚ್ಚಾಗಿದ್ದಾರೆ. ಆದ್ದರಿಂದ, ಇಂಜಿನೀಯರಿಂಗ್ ಶಿಕ್ಷಣ ನೀಡುವ ಕಾಲೇಜುಗಳ ಉತ್ಪಾದನಾ ಸಾಮರ್ಥ್ಯವನ್ನು ಮುಂದಿನ ಹತ್ತು ವರ್ಷಗಳವರೆಗೆ ವಿಸ್ತರಿಸದಿರಲು ನಿರ್ಧರಿಸಲಾಗಿದೆ".

ಮಾಧ್ಯಮಿಕ ಮತ್ತು ಪ್ರಾಥಮಿಕ ವಿದ್ಯಾಭ್ಯಾಸಕ್ಕಾದರೂ ಆದ್ಯತೆ ನೀಡಲಾಗಿದೆಯೇ ? ಪ್ರಾಥಮಿಕ ಶಾಲೆಯನ್ನು ಸೇರುವ ವಿದ್ಯಾರ್ಥಿಗಳ ಶೇಕಡಾವಾರು ಸಂಖ್ಯೆ 32ರಿಂದ 69ಕ್ಕೆ ಏರಿದೆ, ಮಾಧ್ಯಮಿಕ ಶಾಲೆಯನ್ನು ಸೇರುವ ವಿದ್ಯಾರ್ಥಿಗಳ ಶೇಕಡಾವಾರು ಸಂಖ್ಯೆ 5ರಿಂದ 25ಕ್ಕೆ ಏರಿದೆಯಾದರೂ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸವನ್ನು ಮುಂದುವರಿಸುವ ವಿದ್ಯಾರ್ಥಿಗಳ ಶೇಕಡ ಸಂಖ್ಯೆ ಮಾತ್ರ ವರ್ಷದಿಂದ ವರ್ಷಕ್ಕೆ ಇಳಿಯುತ್ತಿದೆ, ಉದಾ : 6ರಿಂದ 11 ವರ್ಷದ ವಿದ್ಯಾರ್ಥಿಗಳು ಶೇ. 69 ರಷ್ಟು ಶಾಲೆಯನ್ನು ಸೇರಿದರೆ, 11ರಿಂದ 14ರವರೆಗಿನ ವಿದ್ಯಾರ್ಥಿಗಳು ಕೇವಲ ಶೇ. 40ರಷ್ಟು ಮಾತ್ರ. ಇದು ಐದನೇ ಪಂಚವಾರ್ಷಿಕ ಯೋಜನೆಯ ಅಂಕಿ, ಸಂಖ್ಯೆಗಳು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸ ಪಡೆಯುವ ಸೌಲಭ್ಯದಿಂದ ಅಸಂಖ್ಯಾತ ಬಾಲಕ, ಬಾಲಕಿಯರು ವಂಚಿತರಾಗುವುದಕ್ಕೆ, ನಮ್ಮ ವಿದ್ಯಾಭ್ಯಾಸ ದುಬಾರಿಯಾಗಿರುವುದು ಹಾಗೂ ಜನಸಾಮಾನ್ಯರ ಜೀವನಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿರುವುದೇ ಕಾರಣ.

ಪ್ರಾಥಮಿಕ, ಮಾಧ್ಯಮಿಕದಿಂದ ವಿಶ್ವವಿದ್ಯಾಲಯದವರೆಗಿನ ಶಿಕ್ಷಣ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಮೇಲು ವರ್ಗದವರಿಗೆ ಮಾತ್ರ ಎಟುಕುವಂತೆ ಮಾಡಿರುವುದರಿಂದ ಶೋಷಿತವರ್ಗ ವಿದ್ಯಾಭ್ಯಾಸ ಪಡೆಯುವ ಅವಕಾಶಗಳನ್ನು ಸರಕಾರ ಪರೋಕ್ಷವಾಗಿ ಸೀಮಿತಗೊಳಿಸಿದೆ.

ಸರಿಯಾದ ಸಂಬಳವಿಲ್ಲದ, ತರಬೇತಿಯಿಲ್ಲದ ಶಿಕ್ಷಕರು, ಅವ್ಯವಸ್ಥಿತ ಶಾಲಾ ಕಾಲೇಜುಗಳು, ವ್ಯವಸ್ಥೆಯ ವಿರುದ್ಧ ಬಂಡೇಳದಂತೆ ಮಾಡುವ ಶಿಕ್ಷಣ ಪದ್ಧತಿ, ಜನತಾಪಕ್ಷದ ಆಳ್ವಿಕೆಯಲ್ಲಿ ಪ್ರಾರಂಭವಾಗುತ್ತಿರುವ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಇಲ್ಲವಾಗುತ್ತವೆಯೆಂದು ಭಾವಿಸುವುದು ಭ್ರಮೆಯೇ ಸರಿ. ಪ್ರಾಥಮಿಕ ಶಿಕ್ಷಣವನ್ನು ಹತ್ತು ವರ್ಷಗಳಲ್ಲಿ ಎಲ್ಲರಿಗೂ ಸಿಗುವಂತೆ ಮಾಡುತ್ತೇವೆ, ವಯಸ್ಕರ ಶಿಕ್ಷಣಕ್ಕಾಗಿ ಅಪಾರ ಹಣವನ್ನು ಖರ್ಚು ಮಾಡುತ್ತಿದ್ದೇವೆ ಎಂದು ಹೇಳುವ ಆಳುವ ಪಕ್ಷದ ಭರವಸೆ ಎಷ್ಟು ಪೊಳ್ಳು ಎಂಬುದಕ್ಕೆ ಕೇಂದ್ರ ಸರಕಾರ ತನ್ನ ಒಟ್ಟು ಬಜೆಟ್‌ನಲ್ಲಿ ಕೇವಲ ಶೇ. 6ರಷ್ಟು ಮಾತ್ರ ವಿದ್ಯಾಭ್ಯಾಸಕ್ಕೆ ವೆಚ್ಚ ಮಾಡುತ್ತಿದೆ ಎಂಬ ಅಂಶದಿಂದ ಸ್ಪಷ್ಟವಾಗುತ್ತದೆ.

ವಿಶ್ವವಿದ್ಯಾಲಯಗಳು ವಿದ್ಯಾರ್ಥಿ ಚಳುವಳಿಯ ಕೇಂದ್ರಗಳಾಗುತ್ತಿರುವುದು ಮತ್ತು ಎಸ್. ಎಫ್. ಐ. ನಂತಹ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು, ವಿದ್ಯಾರ್ಥಿಗಳ ಸಂಘಟನಾ ಹಕ್ಕು, ಪ್ರಜಾಸತ್ತಾತ್ಮಕ ಮೌಲ್ಯಗಳು ಉಳಿಯಬೇಕೆಂದು ಹೋರಾಡುವುದರ ಜೊತೆಗೆ ಸರ್ವಾಧಿಕಾರತ್ವ, ಬಂಡವಾಳಶಾಹಿತ್ವ ಹಾಗೂ ಆರೆಸ್ಸೆಸ್ಸಿನಂತಹ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಹೋರಾಡುವುದಕ್ಕೆ ಕರೆಕೊಟ್ಟಿದೆ. ಅಲ್ಲದೆ, ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ. ಹತ್ತರಷ್ಟು ವಿದ್ಯಾಭ್ಯಾಸಕ್ಕೆ ಮೀಸಲಾಗಿಡಬೇಕೆಂಬ ಬೇಡಿಕೆಯನ್ನಿಟ್ಟು ವಿದ್ಯಾರ್ಥಿ ಸಮುದಾಯವನ್ನು ಮುನ್ನಡೆಸುತ್ತಿರುವುದು ಕಾಂಗ್ರೆಸ್‌ನಂತೆ, ಜನತಾ ಪಕ್ಷಕ್ಕೂ ಸಹಿಸದಾಗಿದೆ. ಆದ್ದರಿಂದ ಜನತಾಪಕ್ಷ ವಿದ್ಯಾಭ್ಯಾಸದ ಬಗ್ಗೆ ನಿರಕ್ಷರತೆಯನ್ನು ನಿರ್ಮೂಲ ಮಾಡುವ ಬಗ್ಗೆ ಖರ್ಚು ಮಾಡುತ್ತಿರುವ ಹಣವನ್ನು ಕುರಿತು ಮಾಡುತ್ತಿರುವ ಪ್ರಚಾರ ಕೇವಲ ಜನರನ್ನು ದಾರಿತಪ್ಪಿಸುವ ತಂತ್ರ ಅಷ್ಟೆ. ಬಂಡವಾಳಶಾಹಿ ಪದ್ಧತಿ ಎಲ್ಲಿದ್ದರೂ ಯಾವ ಸ್ವರೂಪದಲ್ಲಿದ್ದರೂ ತನ್ನ ಅಸ್ತಿತ್ವದ ಗುರುತು ತೋರಿಸಿಯೇ ತೋರಿಸುತ್ತದೆ. ●

ಆರ್ಥಿಕ ಸಮೀಕ್ಷೆ

ಕೃಷಿಕಾರ್ಮಿಕರ ಗ್ರಾಹಕಶಕ್ತಿಯು ಕ್ಷಯಿಸುತ್ತಿದೆ

—ಆರ್. ಚಂದ್ರ

ಕೃಷಿ ಕಾರ್ಮಿಕರ ಕನಿಷ್ಠಕೂಲಿ ದರಗಳು

ಸರಕಾರ	ಜಾರಿಗೆ ಬಂದ ತಾರೀಖು	ದಿನಗೂಲಿ ದರಗಳು (ರೂ.)
ಕೇಂದ್ರಸರಕಾರ	18.9.76	4.45/6.50
ಆಂಧ್ರಪ್ರದೇಶ	2.12.75	3.00/5.00
ಅಸ್ಸಾಂ	.10.74	5.00/6.00
ಬಿಹಾರ್	.7.75	4.50/5.00 (+ಕಾಫಿತಿಂಡಿ)
ಗುಜರಾತ್	5.1.76	5.50/20.00 ವರ್ಷಕ್ಕೆ
ಹರಿಯಾಣ	31.12.75	7.00
ಹಿಮಾಚಲಪ್ರದೇಶ	15.7.75	4.25
ಜಮ್ಮು ಕಾಶ್ಮೀರ ಇನ್ನೂ ನಿಗದಿಯಾಗಲಿಲ್ಲ		
ಕರ್ನಾಟಕ	2.10.75	3.65/5.00
ಕೇರಳ	15.9.75	6.50/8.00
ಮಧ್ಯಪ್ರದೇಶ	2.10.75	3.50/4.00
ಮಹಾರಾಷ್ಟ್ರ	.3.74	3.00/4.50
ಮಣಿಪುರ	1977	6.50
ಮೇಘಾಲಯ	2.9.75	5.00
ನಾಗಾಲ್ಯಾಂಡ್	31.1.78	8.00
ಒರಿಸ್ಸಾ	1.1.78	4.00
ಪಂಜಾಬ್	11.1.75	6.70/8.70
ರಾಜಸ್ಥಾನ	.1.75	4.25/5.00
ಸಿಕ್ಕಿಂ	1948 ರ ಕನಿಷ್ಠ ಕೂಲಿ ಕಾಯಿದೆ ಇನ್ನೂ ಜಾರಿಗೆ ಬರಲಿಲ್ಲ	
ತಮಿಳುನಾಡು	2.3.76	3.50/5.00
ತ್ರಿಪುರಾ	15.8.75	4.00
ಉ. ಪ್ರದೇಶ	23.10.75	4.50/6.50
ಪ. ಬಂಗಾಳ	1.10.75	8.10/145.70 ತಿಂಗಳಿಗೆ
ಕೇಂದ್ರಾಡಳಿತ ಪ್ರದೇಶಗಳು	...	3.50/9.50

ಆಧಾರ: 31.3.78ಕ್ಕನುಗುಣವಾಗಿ, ಕೇಂದ್ರ ಕಾರ್ಮಿಕ ಖಾತೆ, ಭೂತಲಿಂಗಂ ವರದಿಯಿಂದ ಆಯ್ದದ್ದು.

ದೇಶದ ಅಸಂಖ್ಯಾತ ಕೃಷಿಕಾರ್ಮಿಕರ ಜೀವನಸ್ಥಿತಿಯು ಅತ್ಯಂತ ಚಿಂತಾಜನಕವಾಗಿದೆ. ಎರಡನೇ ಜಾಗತಿಕ ಯುದ್ಧಾನಂತರ ಈ ಬಡಕೂಲಿಗಾರರ ಪರಿಸ್ಥಿತಿ ಇದೇ ಮೊದಲು ಭಾರೀ ದುರವಸ್ಥೆಗೊಳಗಾಗಿದೆ. ಸ್ವಾತಂತ್ರ್ಯೋತ್ತರದ ವರುಷಗಳಲ್ಲಿ ಕೃಷಿಕಾರ್ಮಿಕರ ಸಂಖ್ಯೆಯು ಹೆಚ್ಚುತ್ತಿದೆ; ರೈತರ ಸಂಖ್ಯೆಯು ಕಡಿಮೆಯಾಗುತ್ತಿದೆ. "ಭೂಸುಧಾರಣೆ"ಯು "ಭೂಮಾಲಕರ ಸುಧಾರಣೆ"ಯಾಗುತ್ತಿದೆ. ಕೃಷಿಕಾರ್ಮಿಕರ ಸಂಖ್ಯೆಯು ಹೆಚ್ಚಿದಂತೆ, ಅವರ ಕೂಲಿ ದರಗಳೂ ಉದ್ಯೋಗಾವಕಾಶಗಳೂ ಕಡಿಮೆಯಾಗುತ್ತಿವೆ. ಅವರ ಗ್ರಾಹಕ ಶಕ್ತಿಯು ಕ್ಷಯಿಸುತ್ತಿದೆ ಮತ್ತು ಸಾಲದ ಹೊರೆಯು ಹೆಚ್ಚುತ್ತಿದೆ. ಅವರಿಗೆ ಉಳಲು ಹೇಗೂ ಒಂದು ಗೇಣು ಭೂಮಿಯೂ ಇಲ್ಲ; ಉಳಿದುಕೊಳ್ಳಲೂ ಒಂದು ಮನೆಯಡಿ ಜಾಗವೂ ಇಲ್ಲ.

1978ರ ಮಾರ್ಚ್ ಅಂತ್ಯದಲ್ಲಿ ನಮ್ಮ ದೇಶದ ಒಟ್ಟು 625 ಮಿಲಿಯ ಜನಸಂಖ್ಯೆಯಲ್ಲಿ 260.82 ಮಿಲಿಯ ಉದ್ಯೋಗಸ್ಥರಾಗಿದ್ದು, ಅವರಲ್ಲಿ ಕೂಲಿಸಂಬಳಕ್ಕಾಗಿ ದುಡಿಯುವ 100.54 ಮಿಲಿಯ ಜನರಲ್ಲಿ ಕೃಷಿಕಾರ್ಮಿಕರ ಸಂಖ್ಯೆಯೇ 58.34 ಮಿಲಿಯವಾಗಿತ್ತು (ಆರನೇ ಪಂಚವಾರ್ಷಿಕ ಯೋಜನೆ: 1978–83). ಕೃಷಿಕಾರ್ಮಿಕರ ಸಂಖ್ಯೆಯು 1961ರಿಂದ 1971ರಲ್ಲಿ 29.89 ಮಿಲಿಯದಿಂದ 44.22 ಮಿಲಿಯಕ್ಕೆ ಏರಿದ್ದು, ಮುಂದಿನ ಏಳು ವರುಷಗಳಲ್ಲಿ 14.12 ಮಿಲಿಯದಷ್ಟು ಹೆಚ್ಚಾಯಿತು. ಕಾಂಗ್ರೆಸ್ ಆಡಳಿತದಲ್ಲಿ, 'ಭೂಸುಧಾರಣೆ' ಯಿಂದ ಉಳುವವನಿಗೇ ಭೂಮಿ ದೊರಕಲಿಲ್ಲ. ಬದಲು, ವ್ಯವಸಾಯ ಉದ್ಯಮವು 'ಹಸಿರು ಕ್ರಾಂತಿಯ' ಕಾರ್ಯಕ್ರಮಗಳಿಂದಾಗಿ ಲಾಭದಾಯಕವಾಗುತ್ತಾ ಬಂದಂತೆ, ಭೂಮಾಲಕರು ಶ್ರೀಮಂತ ರೈತರು ವ್ಯವಸಾಯ ಯೋಗ್ಯವಾದ ಭೂಮಿಯನ್ನು ತಮ್ಮ ತಮ್ಮ ಸಂಬಂಧಿಕರೊಳಗೇ ಹಂಚಿಕೊಂಡರು. ಅನೇಕರು ತಮ್ಮ ಬಿನಾಮಿ ಹೆಸರುಗಳಲ್ಲಿ ವ್ಯವಸಾಯ ಭೂಮಿಯನ್ನು ಉಳಿಸಿಕೊಂಡರು. ಒಟ್ಟಿನಲ್ಲಿ, ದಾಖಲೆ ನೋಡಿದರೆ, ಅವರ ಹಿಡುವಳಿಗಳೂ ಭೂಮಿತಿ ಕಾಯಿದೆಗನುಗುಣವಾಗಿಯೇ ಇರುವಂತೆ ಜಾಗರೂಕತೆ ಮಾಡಿದರು. ಸಹಕಾರಿ ಸಂಘಗಳ ಮೂಲಕವೂ ದೊಡ್ಡ ಭೂಮಾಲಕರೂ ಶ್ರೀಮಂತ ರೈತರೂ ಭಾರೀ ಪ್ರಮಾಣದಲ್ಲಿ ವ್ಯವಸಾಯ ಭೂಮಿಯ ಮೇಲೆ ತಮ್ಮ ಸ್ವಾಧೀನತೆ ಸ್ಥಾಪಿಸಿದರು. ಸರಕಾರಿ ಭೂಮಿಯನ್ನೂ ಸಾಕಷ್ಟು ಗಿಟ್ಟಿಸಿಕೊಂಡರು. ಜೊತೆಗೇ, ಬಡರೈತರನ್ನು ದಬ್ಬಾಳಿಕೆಯಿಂದಲೂ ಒತ್ತಾಯದಿಂದಲೂ ಒಕ್ಕಲೆಬ್ಬಿಸಿದರು. ಬಹುಮಂದಿ ಬಡರೈತರು ತಮ್ಮ ಚಿಕ್ಕ ಹಿಡುವಳಿಗಳಲ್ಲಿ ಲಾಭದಾಯಕವಾಗಿ ವ್ಯವಸಾಯ ಮಾಡಲಾರದಾದರು. ಭೂಸುಧಾರಣೆಯ ಕಾಯಿದೆಯಂತೆ ಅಲ್ಪಸ್ವಲ್ಪ ಬಡವರಿಗೆ ಹಂಚಿದ ಭೂಮಿಯನ್ನೂ ಬಡರೈತರು ತಮ್ಮ ತೀವ್ರ ಆರ್ಥಿಕ ದುಃಸ್ಥಿತಿಯಿಂದಾಗಿ ಹೆಚ್ಚು ಕಾಲ ಉಳಿಸಿಕೊಳ್ಳಲಾರದಾದರು. ವರುಷಗಳು ಉರುಳುತ್ತಾ ಬಂದಂತೆ, ಅಸಂಖ್ಯಾತ ಬಡರೈತರು ತಮ್ಮ ಭೂಮಿ ಕಳೆದುಕೊಂಡು ಕೂಲಿಗಾಗಿ ಉಳುವ ಕೃಷಿಕಾರ್ಮಿಕರ ಸಾಲಿಗೆ ಸೇರತೊಡಗಿದರು. ಜೀವನಾಧಾರಕ್ಕಾಗಿ ಅವರು ಒಂದು ತುಂಡು ಭೂಮಿಯನ್ನು ಪಡೆಯುವ ಕನಸು ನನಸಾಗದೆ, ಅವರ ನಿರುದ್ಯೋಗ, ಬಡತನ, ದಾರಿದ್ರ್ಯ, ಋಣ ಭಾರ ಇನ್ನಷ್ಟು ಹೆಚ್ಚಾದವು.

1968ರಲ್ಲಿ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಮಹಲನೋಬಿಸ್‌ರ ಸಮಿತಿಯ ವರದಿಯಂತೆ, ಭೂಮಸೂದೆಗಳು ಜಾರಿಗೆ ಬಂದಾಗ ಮತ್ತು 20 ಎಕರೆಗಳಷ್ಟು ಭೂಮಿತಿ ವಿಧಿಸಿದಾಗ, ದೇಶದಲ್ಲಿ ಒಟ್ಟು 630 ಲಕ್ಷ ಎಕರೆಗಳಷ್ಟು ವ್ಯವಸಾಯ ಭೂಮಿ ಮರುವಿತರಣೆಗೆ ಸಿಗುವುದೆಂದು ಅಂದಾಜು ಮಾಡಲಾಗಿತ್ತು. ಡಾಂಡೇಕರ್ ಮತ್ತು ರಾತ್ ಅರ್ಥಶಾಸ್ತ್ರಜ್ಞರು 420 ಲಕ್ಷ ಹೆಚ್ಚುವರಿ ಭೂಮಿ ಸಿಗುವುದೆಂದು 1970-71ರಲ್ಲಿ ಅಂದಾಜು ಮಾಡಿದ್ದರು. ಮುಂದೆ 1972ರಲ್ಲಿ ಕೇಂದ್ರ ಕೃಷಿಮಂತ್ರಿಯ ಹೇಳಿಕೆಯಂತೆ, ಹೆಚ್ಚುವರಿ ಭೂಮಿಯ ಅಂದಾಜು 400 ಲಕ್ಷ ಎಕರೆಗಳಿಗಿಳಿಯಿತು. ಆದರೆ, ಸದ್ಯದ ಸರಕಾರದ ಆರ್ಥಿಕ ಸಮೀಕ್ಷೆಯಂತೆ ಇದು ತನಕ ಕೇವಲ 46 ಲಕ್ಷ ಎಕರೆಗಳಷ್ಟೇ ಭೂಮಿಯನ್ನು ಹೆಚ್ಚುವರಿ ವೆಂದು ಧೃಡೀಕರಿಸಲಾಗಿದ್ದು, ಅದರಲ್ಲೂ ಕೇವಲ 16 ಲಕ್ಷ ಎಕರೆ ಹೆಚ್ಚುವರಿ ಭೂಮಿಯನ್ನಷ್ಟೇ ಮರು ವಿತರಣೆಮಾಡಲಾಗಿದೆ. ಈ ಮಧ್ಯೆ, 1975ರಲ್ಲಿ ಪ್ರಕಟವಾದ 1971ರ ಪ್ರಥಮ ಕೃಷಿಗಣನೆಯಂತೆ, ದೇಶದ ಒಟ್ಟು 705 ಲಕ್ಷ ಭೂಹಿಡುವಳಿದಾರರಲ್ಲಿ, ನೂರು ಎಕರೆಗಳಿಗಿಂತಲೂ ಹೆಚ್ಚು ಹಿಡುವಳಿ ಇರುವ ಕೇವಲ 28 ಲಕ್ಷ ಹಿಡುವಳಿದಾರರು ಶೇ. 4ರಷ್ಟು ಹಿಡುವಳಿದಾರರು ದೇಶದ ಒಟ್ಟು 1621 ಲಕ್ಷ ಎಕರೆ ವ್ಯವಸಾಯ ಭೂಮಿಯಲ್ಲಿ ಶೇ. 31ರಷ್ಟು ಅಂದರೆ 500ಲಕ್ಷ ಎಕರೆ ಭೂಮಿಯನ್ನು ಹೊಂದಿರುವರು. ಅವರ ಸರಾಸರಿ ಹಿಡುವಳಿಯು 180 ಎಕರೆಗಳಷ್ಟಾಗಿರುವುದು. ಆದರೆ, 10 ಎಕರೆಗಳಿಗಿಂತಲೂ ಕಡಿಮೆ ಇರುವ 357 ಲಕ್ಷ ಹಿಡುವಳಿದಾರರು ಅಂದರೆ ಶೇ. 50ರಷ್ಟು ಹಿಡುವಳಿದಾರರು ಒಟ್ಟು ವ್ಯವಸಾಯ ಭೂಮಿಯ ಕೇವಲ ಶೇ. 9ರಷ್ಟೇ ಹೊಂದಿರುವರು. ಅವರ ಸರಾಸರಿ ಹಿಡುವಳಿಯು 4 ಎಕರೆಗಳಿಗಿಂತಲೂ ಕಡಿಮೆ ಇರುವುದು. ಪರಿಣಾಮವಾಗಿ, ಸ್ವಾತಂತ್ರ್ಯೋತ್ತರದ ಮೂರು ದಶಕಗಳಲ್ಲಿ ಭೂಸುಧಾರಣಾ ಮಸೂದೆಗಳಿಂದಾಗಿ ಧೃಡೀಕರಿಸಲ್ಪಟ್ಟ ಹೆಚ್ಚುವರಿ ಭೂಮಿ ಮತ್ತು ಮರುವಿತರಣೆ ಮಾಡಿದ ಹೆಚ್ಚುವರಿ ಭೂಮಿ ಅನುಕ್ರಮವಾಗಿ ದೇಶದ ಶೇ. 4ರಷ್ಟು ದೊಡ್ಡ ಭೂಮಾಲಕರ ಒಟ್ಟು ಹಿಡುವಳಿಯ ಶೇ. 1.2 ಮತ್ತು ಶೇ. 0.04 ರಷ್ಟಾಗಿದೆಯಷ್ಟೆ! ಭಾರತದ ಆರ್ಥಿಕ ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಯಾರಾದರೂ ಇದನ್ನು 'ಭೂಸುಧಾರಣೆ' ಎಂದು ಪರಿಗಣಿಸಿಯಾರೆ?

ಪ್ರಸಕ್ತ ಪರಿಸ್ಥಿತಿಯಲ್ಲಿ 'ಭೂಮಸೂದೆ' ಮತ್ತು 'ಹಸಿರುಕ್ರಾಂತಿ' ಕಾರ್ಯಕ್ರಮಗಳಿಂದ ವ್ಯವಸಾಯ ಭೂಸಂಪತ್ತಿನ ಮತ್ತಿತರ ಸಂಪತ್ತುಗಳ ಹಾಗೂ ಆದಾಯಗಳ ಕೇಂದ್ರೀಕರಣ ಹೆಚ್ಚುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅಸಮಾನತೆ ಹೆಚ್ಚುತ್ತಿದೆ. ಭೂಮಾಲಕರೂ ಶ್ರೀಮಂತ ರೈತರೂ ಹೆಚ್ಚುಹೆಚ್ಚು ಸಂಘಟಿತರಾಗುತ್ತಿದ್ದಾರೆ. ಬಡರೈತರೂ ಕೃಷಿಕಾರ್ಮಿಕರೂ ಹೆಚ್ಚಿನ ರಾಜ್ಯಗಳಲ್ಲಿ ಇನ್ನೂ ಅಸಂಘಟಿತರಾಗಿಯೇ ಉಳಿದಿದ್ದಾರೆ. ಆದುದರಿಂದ, 58 ಮಿಲಿಯ ಬಡ ಭೂಹೀನ ಕೃಷಿಕಾರ್ಮಿಕರಿಗೆ ತಾವು ಸಂಘಟಿತರಾಗಿ ಕ್ರಾಂತಿಕಾರಕ ಮಾರ್ಗಗಳಿಂದ, ದೊಡ್ಡ ಭೂಮಾಲಕರ ಮತ್ತು ಶ್ರೀಮಂತ ರೈತರ ಹೆಚ್ಚುವರಿ ವ್ಯವಸಾಯ ಭೂಮಿಯನ್ನು ಮರುವಿತರಣೆ ಮಾಡಿಕೊಂಡು ತಮ್ಮ ಜೀವನಾಧಾರವನ್ನು ಬಲಪಡಿಸುವುದು ದೂರದ ಗುರಿಯಾಗಿಯೇ ಉಳಿಯಬೇಕಾಗಿದೆ. ಅವರ ತತ್‌ಕ್ಷಣದ ಗುರಿಯು ಸಂಘಟಿತರಾಗಿ ಜೀವನಾಧಾರಕ್ಕೆ ಅತ್ಯಗತ್ಯವಾದ ಕನಿಷ್ಠ ಕೂಲಿ ಗಳಿಸಲು ಹೋರಾಡುವುದಾಗಿದೆ. ತಜ್ಞ ಸಮಿತಿಗಳ ವರದಿಗಳಂತೆ; ಕೃಷಿಕಾರ್ಮಿಕರ ಮಾಸಿಕ ಸರಾಸರಿ ಕೂಲಿಯೂ 1960–61ರ ದರಗಳಲ್ಲಿ 1963–64ರಿಂದ 1974–75ರಲ್ಲಿ ರೂ. 184ರಿಂದ ರೂ. 122ಕ್ಕೆ ಇಳಿದಿದೆ. ಅಂದರೆ, ಈ ಅವಧಿಯಲ್ಲಿ ಅವರ ನಿಜವಾದ ಸರಾಸರಿ ಗಳಿಕೆಯು ಸ್ಥಿರಬೆಲೆಗಳಲ್ಲಿ ಶೇ. 33ರಷ್ಟು ಇಳಿಮುಖಗೊಂಡಿದೆ. 1961–62ರಿಂದ 1976–77ರ ಅವಧಿಯಲ್ಲಿ ಕೃಷಿಕಾರ್ಮಿಕರ ಕೂಲಿಯು ಹಣದ ರೂಪದಲ್ಲಿ ಮೂರು ಪಾಲು ಹೆಚ್ಚಿರುವುದಾದರೂ ಸ್ಥಿರಬೆಲೆಗಳಲ್ಲಿ ದಿನಕೂಲಿಯು ಈ ಅವಧಿಯಲ್ಲಿ ರೂ. 1.76ರಿಂದ ರೂ. 1.64ಕ್ಕೆ ಇಳಿದಿದೆ. 1964-65ರಿಂದ 1974-75ರಷ್ಟರಲ್ಲಿ ಕೃಷಿಕಾರ್ಮಿಕರಲ್ಲಿ ಗಂಡಸರ ವರುಷದ ಕೆಲಸ ಸಿಗುವ ದಿನಗಳು 208ರಿಂದ 185ಕ್ಕೆ ಇಳಿದಿವೆ, ಹೆಂಗಸರ ಕೆಲಸದ ದಿನಗಳು 138ರಿಂದ 129ಕ್ಕೆ ಇಳಿದಿವೆ ಮತ್ತು ಮಕ್ಕಳ ಕೆಲಸದ ದಿನಗಳು 167 ರಿಂದ 145ಕ್ಕೆ ಇಳಿದಿವೆ. ಗ್ರಾಮೀಣ ಬಡ ಕೃಷಿಕಾರ್ಮಿಕರ ಗ್ರಾಹಕ ಶಕ್ತಿಯು ತೀವ್ರ ಕ್ಷಯಿಸುತ್ತಿದೆ.

ಈ ಸಮೀಕ್ಷೆಯ ಒದಿಯಲ್ಲಿ 1978ರ ಮಾರ್ಚ್ ಅಂತ್ಯದಲ್ಲಿ ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿರುವ ಕೃಷಿಕಾರ್ಮಿಕರ ಕನಿಷ್ಠ ದಿನಕೂಲಿಗಳನ್ನು ತಿಳಿಸಲಾಗಿದೆ. ಅವುಗಳನ್ನು ಪರಿಶೀಲಿಸಿದಾಗ ಮಹಾರಾಷ್ಟ್ರದಲ್ಲಿ ಕನಿಷ್ಠ ಕೂಲಿದರಗಳು ರೂ. 3.00 ರಿಂದ ರೂ. 4.50ಯಾಗಿದ್ದು ದೇಶದಲ್ಲಿಯೇ ಅತ್ಯಂತ ಕಡಿಮೆ ದರವಾಗಿದೆ. ಕರ್ನಾಟಕದಲ್ಲಿ ಕನಿಷ್ಠ ಕೂಲಿದರಗಳು ರೂ. 3.65ರಿಂದ ರೂ. 5.00 ಆಗಿದ್ದು ಬಹಳ ಕೆಳಮಟ್ಟದಲ್ಲಿಯೇ ಇವೆ. ಹಸಿರುಕ್ರಾಂತಿಗೆ ಪ್ರಸಿದ್ಧವಾದ ಪಂಜಾಬ್‌ನಲ್ಲಿ ಕನಿಷ್ಠ ಕೂಲಿದರಗಳು ಕೇವಲ ರೂ. 6.70ರಿಂದ ರೂ. 8.70 ಆಗಿದ್ದು ದೇಶದಲ್ಲಿ ಇದೇ ಅತ್ಯಂತ ಹೆಚ್ಚಿನ ದರವಾಗಿದೆ. ಕೃಷಿಕಾರ್ಮಿಕರ ಸಂಘಟಿತ ಹೋರಾಟವು ಪ್ರಬಲವಾಗಿರುವ ಕೇರಳದಲ್ಲಿ ಕನಿಷ್ಠ ಕೂಲಿದರಗಳು ರೂ.6.50ರಿಂದ 8.50 ಆಗಿವೆ. ಪ. ಬಂಗಾಳದಲ್ಲಿ ಕನಿಷ್ಠ ಕೂಲಿದರಗಳ ಪರಿಷ್ಕರಣದ ವಿರುದ್ಧ ಕಲ್ಕತ್ತಾ ಹೈಕೋರ್ಟು ತಡೆಯಾಜ್ಞೆ ನೀಡಿದುದರಿಂದ, ಜಿಲ್ಲಾ ಮೆಜಿಸ್ಟ್ರೇಟರನ್ನೂ, ಡೆಪ್ಯುಟಿ ಕಮಿಷನರ್‌ರನ್ನೂ ಕನಿಷ್ಠ ಕೂಲಿ ರೂ. 6.63ರಷ್ಟಾದರೂ ನಿಗದಿಮಾಡುವಂತೆ ರಾಜ್ಯ ಸರಕಾರ ಒತ್ತಾಯಿಸಿದೆ. ಒಂದೆರಡು ರಾಜ್ಯಗಳನ್ನುಳಿದು ಇತರ ಎಲ್ಲಾ ರಾಜ್ಯಗಳಲ್ಲಿ ಈ ಕನಿಷ್ಠ ಕೂಲಿದರಗಳು ತುಟ್ಟಿಭತ್ತೆಗೆ ಅರ್ಹವಾಗುವುದಿಲ್ಲ ಮತ್ತು ಈ ಕೂಲಿದರಗಳೊಂದಿಗೆ ಕಾಫಿ ತಿಂಡಿ ಊಟ ಇತ್ಯಾದಿ ಯಾವ ಸೌಲಭ್ಯಗಳೂ ಸಿಗುವುದಿಲ್ಲ. ಅಲ್ಲದೆ, ಈ ಕೂಲಿದರಗಳು ಸರಕಾರದ ಕಾಯಿದೆಯಂತೆ ಪ್ರಕಟವಾದವುಗಳು. ಅದೇ ದರಗಳಲ್ಲಿ ಕೃಷಿಕಾರ್ಮಿಕರಿಗೆ ಕೆಲಸ ಸಿಗುವುದೆಂಬ ಭರವಸೆ ಇಲ್ಲ. ನಿರುದ್ಯೋಗ ಬಡತನ ಋಣಭಾರ ಹೆಚ್ಚಿದಂತೆ ಕೃಷಿಕಾರ್ಮಿಕರು ಹೊಟ್ಟೆಪಾಡಿಗೆ ಎಷ್ಟು ಕಡಿಮೆ ಸಂಬಳಕ್ಕೂ ಎಷ್ಟು ದೀರ್ಘಾವಧಿಯೂ ಕೆಲಸ ಮಾಡಬೇಕಾಗುವುದು. ಜೀವನವೆಚ್ಚಕ್ಕನುಗುಣವಾಗಿ ಇವರ ಕೂಲಿದರಗಳನ್ನು ಎರಡು ವರುಷಕ್ಕೊಮ್ಮೆ

([illegible])

ಭಾರತದ ಕಮ್ಯುನಿಸ್ಟ್ ಪಾರ್ಟಿಯ ಸಂಸ್ಥಾಪನೆ

—ಕಾಂ. ಲೇ. ಮುಝುಫರ್ ಅಹ್ಮದ್

ಭಾರತದ ಕಮ್ಯುನಿಸ್ಟ್ ಪಕ್ಷದ ಇತಿಹಾಸವನ್ನು ಕುರಿತು ಕೆಲವೇ ಪುಟಗಳಲ್ಲಿ ಬರೆಯುವುದು ತುಂಬಾ ಕಷ್ಟವಾಗುತ್ತದೆ. ಆದರೂ ಸಹ ನಾನು ಬರೆಯಲು ಪ್ರಯತ್ನಿಸುತ್ತಿದ್ದೇನೆ. ಏಕೆಂದರೆ ನಾನು ಈ ವರೆಗೆ ಈ ವಿಷಯದಲ್ಲಿ ಬರೆದಿಲ್ಲ. ನಮ್ಮ ದೇಶದಲ್ಲೂ ವಿದೇಶಗಳಲ್ಲೂ ಅನೇಕರು ಈ ಬಗ್ಗೆ ಬೇಕಾದಷ್ಟು ಬರೆದಿದ್ದಾರೆ. ಆದರೆ ಅವರ ಈ ಬರಹಗಳು ಅಲ್ಲಲ್ಲಿ ವಾಸ್ತವಾಂಶಗಳಿಗೆ ದೂರವಾಗಿಯೂ ವಿರೋಧವಾಗಿಯೂ ಇವೆ.

1917ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿಯಾಯಿತು. ಈ ಕ್ರಾಂತಿಯನ್ನು ಕುರಿತು ಸಾಮ್ರಾಜ್ಯವಾದಿಗಳು ನಡೆಸಿದ ದುಷ್ಪ್ರಚಾರಗಳಿಗೆ ಮಿತಿಯೇ ಇರಲಿಲ್ಲ. ಉದಾಹರಣೆಗೆ ರಷ್ಯಾದಲ್ಲಿ ಸ್ತ್ರೀಯರನ್ನು ರಾಷ್ಟ್ರೀಕರಣ ಮಾಡಲಾಗಿದೆಯೆಂದೂ, ಮಕ್ಕಳು ಮರಿಗಳನ್ನು ಅವರ ತಂದೆ-ತಾಯಂದಿರಿಂದ ಬೇರೆ ಮಾಡಲಾಗಿದೆಯೆಂದೂ, ಮೊದಲಾಗಿ ಇದೇ ಬಗೆಯಲ್ಲಿ ಬ್ರಹ್ಮಾಂಡವಾದ ಪ್ರಚಾರಗಳನ್ನು ನಡೆಸಲಾಗುತ್ತಿತ್ತು. ಇಷ್ಟು ಅಪಪ್ರಚಾರ ನಡೆದಿದ್ದರೂ ಸಹ ರಷ್ಯಾದ ಕ್ರಾಂತಿಯು ಪ್ರಭಾವವು ನಮ್ಮ ದೇಶದ ಮೇಲೆಯೂ ಆಗದೆ ಇರಲಿಲ್ಲ. ಬಂಗಾಳದಲ್ಲಿ ಟೆರರಿಸ್ಟ್ ಚಳುವಳಿಯು ಕುಗ್ಗುತ್ತಿರುವಂತೆಯೇ ಅದೇ ವರ್ಷದಲ್ಲಿ ಇತರ ಚಳುವಳಿಯೂ ಆರಂಭವಾಗುತ್ತಿದ್ದವು. ಖಿಲಾಫತ್ ಚಳುವಳಿ, ರಾಜಕೀಯ ಕೈದಿಗಳ ಬಿಡುಗಡೆಗಾಗಿ ನಡೆಸಿದ ಚಳುವಳಿ, ಇವು ಈ ಸಂದರ್ಭದಲ್ಲಿ ದೊಡ್ಡದಾಗಿ ಬೆಳೆದಿದ್ದವು. ಪ್ರಚಂಡವಾದ ಸಭೆಗಳು, ಜನತೆಯಿಂದ ದೊಡ್ಡ ಪ್ರದರ್ಶನಗಳೂ ನಡೆಯುತ್ತಿದ್ದವು. ಕಲ್ಕತ್ತಾದಲ್ಲಿ ಜರುಗಿದ ಎಲ್ಲಾ ಸಭೆಗಳಲ್ಲೂ ಪ್ರದರ್ಶನಗಳಲ್ಲೂ ಭಾಗವಹಿಸುತ್ತಿದ್ದೆ. 1918ರಿಂದ ಅನೇಕ ಪ್ರಾಂತಗಳಲ್ಲಿ ಕಾರ್ಮಿಕರ ಮುಷ್ಕರಗಳು ಆರಂಭವಾದವು. 1919 ರಲ್ಲಿ ಜಲಿಯನ್‌ವಾಲಬಾಗ್ ದುರಂತ ಜರುಗಿತು. ಇದನ್ನು ಎಲ್ಲಾ ದೇಶಗಳೂ ಖಂಡಿಸಿದವು. 1919 ರಲ್ಲಿ ಸರಕಾರವು ಜನವಿರೋಧಿ ಕಾಯಿದೆಯೊಂದನ್ನು ತಂದಿತು. ಇದನ್ನು ವಿರೋಧಿಸಿ ಜನರು ದೊಡ್ಡ ಆಂದೋಳನವನ್ನು ನಡೆಸಿದರು.

ನಾಂದಿ :

1920ರಲ್ಲಿ ನಾನು ರಾಜಕೀಯವನ್ನು ನನ್ನ ಜೀವನದ ವೃತ್ತಿಯನ್ನಾಗಿ ರಿಸಿಕೊಳ್ಳಲು ನಿರ್ಧರಿಸಿದೆ. ಅದಕ್ಕೆ ಮುಂಚೆ ನಾನು ಒಂದು ಸಾಹಿತ್ಯ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದುದು ನನ್ನ ಪೂರ್ಣ ಸಮಯವನ್ನು ಅದಕ್ಕೆ ವಿನಿಯೋಗಿಸುತ್ತಿದ್ದೆ. ಈ ಸಂಸ್ಥೆಯ ಮೂಲಕ ನನಗೆ 49ನೇ ಬಂಗಾಳ ರೆಜಿಮೆಂಟಿನಲ್ಲಿ ಹವಾಲ್ದಾರರಾಗಿ ಕೆಲಸಮಾಡುತ್ತಿದ್ದ ನಜ್ರೂಲ್ ಇಸ್ಲಾಂರವರ ಪರಿಚಯವಾಯಿತು. ನಂತರದಲ್ಲಿ ಅವರು ಸುಪ್ರಸಿದ್ಧ ಕವಿಯಾದರು. ಬಂಗಾಳ ರೆಜಿಮೆಂಟನ್ನು ರದ್ದುಗೊಳಿಸುವವರೆಗೆ ಅವರು ಕಲ್ಕತ್ತೆಗೆ ಬಂದು ನನ್ನೊಡನೆ ಇರುತ್ತಿದ್ದರು. ಆಗಿನ ಕಾಲದಲ್ಲಿ ಎಡಪಕ್ಷದ ನಾಯಕರು ಎಂದು ಹೆಸರು ಪಡೆದಿದ್ದ ಫಜ್ಲೂಲ್ ಹಕ್ ಬಂಗಾಳಿ ಭಾಷೆಯಲ್ಲಿ ಒಂದು ಪತ್ರಿಕೆಯನ್ನು ಪ್ರಾರಂಭಿಸಲು ನಿಶ್ಚಯಿಸಿದರು. ನಜ್ರೂಲ್ ಇಸ್ಲಾಂ ಮತ್ತು ನಾನು ಈ ಕಾರ್ಯ ನಿರ್ವಹಿಸಲು ಒಪ್ಪಿದೆವು. ನಮ್ಮಿಬ್ಬರ ಸಂಪಾದಕತ್ವದಲ್ಲಿ "ನವಯುಗ" ಎಂಬ ದಿನಪತ್ರಿಕೆ ಆರಂಭವಾಯಿತು. ನಜ್ರೂಲ್ ಇಸ್ಲಾಂರವರ ಕವಿತೆಗಳು ಪತ್ರಿಕೆ ಪ್ರಕಟವಾದಂದಿನಿಂದ ಪ್ರಕಟವಾಗುತ್ತಿದ್ದವು. ಅದು ಜನರ ಮನ್ನಣೆಯನ್ನೂ ಪಡೆಯಿತು. ಅದರಿಂದಾಗಿ ಸಂಪಾದಕೀಯದ ಹೊಣೆಯನ್ನು ನಾನೇ ಹೆಚ್ಚಾಗಿ ನಿರ್ವಹಿಸುತ್ತಿದ್ದೆ.

"ನವಯುಗ" ಪತ್ರಿಕೆಯ ವೈಶಿಷ್ಟ್ಯವೇನೆಂದರೆ, ಅದು ಇತರ ಎಲ್ಲ ಬಂಗಾಳಿ ಪತ್ರಿಕೆಗಳಿಗಿಂತಲೂ ಹೆಚ್ಚಾಗಿ ರೈತ ಕಾರ್ಮಿಕ ಜನರಿಗೆ ಸಂಬಂಧಿಸಿದ ಸುದ್ದಿಗಳನ್ನು ಪ್ರಕಟಿಸುತ್ತಿದ್ದುದು. ಅದಕ್ಕೆ ಮುಂಚೆ ನನಗೆ ನಾವಿಕರೊಂದಿಗೆ ಪರಿಚಯವಿದ್ದುದರಿಂದ ಇತರ ದುಡಿಯುವ ಜೀವಿಗಳ ಸಮಸ್ಯೆಗಳೊಂದಿಗೆ ನಾವಿಕರ ಸಮಸ್ಯೆಯನ್ನು ಕುರಿತು ನವಯುಗದಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲು ಶ್ರಮಿಸಲಾಯಿತು. ಈ ಪತ್ರಿಕೆಯ ಮೂಲಕ ನನ್ನ ಲೇಖನಗಳ ಮೂಲಕ ನಾನು ತೃತೀಯ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನೆಡೆಗೆ ಆಕರ್ಷಿತವಾದೆನೆಂಬುದನ್ನು ಅಂದು ನಾನು ಕನಸಿನಲ್ಲಿಯೂ ಸಹ ನೆನಸಿರಲಿಲ್ಲ.

ಪಾರ್ಟಿಯ ಜನನ :

ವಸಾಹತು ದೇಶಗಳ ಬಗ್ಗೆ ಲೆನಿನ್‌ರ ಥೀಸಿಸ್‌ನ್ನು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ದ್ವಿತೀಯ ಮಹಾ ಸಭೆಯು 1920ರಲ್ಲಿ ಅನುಮೋದಿಸಿತು. (ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಸ್ಥಾಪಿತವಾದುದು 1919 ರಲ್ಲಿ) ಅದಾದ ನಂತರ ವಸಾಹತು ದೇಶಗಳಲ್ಲಿ ಸಂಪರ್ಕವನ್ನು ಬೆಳೆಸಲು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಪ್ರಯತ್ನಿಸುತ್ತಿತ್ತು. ರಷ್ಯಾದ ಕ್ರಾಂತಿಯ ಬಗ್ಗೆ ಆದಂದಿನಿಂದ ಭಾರತ ಸರಕಾರವು ಬಹಳ ಜಾಗ್ರತೆ ವಹಿಸುತ್ತಿತ್ತು. ಈ ದೇಶದಲ್ಲಿಯೂ ಸಹ ಏನೋ ಪ್ರಮಾದ ಜರುಗಬಹುದೆಂದೂ ಕಮ್ಯುನಿಸ್ಟ್ ಪಾರ್ಟಿ ಸ್ಥಾಪಿತವಾಗಬಹುದೆಂದೂ ಊಹಿಸಿದ್ದರು. ಈ ಕಾರಣದಿಂದಲೇ ಅವರು ಕೇಂದ್ರ ಸಿ.ಐ.ಡಿ. ಸಂಸ್ಥೆಯನ್ನು ಬಲಗೊಳಿಸಿ ಪುನರ್ನಿರ್ಮಿಸಿದರು. ರಾಜಕೀಯ ಕಾರ್ಯಕರ್ತರ ಮೇಲೆ ಅಹರ್ನಿಶಿ ಕಾವಲಿರುತ್ತಿದ್ದ ಪ್ರಾಂತಗಳ ಸಿ.ಐ.ಡಿ. ಸಂಸ್ಥೆಯೊಂದಿಗೆ ಕೇಂದ್ರ ಸಿ.ಐ.ಡಿ. ಸಂಸ್ಥೆಯ ಗೂಢಾಚಾರರನ್ನು ದೇಶದ ಮೂಲೆ ಮೂಲೆಗಳಲ್ಲಿಯೂ ಸಹ ಇರಿಸಲಾಯಿತು. ಸ್ವಲ್ಪ ಮಂದಿ ಗೂಢಾಚಾರರನ್ನು ವಿದೇಶಗಳಿಗೂ ಸಹ ಕಳಿಸಲಾಗಿದ್ದಿತು. ಈ ಪರಿಸ್ಥಿತಿಯಲ್ಲಿ ಒಂದು ಕಷ್ಟಕರವಾದ ಕರ್ತವ್ಯವನ್ನು ನಿರ್ವಹಿಸಲು ನಾನೂ ದೇಶದ ವಿವಿಧ ಪ್ರಾಂತಗಳಲ್ಲಿದ್ದ ಕೆಲವು ಮಂದಿಯೂ ಪ್ರಯತ್ನಿಸುತ್ತಿದ್ದೆವು. ಭಾರತ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸುವುದೇ ನಮ್ಮ ಗುರಿಯಾಗಿತ್ತು. ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ನಮಗೆ ಉತ್ತೇಜನ ನೀಡುತ್ತಿತ್ತು ಎಂಬುದನ್ನು ನಾನು ಇಲ್ಲಿ ಹೇಳಬೇಕಾಗಿದೆ.

ಕಲ್ಕತ್ತಾ, ಮುಂಬಯಿ, ಲಾಹೋರ್ ನಗರಗಳನ್ನು ಕೇಂದ್ರವಾಗಿರಿಸಿಕೊಂಡು ನಾವು ಕೆಲಸ ಪ್ರಾರಂಭಿಸಿದೆವು. 1921ರಲ್ಲಿ ಫ್ರಾನ್ಸ್ ಮತ್ತು ಚೀನಾಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳನ್ನು ಸ್ಥಾಪಿಸುವುದರಲ್ಲಿ ತೊಡಗಿದ್ದವರೊಂದಿಗೆ ಹೋಲಿಸಿ ನೋಡಿದಲ್ಲಿ ನಾವು ಬಹಳ ಕಡಿಮೆ ಮಂದಿಯಿದ್ದೆವು. ನನ್ನ ಪರಿಮಿತಿಗಳೇನೆಂಬುದು ನನಗೆ ಚೆನ್ನಾಗಿ ತಿಳಿದಿತ್ತು. ಮಾರ್ಕ್ಸ್‌ವಾಗಿ ಸಿದ್ಧಾಂತದ ಬಗ್ಗೆ ನನಗಿದ್ದ ಪರಿಜ್ಞಾನವೂ ಅಷ್ಟಕಷ್ಟೆ. ಈ ಮಹಾಕಾರ್ಯದಲ್ಲಿ ನಾನು ತೊಡಗಿದಾಗ ನನಗಿದ್ದ ಅರ್ಹತೆ ಎರಡು ಎಂಬುದನ್ನು ನಾನಿಲ್ಲಿ ಹೇಳಬಯಸುತ್ತೇನೆ. ಅದರಲ್ಲಿ ಮೊದಲನೆಯದು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಆದೇಶಗಳ ಬಗ್ಗೆ ನನ್ನಲ್ಲಿದ್ದ ಗೌರವ. ಅಂದು ನನ್ನ ಕೈಯಲ್ಲಿ ಒಂದು ಕಾಸೂ ಇರಲಿಲ್ಲ. ಜೀವನಾಧಾರವೂ ಇರಲಿಲ್ಲ. ಈ ಪರಿಸ್ಥಿತಿಯಲ್ಲಿ ನಾನು ಮುಂದುವರಿಯಲು ಕಾರಣ ನನ್ನಲ್ಲಿದ್ದ ಚಿತ್ತಸ್ಥೈರ್ಯವೊಂದೇ.

ಮೂವತ್ತೇಳು ವರ್ಷಗಳ ನಂತರ ಇಂದೂ ಆ ಚಿತ್ತಸ್ಥೈರ್ಯವು ಸ್ವಲ್ಪವಾದರೂ ಇಲ್ಲದೇ ಇರುತ್ತಿದ್ದಲ್ಲಿ ಏನಾಗುತ್ತಿತ್ತು ಎಂದು ನನಗನಿಸುತ್ತದೆ.

ಕಮ್ಯುನಿಸ್ಟ್ ಪಾರ್ಟಿಯನ್ನು ಸ್ಥಾಪಿಸಲು ನಾವು ಪ್ರಯತ್ನಿಸುತ್ತಿರುವಾಗ ನಜ್ರೂಲ್ ಇಸ್ಲಾಂ ಕೂಡ ಅದರಲ್ಲಿ ನಮ್ಮೊಡನೆ ಪಾಲ್ಗೊಂಡರು. ಆದರೆ ಅವರು ಪಾರ್ಟಿಗೆ ಸೇರಲಿಲ್ಲ. ನಮಗೆ ಯಾವಾಗಲೂ ಸಹಬೆಂಬಲ ಕೊಡುತ್ತಿದ್ದವರಲ್ಲಿ ಅವರು ಒಬ್ಬರಾಗಿದ್ದರು. ಸ್ವಲ್ಪಕಾಲಾನಂತರದಲ್ಲಿ ಅವರು ಲೇಬರ್ ಸ್ವರಾಜ್ ಪಕ್ಷದ ಸ್ಥಾಪಕರಲ್ಲೊಬ್ಬರಾಗಿದ್ದರು. ಕಮ್ಯುನಿಸ್ಟ್ ಪಾರ್ಟಿಯನ್ನು ಸ್ಥಾಪಿಸಲು ನಾವು ಮಾಡುತ್ತಿದ್ದ ಕಾರ್ಯಗಳಿಗೆ ಟೆರರಿಸ್ಟ್ ಕ್ರಾಂತಿಕಾರಿಗಳು ಕೆಲವರು ಪ್ರೋತ್ಸಾಹವನ್ನಿತ್ತರು. ತಮ್ಮ ಸಹಕಾರವು ಯಾವಾಗಲೂ ಇರುವುದೆಂದು ಅವರು ನನಗೆ ಆಶ್ವಾಸನೆಯಿತ್ತರು. ಅವರಿಗೂ ನಮಗೂ ಉತ್ತರ ದಕ್ಷಿಣ ಧ್ರುವಗಳಿಗೆ ಎಷ್ಟು ಅಂತರವೋ ಅಷ್ಟೇ ಅಂತರವೆಂದು ಅನಂತರ ತಿಳಿಯಿತು. 1922 ರಲ್ಲಿ ನನ್ನೊಂದಿಗೆ ಡಾ॥ ಅಬ್ದುಲ್ ರಜಾಕ್ ಖಾನ್ (ರಾಜ್ಯಸಭಾ ಸದಸ್ಯರು) ರವರೂ ಅನಂತರ ಡಾ॥ ಅಬ್ದುಲ್ ಹಾಲಿಮ್ (ಭಾರತ ಕಮ್ಯುನಿಸ್ಟ್ ಪಾರ್ಟಿ ಕೇಂದ್ರದ ಕಂಟ್ರೋಲ್ ಕಮಿಷನ್ ಸದಸ್ಯರು) ರವರು ಸೇರಿದರು. ಅಸಹಕಾರ ಚಳುವಳಿಯಲ್ಲಿ ಇವರಿಬ್ಬರೂ ಕಾರಾಗೃಹಕ್ಕೆ ಹೋಗಿ ಬಂದರು. ನಮ್ಮ ಕಾರ್ಯಗಳಲ್ಲಿ 1922ರಲ್ಲಿ ನಮ್ಮ ಇನ್ನೊಬ್ಬ ಮಿತ್ರರು ದೊರಕಿದರು. ಅವರ ಹೆಸರು ಕುತುಬುದ್ದೀನ್ ಮಹಮದ್. ಇವರು ಮೌಲನಾ ಅಬುಲ್ ಕಲಾಂ ಅಜಾದ್‌ರ ಸಹಚರರಾಗಿದ್ದರು. ಅವರೊಂದಿಗೆ ಕೂಡಿಕೊಂಡು 'ಅಲ್‌ಹಿಲಾಕ್' 'ಅಲ್ ಬಿಲಾಕ್' ಪತ್ರಿಕೆಗಳನ್ನು ನಡೆಸುತ್ತಿದ್ದರು. ಆ ಕಾಲದಲ್ಲಿ ಕಲ್ಕತ್ತಾದಲ್ಲಿ ಮಾರ್ಕ್ಸ್‌ವಾದಿ ಸಾಹಿತ್ಯ ಸುಲಭವಾಗಿ ಸಿಗುತ್ತಿರಲಿಲ್ಲ. ಒಂದು ವೇಳೆ ಎಲ್ಲಿಯಾದರೂ ದೊರಕಿದರೂ ಕೊಳ್ಳಲು ನಮ್ಮಲ್ಲಿ ಹಣವಿರುತ್ತಿರಲಿಲ್ಲ. ಜನಾಬ್ ಕುತುಬುದ್ದೀನ್ ಪುಸ್ತಕಗಳನ್ನು ಪಡೆದು ಓದಿದ್ದರು. ಫಿಲಿಪ್ಸ್ ಫ್ರಿಸ್ ಬರೆದಿದ್ದ "ರಷ್ಯನ್ ಕ್ರಾಂತಿಯ ಸ್ಮೃತಿಗಳು" ಎಂಬ ಪುಸ್ತಕವನ್ನು ಅವರಿಂದ ಪಡೆದುಕೊಂಡು ನಾನು ಓದಿದೆ. ರಷ್ಯಾದ ಕ್ರಾಂತಿಯ ಬಗ್ಗೆ ನಾನು ಓದಿದ ಮೊದಲ ಪುಸ್ತಕ ಅದು. ಅದರ ಬೆಲೆ 18 ಷಿಲ್ಲಿಂಗ್‌ಗಳಾಗಿತ್ತು. ಅಷ್ಟು ಬೆಲೆಯ ಪುಸ್ತಕವನ್ನು ಪಡೆದುಕೊಳ್ಳಲಿಚ್ಛಿಸಿದರೂ ಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಆ ತರುವಾಯ ಅವರೂ ಸಹ ಲೇಬರ್ ಸ್ವರಾಜ್ ಪಕ್ಷವನ್ನು ಸ್ಥಾಪಿಸುವುದರಲ್ಲಿ ಭಾಗವಹಿಸಿದರು. ಆದರೆ ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಅವರು ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. 1948 ರ ಏಪ್ರಿಲ್ 1 ರಂದು ಅವರು ನಿಧನರಾದರು. ಆ ಕಾಲದಲ್ಲಿ ನಮ್ಮೊಂದಿಗೆ ಬೇರೆ ಕೆಲವರೂ ಸೇರಿಕೊಂಡರು. ಆದರೆ ಈ ವಿಷಯವನ್ನೆಲ್ಲ ಈ ಲೇಖನದಲ್ಲಿ ಕೊಡಲು ಸ್ಥಳಾವಕಾಶವಿಲ್ಲದಾಗಿದೆ.

ಲಾಹೋರ್‌ನಲ್ಲಿ ಗುಲಾಂ ಹಸ್ಸನ್ ಕೆಲಸ ಮಾಡುತ್ತಿದ್ದರು. ಅದಕ್ಕೆ ಮುಂಚೆ ಅವರು ಪೇಷಾವರ್‌ನಲ್ಲಿ ಸರ್ಕಾರಿ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಾಗಿದ್ದರು. ಇವರು ಮಹಮದಾಲಿಯ ಮಿತ್ರರಾಗಿದ್ದರು. ಅದಕ್ಕೆ ಹಿಂದೆ ಲಾಹೋರ್‌ನಲ್ಲಿದ್ದ ಕೆಲವು ವಿದ್ಯಾರ್ಥಿಗಳು ಕ್ರಾಂತಿಕಾರೀ ಕಾರ್ಯಕ್ರಮಗಳಿಗೆ ತರಬೇತಿ ಪಡೆಯಲು ವಿದೇಶಗಳಿಗೆ ಹೋಗಿದ್ದರು. ಹಾಗೆ ಹೋಗಿದ್ದ ವಿದ್ಯಾರ್ಥಿಗಳಲ್ಲಿ ಮಹಮದ್ ಆಲಿಯೂ ಒಬ್ಬರಾಗಿದ್ದರು. ರಷ್ಯಾದ ಕ್ರಾಂತಿಯ ತರುವಾಯ ಅವರು ರಷ್ಯಾಗೆ ಹೋಗಿ ಅಲ್ಲಿ ಕಮ್ಯುನಿಸ್ಟ್ ಪಾರ್ಟಿ ಸೇರಿದರು. ಗುಲಾಂ ಹಸ್ಸನ್‌ರವರನ್ನು ಕಾಬೂಲ್‌ಗೆ ಕರೆಸಿಕೊಂಡು ಅವರನ್ನು ಮಾರ್ಕ್ಸ್‌ವಾದಿ ಸಿದ್ಧಾಂತದತ್ತ ಆಕರ್ಷಿಸುವುದಕ್ಕೆ ಅವರೇ ಕಾರಣರು. ಆ ತರುವಾಯ ಗುಲಾಂ ಹಸ್ಸನ್ ಪೇಷಾವರ್‌ನಲ್ಲಿ ತಮ್ಮ ಉದ್ಯೋಗಕ್ಕೆ ರಾಜನಾಮೆ ಇತ್ತು ಕಮ್ಯುನಿಸ್ಟ್ ಪಾರ್ಟಿಯನ್ನು ಕಟ್ಟಲು ಲಾಹೋರಿಗೆ ಬಂದರು. ಅಲ್ಲಿಂದ ಅವರು 'ಇಂಕ್ವಿಲಾಬ್' ಎಂಬ ಹೆಸರಿನ ಮಾಸಪತ್ರಿಕೆಯೊಂದನ್ನು ಆರಂಭಿಸಿದರು.

ಆ ಕಾಲದಲ್ಲಿ ಹೆಸರುವಾಸಿಯಾಗಿದ್ದ ವಾಯುವ್ಯ ರೈಲ್ವೆ ಕಾರ್ಮಿಕರ ಯೂನಿಯನ್ನಿನ ನಂತರ ಹಸ್ಸನ್ ಕಾರ್ಯದರ್ಶಿಯಾದರು. ಪತ್ರವ್ಯವಹಾರಗಳ ಮೂಲಕ ಮಾತ್ರ ನನಗೆ ಡಾಂಗೆಯವರೊಡನೆ ಸಂಪರ್ಕವಿತ್ತು. 1924ರಲ್ಲಿ ಕಾನ್ಪುರದ ಜೈಲಿನಲ್ಲಿ ಭೇಟಿಯಾದೆವು. ಆದರೆ ಗುಲಾಂ ಹಸ್ಸನ್‌ರವರನ್ನು ಮಾತ್ರ ನಾನು ಭೇಟಿಯಾಗಲೇ ಇಲ್ಲ. ಪತ್ರವ್ಯವಹಾರದ ಮೂಲಕವೂ ನನಗೆ ಸಂಬಂಧವೇರ್ಪಡಲಿಲ್ಲ.

ಪಲಪುರ ಸಿಂಗಾರವೇಲು ಎಂಬ ಮದರಾಸಿನ ವೃದ್ಧ ವಕೀಲರೊಬ್ಬರು 1922ರಲ್ಲಿ ತಾನು "ಕಮ್ಯುನಿಸ್ಟ್" ಎಂದು ಪ್ರಕಟಿಸಿದರು. ಅವರ ಬಳಿಯಿದ್ದ ದೊಡ್ಡ ಮಾರ್ಕ್ಸ್‌ವಾದಿ ಗ್ರಂಥಗಳ ಭಂಡಾರವು ಯಾರಿಗಾದರೂ ಅಸೂಯೆಯನ್ನುಂಟುಮಾಡುತ್ತಿದ್ದಿತು. ಅಷ್ಟು ಸಾಹಿತ್ಯವನ್ನು ಅವರು ಸಂಗ್ರಹಿಸಿದರು. ಅವರೂ ಕೂಡ ಕಾರ್ಮಿಕ ಹೋರಾಟಗಳಲ್ಲಿ ಭಾಗವಹಿಸಿ ಜೈಲು ಶಿಕ್ಷೆಯನ್ನು ಅನುಭವಿಸಿದರು.

ವಿದೇಶಗಳಲ್ಲಿ ಕಾಮ್ರೇಡುಗಳು:

ವಿದೇಶಗಳಲ್ಲೂ ಕೂಡ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಲು ಪ್ರಯತ್ನ ಸಾಗುತ್ತಿದೆಯೆಂಬುದನ್ನು ನಾನು ಇಲ್ಲಿ ಹೇಳಬೇಕಾಗಿದೆ. 1920 ರಲ್ಲಿ 'ಹಿಜ್ರಾತ್' ಎಂಬ ಪ್ರಬಲವಾದ ಚಳುವಳಿಯು ಸಿಂದ್ ಮತ್ತು ಪಂಜಾಬ್ ಪ್ರಾಂತಗಳಲ್ಲಿ ಪ್ರಾರಂಭವಾಗಿತ್ತು. ಹಿಜ್ರಾತ್ ಎಂದರೆ ಪರರ ಪೀಡೆಯಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ದೇಶವನ್ನು ಬಿಟ್ಟು ಹೊರಗೆ ಹೋಗುವುದು ಎಂದು ಅರ್ಥ. ಈ ಚಳುವಳಿಯ ಫಲವಾಗಿ 18 ಸಾವಿರ ಮಂದಿ ಮುಸ್ಲಿಮರು ಭಾರತ ದೇಶವನ್ನು ಬಿಟ್ಟು ಅಫ್ಘಾನಿಸ್ಥಾನಕ್ಕೆ ಹೋದರು. ಆದರೆ ಇವರೊಂದು ಜನರಲ್ಲಿ ಅನೇಕರನ್ನು ಅಫ್ಘಾನಿಸ್ಥಾನ ಸರಕಾರವು ತಮ್ಮ ದೇಶದೊಳಗೆ ಸೇರಿಸಲಿಲ್ಲ. ಅಫ್ಘಾನಿಸ್ಥಾನವು ಭಾರತ ದೇಶಕ್ಕಿಂತ ಹಿಂದುಳಿದ ರಾಷ್ಟ್ರವಾಗಿದ್ದುದರಿಂದ ಹಿಜ್ರಾತ್ ಚಳುವಳಿಯಲ್ಲಿ ಸೇರಿದ್ದ ಮುಸ್ಲಿಂ ಯುವಕರಿಗೆ ಅಫ್ಘಾನಿಸ್ಥಾನದಲ್ಲಿ ನಂಬಿಕೆ ಇರಲಿಲ್ಲ. ತಾವು ಯುದ್ಧದಲ್ಲಿ ಟರ್ಕಿಯ ಮೇಲೆ ಹೋರಾಡುವುದಕ್ಕೆ ಹೋಗುವುದರಿಂದ ಅವಕಾಶ ಕೊಡಲೇಬೇಕೆಂದು ಹಟಹಿಡಿದುದ್ದ

[21ನೇ ಪುಟ ನೋಡಿ]

ಭಾರತದ ಕಮ್ಯುನಿಸ್ಟ್ ಪಾರ್ಟಿಯ ಸಂಸ್ಥಾಪನೆ

(19ನೇ ಪುಟದಿಂದ)

ರಿಂದ ಅಫ್ಘಾನ್ ಸರಕಾರವು ಅವರಿಗೆ ತಮ್ಮ ದೇಶದ ಮೂಲಕ ಹೋಗಲು ಅವಕಾಶ ನೀಡಿತು.

ಈ ಯುವಕರು ಹಿಂದೂ ಕುಷ್ ಪರ್ವತವನ್ನು ದಾಟಿ ಟಿರಮಿಜ್ (ಈಗ ಅದು ತಾಜಕಿಸ್ತಾನ್ ಆಗಿದೆ)ಗೆ ಹೋಗಿ ಸೇರಿದರು. ಅಲ್ಲಿನಿಂದ ಅವರು ಅಮುದಾರ್‍ಯ ಕಡಲನ್ನು ದಾಟುತ್ತಿರುವಾಗ ಬ್ರಿಟೀಷರಿಂದ ಹಣ ಮತ್ತು ಆಯುಧಗಳನ್ನು ಪಡೆದು ಸಾಗಿಸುತ್ತಿದ್ದ ಕೆಲವು ಮಂದಿ ತುರ್ಕಿಯುವರು ಇವರಮೇಲೆ ಧಾಳಿ ನಡೆಸಿದರು. ಆದರೆ ಆ ಸಮಯಕ್ಕೆ ಸರಿಯಾಗಿ ಕೆಂಪು ಸೈನ್ಯವು ಅಲ್ಲಿಗೆ ಬಾರದಿದ್ದಲ್ಲಿ ಈ ಮುಸ್ಲಿಂ ಯುವಕರ ಪ್ರಾಣವು ಉಳಿಯುತ್ತಿರಲಿಲ್ಲ. ಮುಸ್ಲಿಂರಾದ ಅವರು ತಮ್ಮ ಮೇಲೆ ಮುಸ್ಲಿಂ ಮತಕ್ಕೆ ಸೇರಿದ ತುರ್ಕರು ಧಾಳಿ ನಡೆಸಿದ್ದು ಅವರನ್ನು ದಿಗ್ಭ್ರಾಂತಿಗೊಳಿಸಿತು. ತಮ್ಮ ಈ ಅನುಭವದಿಂದ ಅವರು ಕೆಂಪು ಸೈನ್ಯವನ್ನು ಸೇರಿಕೊಂಡು ಕ್ರಾಂತಿ ವಿರೋಧಿಗಳ ವಿರುದ್ಧ ಹೋರಾಡಿದರು. ಆ ತರುವಾಯ ಅವರಲ್ಲಿ ಕೆಲವರು ತಾಷ್ಕೆಂಟಿನಲ್ಲಿ ಸೈನಿಕ ಪಾಠಶಾಲೆಯನ್ನು ಸೇರಿದರು. ಈ ಶಾಲೆಯಲ್ಲಿ ಅಭ್ಯಾಸ ಮಾಡಿದ ನಂತರ ಅವರು ಮಾಸ್ಕೋದಲ್ಲಿ ಹೊಸದಾಗಿ ಸ್ಥಾಪಿತವಾಗಿದ್ದ ಪ್ರಾಚ್ಯ ವಿಶ್ವವಿದ್ಯಾನಿಲಯದಲ್ಲಿ ಸೇರಿದರು.

ಅಲ್ಲಿ ಸ್ವಲ್ಪಕಾಲ ಅಭ್ಯಾಸಮಾಡಿದ ನಂತರ ಅವರಿಗೆ ಮಾರ್ಕ್ಸ್‌ವಾದದ ಸಿದ್ಧಾಂತದ ಬಗ್ಗೆ ಹೆಚ್ಚು ವಿಶ್ವಾಸವುಂಟಾಗಿ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದರು. ಆ ತರುವಾಯ ಮಾಸ್ಕೋದ ವಿಶ್ವವಿದ್ಯಾನಿಲಯದಲ್ಲಿ ಸ್ವಲ್ಪ ಕಾಲದವರೆಗೆ ಭಾರತ ಕಮ್ಯುನಿಸ್ಟ್ ಪಕ್ಷದ ಶಾಖೆಯೊಂದು ಇಲ್ಲಿ ಕೆಲಸ ಮಾಡುತ್ತಿದ್ದಿತು. ಪಂಜಾಬಿನ ಕಾಮ್ರೇಡ್ ನೈನಾಸಿಂಗ್ ಸ್ವಲ್ಪದಿನಗಳು ಈ ಶಾಖೆಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಕಮ್ಯುನಿಸ್ಟ್ ಪಾರ್ಟಿಯಲ್ಲಿ ಸೇರಿದ್ದ ಭಾರತೀಯರು ಪ್ರಾಚ್ಯ ವಿಶ್ವವಿದ್ಯಾನಿಲಯದಲ್ಲಿ ಒಂಭತ್ತು ತಿಂಗಳು ಅಭ್ಯಾಸ ಮಾಡಿದ ತರುವಾಯ, ಸ್ವದೇಶದಲ್ಲಿ ಕೆಲಸಮಾಡಲು ಹಿಂತಿರುಗಬೇಕೆಂದು ಬಯಸಿದರು. ಅವರಲ್ಲಿ ಇಬ್ಬರು ಇರಾನ್ ಮೂಲಕ ಭಾರತವನ್ನು ಪ್ರವೇಶಿಸಿದರು. ಇನ್ನು ಕೆಲವರು ಸ್ವದೇಶಕ್ಕೆ ತೆರಳಲು ಮಾರ್ಗವಿಲ್ಲದೆ ಪಾಮೀರ್ ಪರ್ವತವನ್ನು ದಾಟಿ ಬರಲು ನಿಶ್ಚಯಿಸಿದರು. ಕಮ್ಯುನಿಸ್ಟ್ ಅಂತರರಾಷ್ಟ್ರೀಯವು ಬೇರೆ ವಿಧಿಯಿಲ್ಲದೆ ಪಾಮೀರ್‌ವರೆಗೆ ಇವರನ್ನು ಮುಟ್ಟಿಸಬೇಕಾಯಿತು. ಅದಕ್ಕಾಗಿ ಒಬ್ಬ ಮಾರ್ಗದರ್ಶಕನನ್ನು ಕೊಡಲಾಯಿತು. ಅಲ್ಲಿಂದ ಅವರು ಭಾರತದ ಸರಹದ್ದಿನಲ್ಲಿಯೇ ಇದ್ದ ಚಿತ್ರಾಲ್‌ವರೆಗೆ ಬಂದರು. ಅಲ್ಲಿಯೇ ಅವರನ್ನು ಭಾರತದ ಪೋಲೀಸರು ಬಂಧಿಸಿದರು. ಆನಂತರ ಅವರು ಬಹುಕಾಲ ಜೈಲಿನಲ್ಲಿ ವಿಚಾರಣೆಗೊಳಗಾದ ಖೈದಿಗಳಾದರು.

1923ರಲ್ಲಿ ಅವರ ಮೇಲೆ ಶಿಕ್ಷೆ ವಿಧಿಸಲಾಯಿತು. ಅವರಲ್ಲಿ ಕೆಲವರನ್ನು ಒಂದುವರ್ಷ ಕಠಿಣ ಶಿಕ್ಷೆಗೆ, ಇಬ್ಬರನ್ನು ಎರಡು ವರ್ಷ ಕಠಿಣ ಶಿಕ್ಷೆಗೆ ಮತ್ತು ಒಬ್ಬನನ್ನು ಹತ್ತು ವರ್ಷ ಕಠಿಣಶಿಕ್ಷೆಗೆ ಗುರಿಪಡಿಸಲಾಯಿತು. ಪೇಷಾವರ ಒಳಸಂಚಿನ ಮೊಕದ್ದಮೆಯು ನಿಜವಾಗಿಯೂ ಭಾರತದಲ್ಲಿ ಪ್ರಥಮ ಕಮ್ಯುನಿಸ್ಟ್ ಒಳಸಂಚು ಮೊಕದ್ದಮೆಯಾಗಿತ್ತು. ಹಾಗಿದ್ದರೂ ಅದರ ಸುದ್ದಿಯು ಅಟೋಕ್ ನದಿಯ ಈಚೆ ದಡವನ್ನು ಮುಟ್ಟಲೇ ಇಲ್ಲ. ವಾಯುವ್ಯ ಗಡಿ ಪ್ರಾಂತದ ಪರಿಸ್ಥಿತಿಯು ಅಂಥವಾಗಿತ್ತು. ಪೇಷಾವರ್ ಮೊಕದ್ದಮೆಯಲ್ಲಿ ಖೈದಿಗಳಾಗಿದ್ದವರಲ್ಲಿ ನಂತರ ಪಾರ್ಟಿಯ ಸಕ್ರಿಯ ಕಾರ್ಯಕರ್ತರಾದವರೆಂದರೆ ಮೀರ್ ಅಬ್ದುಲ್ ಮಜೀದ್, ಫಿರೋಜುದ್ದೀನ್ ಮನ್ಸೂರ್, ಮತ್ತು ಗೌಹರ್ ರಹಮಾನ್ ಖಾನ್ ಇವರುಗಳು.

ಭಾರತದ ವಿವಿಧ ಭಾಗಗಳಲ್ಲಿ ಭಾರತ ಕಮ್ಯುನಿಸ್ಟ್ ಪಾರ್ಟಿಯನ್ನು ಸ್ಥಾಪಿಸುವ ಪ್ರಯತ್ನಗಳು ಹೇಗೆ ಆರಂಭವಾಗಿದ್ದವೆಂಬುದನ್ನು ಮೇಲೆ ಹೇಳಲಾಗಿದೆ. ಆದರೂ 1925ರ ಡಿಸೆಂಬರ್‌ನವರೆಗೆ ಪಾರ್ಟಿಯ ಕೇಂದ್ರ ಸಮಿತಿಯನ್ನು ರಚಿಸಲಾಗಲಿಲ್ಲ.

ಕಾನ್ಪುರ ಒಳಸಂಚು ಮೊಕದ್ದಮೆ:

1923ರ ಮೇ ತಿಂಗಳಲ್ಲಿ ಶೌಕತ್ ಉಸ್ಮಾನಿ ಕಾನ್ಪುರದಲ್ಲಿ ಬಂಧಿಸಲ್ಪಟ್ಟರು. (ಇರಾನಿನ ಮೂಲಕ ಅವರು ಮಾಸ್ಕೋದಿಂದ ಹಿಂತಿರುಗಿದ್ದರು) ಮತ್ತು ನಾನು ಕಲ್ಕತ್ತೆಯಲ್ಲಿ ಬಂಧಿಸಲ್ಪಟ್ಟೆ. ಕೆಲದಿನಗಳ ನಂತರ ಲಾಹೋರಿನಲ್ಲಿ ಗುಲಾಂಹುಸೇನ್ ದಸ್ತಗಿರಿಯಾದರು. ಬಂಗಾಳ ಪ್ರಾಂತ ಖೈದಿಗಳ ಕಾಯಿದೆ 1818ರ (ರೆಗ್ಯುಲೇಷನ್ 111, 1818) ಪ್ರಕಾರ ಯಾವ ವಿಚಾರಣೆಯೂ ಇಲ್ಲದೆ ನಾವು ಮೂವರು ವಿವಿಧ ಜೈಲುಗಳಲ್ಲಿದ್ದೆವು. 1923ರ ಡಿಸೆಂಬರ್ ತಿಂಗಳಲ್ಲಿ ನಳಿನಿ ಗುಪ್ತರವರ ದಸ್ತಗಿರಿಯಾಯಿತು. ಮತ್ತು ಅವರೂ ವಿಚಾರಣೆಯಿಲ್ಲದೆ ಬಂಧಿಸಲ್ಪಟ್ಟರು. ಅವರು ಯಾವ ಪಕ್ಷದ ಸದಸ್ಯರೂ ಆಗಿರಲಿಲ್ಲ. ಮತ್ತು ಅವರು ರಾಷ್ಟ್ರೀಯ ಕ್ರಾಂತಿಕಾರಿ ಎಂದು ಹೇಳಿಕೊಂಡಿದ್ದರು. ಸಾಹಸ ಕಾರ್ಯದಲ್ಲಿ ಅವರಿಗೆ ಹೆಚ್ಚು ಪ್ರೀತಿ ಇದ್ದುದರಿಂದ ಅವರು ಯೂರೋಪಿಗೂ ಮತ್ತು ಭಾರತದ ನಡುವೆ ನಮ್ಮ ಗೂಡಾಚಾರರಾಗಿ ಕೆಲಸ ಮಾಡುತ್ತಿದ್ದರು. 1924ರ ಮಾರ್ಚ್ ತಿಂಗಳಲ್ಲಿ ಭಾರತ ಸರಕಾರವು ಇಂಡಿಯನ್ ಪೀನಲ್ ಕೋಡ್‌ನ 121 ಎ ಸೆಕ್ಷನ್ ಪ್ರಕಾರ ಕಾನ್ಪುರ ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ಸಮ್ಮುಖದಲ್ಲಿ ಚಾರ್ಜ್‌ಷೀಟ್‌ನ್ನು ಹಾಕಿತು. ಈ ಮೊಕದ್ದಮೆಯಲ್ಲಿ 8 ಜನರು ಆಪಾದಿತರಾಗಿದ್ದರು.

ಮೊದಲು ನಾಲ್ವರು ಮಾತ್ರ ಕೋರ್ಟಿನಲ್ಲಿ ಹಾಜರ್ ಮಾಡಲ್ಪಟ್ಟರು. ಸಿಂಗಾರುವೇಲು ಚೆಟ್ಟಿಯಾರ್ ಅವರು ಅಸ್ವಸ್ಥರಾಗಿದ್ದುದರಿಂದ ಅವರನ್ನು ಕೋರ್ಟಿಗೆ ತರಲಾಗಲಿಲ್ಲ. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಗುಲಾಂಹುಸೇನ್‌ರವರು ತಪ್ಪನ್ನು ಒಪ್ಪಿಕೊಂಡು ಕ್ಷಮೆಯಾಚನೆ ಮಾಡಿ ತಮ್ಮ ಸ್ವಾತಂತ್ರ್ಯವನ್ನು ಕೊಂಡುಕೊಂಡರು. ರಾಮಚಂದ್ರಲಾಲ್ ಶರ್ಮರವರನ್ನು ಪಾಂಡಿಚೇರಿಯಲ್ಲಿದ್ದುದರಿಂದ ಫ್ರೆಂಚ್ ಸರಕಾರದ ರಕ್ಷಣೆಯಲ್ಲಿದ್ದರು. ಮತ್ತು ಅವರನ್ನು ಕೋರ್ಟಿಗೆ ಹಾಜರ್‌ಮಾಡಲಾಗಲಿಲ್ಲ. ಎಂ. ಎನ್. ರಾಯ್ ಅವರು ಯೂರೋಪಿನಲ್ಲಿದ್ದುದರಿಂದ ಅವರನ್ನು ಕೋರ್ಟಿಗೆ ತರುವ ಪ್ರಶ್ನೆಯೇ ಇರಲಿಲ್ಲ. ಕರ್ನಲ್ ಸಿ. ರಾಯ್ (ನಂತರ ಸರ್ ಸಿಸಿಲ್ ರಾಯ್) ಕೇಂದ್ರ ಗುಪ್ತ ಪೋಲೀಸ್ ಬ್ಯೂರೋದ ಡೈರೆಕ್ಟರ್‌ರವರು ಫಿರ್ಯಾದಿಯಾಗಿದ್ದರು. ಈ ಮೊಕದ್ದಮೆಯಲ್ಲಿ ಮಾಡಲಾಗಿದ್ದ ಆಪಾದನೆ ಮತ್ತು ಆನಂತರ ಮೀರತ್ ಒಳಸಂಚಿನ ಮೊಕದ್ದಮೆಯಲ್ಲಿ ಮಾಡಲಾಗಿದ್ದ ಆಪಾದನೆ ಎರಡೂ ಒಂದೇ ತೆರನಾಗಿದ್ದವು. ಕರ್ನಲ್ ಕಾಯ್‌ರವರ ಕೋರಿಕೆಯಂತೆ ಪತ್ರಿಕೆಗಳು ಈ ಮೊಕದ್ದಮೆಯನ್ನು 'ಕಾನ್ಪುರ ಬೋಲ್ಶೆವಿಕ್' ಒಳಸಂಚು ಮೊಕದ್ದಮೆ ಎಂದು ಕರೆದವು. ಹೀಗೆ ಮಾಡುವುದರಿಂದ ಕರ್ನಲ್ ರಾಯ್ ಸೋವಿಯತ್ ರಷ್ಯಾವನ್ನು ಪ್ರಚಾರದ ಉದ್ದೇಶಕ್ಕಾಗಿ ತರುವ ಹಂಚಿಕೆ ಹೂಡಿದ್ದರು. ಈ ಮೊಕದ್ದಮೆಯ ವಿಚಾರಣೆಯು ನಡೆಯುತ್ತಿದ್ದಾಗ ಆಗಾಗ ಪ್ರೇಕ್ಷಕರ ಗ್ಯಾಲರಿಯಲ್ಲಿ ಒಂದು ವ್ಯಕ್ತಿಯು ಕುಳಿತಿರುತ್ತಿದ್ದುದು ಕಾಣುತ್ತಿತ್ತು. ಆತನ ಹೆಸರು ಸತ್ಯಭಕ್ತ. ಅದು ಅವನ ಮಾತಾಪಿತೃಗಳು ಇಟ್ಟ ಹೆಸರಾಗಿರಲಿಲ್ಲ. ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿ ವಾಸಿಸುತ್ತಿದ್ದಾಗ ಅವನು ಆ ಹೆಸರನ್ನಿಟ್ಟುಕೊಂಡಿದ್ದನು. ಸುಮಾರು ಅಲ್ಲಿ ಸತ್ಯದ ಬಗ್ಗೆ ತುಂಬಾ ಪ್ರಯೋಗಗಳು ನಡೆಯುತ್ತಿತ್ತೆಂದು ಕಾಣುತ್ತದೆ!

ಕಾಲಕ್ರಮೇಣ ಮೊಕದ್ದಮೆಯನ್ನು ಸೆಕ್ಷನ್ಸ್ ಕೋರ್ಟಿಗೆ ವರ್ಗಾಯಿಸಲಾಯಿತು. ನ್ಯಾಯಾಧೀಶರು ನಮ್ಮಲ್ಲಿ ಪ್ರತಿಯೊಬ್ಬರಿಗೂ ನಾಲ್ಕು ವರ್ಷ ಕಠಿಣಶಿಕ್ಷೆಯ ಸಜೆಯನ್ನು ವಿಧಿಸಿದರು. ವಿಖ್ಯಾತವಾದ ಚೌರಿಚೌರ ಮೊಕದ್ದಮೆಯಲ್ಲಿ ಇವರು 172 ಮಂದಿಗೆ ಗಲ್ಲಿಗೆ ಹಾಕುವುದರ ಮೂಲಕ ಮರಣ ದಂಡನೆ ಶಿಕ್ಷೆಯನ್ನು ವಿಧಿಸಿದ್ದರು. ನಾಲ್ಕು ಬೇರೆ ಬೇರೆ ಜೈಲುಗಳಿಗೆ ವರ್ಗಾಯಿಸಲ್ಪಟ್ಟಿದ್ದರಿಂದ ಹಾಗೂ ಅಲ್ಲಿ ನಮ್ಮ ಕತ್ತುಗಳ ಸುತ್ತ ಕಬ್ಬಿಣದ ಸರಪಳಿ ಮತ್ತು ನಮ್ಮ ಕಾಲುಗಳಿಗೆ ಕಬ್ಬಿಣದ ಬಳೆಗಳು ಹಾಕಲ್ಪಟ್ಟಿರುವುದರಿಂದ (ಉತ್ತರ ಪ್ರದೇಶದ ಜೈಲುಗಳಲ್ಲಿ ಆ ಕಾಲದಲ್ಲಿ ಈ ಪದ್ಧತಿ ಇತ್ತು) ಹೊರಜಗತ್ತಿನಿಂದ ನಾವು ಸಂಪೂರ್ಣವಾಗಿ ಬೇರ್ಪಡಿಸಲ್ಪಟ್ಟಿದ್ದೆವು. ಮತ್ತೊಂದು ಕಡೆ ಹೇಳಿದ ಸತ್ಯಭಕ್ತ ನಾನು ಭಾರತೀಯ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿರುವುದಾಗಿ ಪತ್ರಿಕೆಗಳಲ್ಲಿ ಘೋಷಿಸಿದ.

ರಾಯ್‌ಬರೇಲಿ ಜಿಲ್ಲೆ ಜೈಲಿನಲ್ಲಿ ಒಮ್ಮೆ ನಾನು ರಕ್ತಕಾರಿದೆ. ಸರಿಯಾದ ಆಹಾರ ಮತ್ತು ವಾಸಸ್ಥಳ ಇಲ್ಲದಿದ್ದರಿಂದ ನನ್ನ ದೇಹಸ್ಥಿತಿ ಪೂರ್ಣವಾಗಿ ಹಾಳಾಗಿತ್ತು. ಜೈಲಿನಲ್ಲಿದ್ದ ಸಿವಿಲ್ ಸರ್ಜನ್ ಸೂಪರ್‌ಡೆಂಟ್ ಅದು ಅಷ್ಟೇನು ಅಪಾಯವಾದುದೇನಲ್ಲ ಎಂದು ಹೇಳಿದ. ಆದರೆ ನಾನು ನಿಧಾನವಾಗಿ ಶಕ್ತಿಹೀನನಾಗುತ್ತಲೇ ಇದ್ದೆ. ಮಂದವಾಗಿ ಜ್ವರವೂ ಬರುತ್ತಿತ್ತು. ಮತ್ತು ತೀವ್ರವಾಗಿ ನನ್ನ ತೂಕ ಕಡಿಮೆಯಾಗುತ್ತಿತ್ತು. ಈ ಸ್ಥಿತಿಯಲ್ಲಿ ನನ್ನನ್ನು ಅಲ್ಮೋರಾ ಜಿಲ್ಲೆಯ ಜೈಲಿಗೆ ಸಾಗಿಸಲಾಯಿತು. ನನ್ನ ಶಿಕ್ಷೆಯ ಅವಧಿಯು ತೀರುವುದಕ್ಕೆ ಮುಂಚೆಯೇ, ನನ್ನ ದೇಹಸ್ಥಿತಿಯಕಾರಣದಿಂದ ಭಾರತಸರ್ಕಾರದ ಆಜ್ಞೆಯ ಮೇರೆಗೆ ಸೆಪ್ಟಂಬರ್ 1925ರಲ್ಲಿ ಅಲ್ಲಿಂದ ನನ್ನನ್ನು ಬಿಡುಗಡೆ ಮಾಡಲಾಯಿತು. ನಾನು ಬಹಳ ಬಲಹೀನನಾಗಿದ್ದೆ. ಆದ್ದರಿಂದ ಅಲ್ಮೋರಾದಲ್ಲಿಯೇ ಇರಬೇಕಾಯಿತು.

ಅಲ್ಲಿ ನಾನು ಮೊದಲ ಬಾರಿಗೆ ಸತ್ಯಭಕ್ತನ ಭಾರತೀಯ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಕೇಳಿದೆ.ಮತ್ತು ಪತ್ರಿಕೆಗಳಲ್ಲಿ ಓದಿದೆ. ಅಷ್ಟೇ ಅಲ್ಲದೆ ಕಾನ್ಪುರದಲ್ಲಿ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಕಮ್ಯುನಿಸ್ಟ್ ಸಮ್ಮೇಳನವೊಂದು ನಡೆಯುವುದೆಂದು ನಾನು ಪತ್ರಿಕೆಯಲ್ಲಿ ಓದಿದೆ. ಲಂಡನ್‌ನಲ್ಲಿದ್ದ ಕಾಮ್ರೇಡ್ ಸಪೂರ್ಜಿ ಸಕ್ಲತ್‌ವಾಲರವರನ್ನು ಸಮ್ಮೇಳನದ ಅಧ್ಯಕ್ಷತೆ ವಹಿಸಲು ಕೇಳಿಕೊಳ್ಳಲಾಗಿದ್ದಿತು. ಆರಂಭದಲ್ಲಿ ಅವರು ಬರುವುದಕ್ಕೆ ಒಪ್ಪಿಕೊಂಡಿದ್ದರೆಂದೂ, ಆದರೆ ಕೊನೆಗೆ ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷವು ಅವರಿಗೆ ಬರಲು ಅನುಮತಿ ಕೊಡಲಿಲ್ಲವೆಂದು ತಿಳಿಸಲಾಗಿದ್ದಿತು. ನಾನು ಜೈಲಿನಿಂದ ಬಿಡುಗಡೆಯಾದುದಕ್ಕೆ ನನ್ನನ್ನು ಅಭಿನಂದಿಸಿ ಸತ್ಯಭಕ್ತ ಅಲ್ಮೋರದಲ್ಲಿದ್ದ ನನಗೆ ಪತ್ರಬರೆದು ಆ ಪತ್ರದಲ್ಲಿ ಕಾನ್ಪುರ ಸಮ್ಮೇಳನದಲ್ಲಿ ನಾನು ಭಾಗವಹಿಸಬೇಕೆಂದೂ ಹೇಳಿಕೊಂಡಿದ್ದರು. ಅಷ್ಟು ಹೊತ್ತಿಗೆ ನಾನು ಸಾಕಷ್ಟು ಸುಧಾರಿಸಿಕೊಂಡಿದ್ದೆ, ಅಷ್ಟೇ ಅಲ್ಲದೆ ಡಿಸೆಂಬರ್ ಅಂತ್ಯದ ವೇಳೆಗೆ ಅಲ್ಮೋರಾದಲ್ಲಿ ಹವಾಮಾನವು ಸೊನ್ನೆಗೂ ಕಡಿಮೆಯಾಗಿ ಶೀತಗೊಂಡಿತ್ತು. ಅಂಥ ಪರಿಸ್ಥಿತಿಯಲ್ಲಿ ನಾನು ಹೇಗಿದ್ದರೂ ಕಲ್ಕತ್ತಾಗೆ ಹೋಗಬೇಕಾಯಿತು. ಕಾನ್ಪುರವನ್ನು ತಲುಪಿದ ಮೇಲೆ ನಾನು ಕಾಮ್ರೇಡ್ S. V. ಘಾಟೆ, K. N. ಜೋಗ್‌ಳೇಕರ್, ಮತ್ತು R. S. ನಿಂಬ್‌ಕರ್‌ನ್ನು ಭೇಟಿಯಾದೆ. ಅವರು ಆಗಲೇ ಬಂದಿದ್ದರು. ಅವರನ್ನು ಕಂಡು ನನಗೆ ಹೆಚ್ಚು ವಿಶ್ವಾಸ ಮೂಡಿತು. ಯಾಕೆಂದರೆ ಜೈಲಿನಲ್ಲಿದ್ದಾಗ ಕಾಂ. ಡಾಂಗೆಯವರಿಂದ ಈ ಮೂವರ ಬಗ್ಗೆಯೂ ಕೇಳಿ ತಿಳಿದಿದ್ದೆ. ಕಾನ್ಪುರದಲ್ಲಿ ನಾನು ಮೊದಲಬಾರಿಗೆ ಕಾಂ. ಅಯೋಧ್ಯ ಪ್ರಸಾದ್, ಜಾನಕಿ ಪ್ರಸಾದ್ ಮತ್ತಿತರರನ್ನು ಭೇಟಿಯಾದೆನು.

ಕಾನ್ಪುರ ಸಮ್ಮೇಳನ:

ಸಮ್ಮೇಳನದ ಸ್ವಾಗತ ಸಮಿತಿಗೆ ಮೌಲನ ಹಜ್ರಾತ್ ಮೊಹಾನಿ ಅಧ್ಯಕ್ಷರಾಗಿದ್ದರು. ಮತ್ತು ಕಾಂ. ಸಿಂಗಾರುವೇಲು ಚೆಟ್ಟಿಯಾರ್ ಸಮ್ಮೇಳನದ ಅಧ್ಯಕ್ಷರಾಗಿದ್ದರು (ನಮ್ಮ ಶಿಕ್ಷೆಗೆ ಗುರಿಪಡಿಸಲಾದ ನಂತರ ಚೆಟ್ಟಿಯಾರ್‌ರವರು ಕಾನ್ಪುರ ಕೋರ್ಟಿನಲ್ಲಿ ಸ್ವತಃ ಹಾಜರಾದರು. ಆದರೆ ಭಾರತ ಸರಕಾರವು ಮೊಕದ್ದಮೆಯನ್ನು ಮುಂದುವರಿಸಲಿಲ್ಲ. ಮತ್ತು ಅವರ ಮೇಲಿನ ಆರೋಪಗಳಿಗೆ ಸರಿಯಾದ ಸಾಕ್ಷಿಯೂ ಇರಲಿಲ್ಲ) ಆರಂಭದಲ್ಲಿಯೇ ನನ್ನ ಅಭಿಪ್ರಾಯಕ್ಕೂ ಸತ್ಯಭಕ್ತನ ಅಭಿಪ್ರಾಯಕ್ಕೂ ಘರ್ಷಣೆಯಾಯಿತು. ಕಮ್ಯುನಿಸ್ಟ್ ಅಂತರರಾಷ್ಟ್ರೀಯದ ಪದ್ಧತಿಯಂತೆ ಪಾರ್ಟಿಯ ಹೆಸರು 'ಭಾರತ ಕಮ್ಯುನಿಸ್ಟ್ ಪಕ್ಷ' ಎಂದಿರಬೇಕೆಂದು ನಾವು ಹೇಳಿದೆವು. ಅವರು ತಾನು ಅಂತರರಾಷ್ಟ್ರೀಯ ವಾದಕ್ಕೆ ಒಪ್ಪುವುದಿಲ್ಲವೆಂದು ತಿಳಿಸಿದರು. ತಮ್ಮ ಪಕ್ಷವು ಭಾರತೀಯ ಮಾದರಿಯಾದುದರಿಂದ ಅದರ ಹೆಸರು ಭಾರತೀಯ ಕಮ್ಯುನಿಸ್ಟ್ ಪಕ್ಷವಾಗಿರಬೇಕೆಂದು ಹೇಳಿದರು. ನಾವು ನಮ್ಮ ಅಭಿಪ್ರಾಯದ ಬಗ್ಗೆ ದೃಢವಾಗಿದ್ದೆವು. ಸತ್ಯಭಕ್ತರು ತನ್ನ ಕಾಗದ ಪತ್ರಗಳನ್ನು ಎತ್ತಿಕೊಂಡು ಹೊರಟು ಹೋದರು. ನಮ್ಮ ಪಕ್ಷದ ಸದಸ್ಯತ್ವವು 300ಕ್ಕೂ ಹೆಚ್ಚಾಗಿದೆಯೆಂದು ಹೇಳಿಕೊಂಡಿದ್ದರು. ಈ ಸದಸ್ಯರು ಯಾರೆಂಬುದು ನನಗೆ ಗೊತ್ತಾಗಲೇ ಇಲ್ಲ. ನಾನು ಆನಂತರ ಅವರನ್ನು ನೋಡಿಯೇ ಇಲ್ಲ. ಕಾಂ. ಘಾಟೆ ಒಮ್ಮೆ ಮುಂಬಯಿಯಲ್ಲಿ ಭೇಟಿ ಮಾಡಿದ್ದರೆಂದು ಕೇಳಿದೆ. ತಾವು ರಾಜಕೀಯದಿಂದ ನಿವೃತ್ತರಾಗಿರುವುದಾಗಿ ಘಾಟೆಯವರು ತಿಳಿಸಿದರಂತೆ.

ವಿವಿಧ ಪ್ರದೇಶಗಳಲ್ಲಿದ್ದ ಕಮ್ಯುನಿಸ್ಟರನ್ನು ಒಂದುಗೂಡಿಸಿ ಕಾನ್ಪುರದಲ್ಲಿ ಮೊದಲಬಾರಿಗೆ ನಾವು ಭಾರತ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯನ್ನು ರಚಿಸಿದೆವು. ಸಮ್ಮೇಳನ ಬಹಿರಂಗವಾಗಿಯೇ ನಡೆಯಿತು. ಆದ್ದರಿಂದಾಗಿ ಸಮಿತಿಯೂ ಬಹಿರಂಗವಾಗಿ ರಚಿತವಾಯಿತು. ಇದಕ್ಕಾಗಿ ಹೊರಗಿನಿಂದಲೂ ಮತ್ತು ದೇಶದೊಳಕ್ಕೂ ನಾವು ಬಹಳ ಟೀಕೆಗೆ ಗುರಿಯಾದೆವು. ನಮ್ಮ ಮೇಲಣ ಈ ಟೀಕೆ ಸರಿಯಾಗಿಯೇ ಇತ್ತು. ಆದರೆ ಬೇರೆ ದಾರಿಯೂ ಇರಲಿಲ್ಲ. ನಾವು ಕಾನ್ಪುರದ ಸಮ್ಮೇಳನದಲ್ಲಿ ಸೇರಿಕೊಳ್ಳದಿದ್ದಲ್ಲಿ ಸತ್ಯಭಕ್ತನ ಕಮ್ಯುನಿಸ್ಟ್ ಪಾರ್ಟಿಯು ಮುಂದೆ ಸಾಕಷ್ಟು ಆತಂಕವನ್ನು ತರುತ್ತಿತ್ತು.

ಕಾನ್ಪುರದಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ರಚಿಸಲ್ಪಟ್ಟ ನಂತರ ಕಾಂ. S. V. ಘಾಟೆ, ಜಾನಕಿ ಪ್ರಸಾದ್ ಬಗೀರಥರವರು ಅದರ ಜಂಟೀ ಕಾರ್ಯದರ್ಶಿಗಳಾದರು. 1927ರಲ್ಲಿ ಜಾನಕಿಪ್ರಸಾದ್‌ರವರ ನಡವಳಿಕೆಯ ಬಗ್ಗೆ ಅನುಮಾನವುಂಟಾಯಿತು. ಮತ್ತು ಅದಕ್ಕೆ ಸಾಕಷ್ಟು ಕಾರಣಗಳೂ ಇದ್ದವು. ನಾವು ಅವನನ್ನು ಇನ್ನು ನಂಬಲಾರೆವು

(24ನೇ ಪುಟ ನೋಡಿ)

ಕಾಂ. ಬಿನೋಯ್ ಚೌಧುರಿಯವರ ಭಾಷಣ

(7ನೇ ಪುಟದಿಂದ)

ಕಾರ್ಯಗಳಲ್ಲಿ ಬಹಳಷ್ಟು ನಿರತರಾಗಿದ್ದುದರಿಂದ, ಹೆಚ್ಚುವರಿ ಭೂಮಿಯನ್ನು ನಿರೀಕ್ಷಿಸಿದಷ್ಟು ಮರು ವಿತರಣೆ ಮಾಡಲು ಸರಕಾರಕ್ಕೆ ಆಗಲಿಲ್ಲ.

ಈಗ ಪಂಚಾಯತುಗಳ ಮೂಲಕ ಸುಮಾರು ಮೂರು ಲಕ್ಷ ಎಕರೆಗಳಷ್ಟು ಭೂಮಿಯನ್ನು ವಿತರಣೆ ಮಾಡಲು ಸರಕಾರವು ಒಂದು ಕಾರ್ಯಕ್ರಮವನ್ನು ರೂಪಿಸಿದೆ. ಈ ಉದ್ದೇಶಕ್ಕಾಗಿ ಪಂಚಾಯತುಗಳಿಗೆ ಸೂಕ್ತ ಅಧಿಕಾರವನ್ನು ಕೊಡಲಾಗಿದೆ. ಸ್ವಾಧೀನದಲ್ಲಿರುವ ಭೂ ಹಿಡುವಳಿಗಳ ಮಾಹಿತಿಯನ್ನು ಪಂಚಾಯತುಗಳಿಗೆ ತಿಳಿಸಲು ಆದೇಶಗಳನ್ನು ಕೊಡಲಾಗಿದೆ. ಜೂನ್ 26, 1975ರಂದು ಮನೆ ಅಡಿಗಳಿದ್ದ ಭೂಹೀನಕೃಷಿಕೂಲಿಕಾರರ, ಬೆಸ್ತರ ಮತ್ತುಗ್ರಾಮೀಣ ಕೈಕುಶಲ ಕೆಲಸಗಾರರ ಹೆಸರಿನಲ್ಲಿ ಅಂತಹ ಮನೆಅಡಿಗಳನ್ನು ಅವರವರ ಹೆಸರಿನಲ್ಲಿ ದಾಖಲೆ ಮಾಡಿಕೊಳ್ಳುವ ಒಂದು ಕಾರ್ಯಕ್ರಮವನ್ನೂ ಸರಕಾರವು ಕೈಕೊಂಡಿದೆ.

ಕುಂದುಕೊರತೆಗಳನ್ನು ಹೋಗಲಾಡಿಸುವುದು :

ಭೂಮಿತಿ ಕಾಯಿದೆಯಿಂದ ತಪ್ಪಿಸಿಕೊಳ್ಳಲು ಭೂಮಿಯನ್ನು ಬಿನಾಮಿಯಾಗಿ ಪರಭಾರೆ ಮಾಡುವುದನ್ನು ನ್ಯಾಯಬಾಹಿರಗೊಳಿಸಲು ಮತ್ತು ಈಗಿರುವ ಭೂಸುಧಾರಣಾ ಕಾಯಿದೆಯಲ್ಲಿರುವ ಎಲ್ಲಾ ಕುಂದುಕೊರತೆಗಳನ್ನು ಹೋಗಲಾಡಿಸಲು ಹಾಗೂ ಆ ಕಾಯಿದೆಯಿಂದ ವಿನಾಯಿತಿಗಳನ್ನು ತೆಗೆದುಹಾಕಲು ಎರಡು ಮಸೂದೆಗಳ ಕರಡು ಸಿದ್ಧವಾಗಿದೆ. ವಿಧಾನ ಸಭೆಯ ಮುಂದಿನ ಅಧಿವೇಶನದಲ್ಲಿ ಈ ಮಸೂದೆಗಳನ್ನು ಸರಕಾರವು ಮಂಡಿಸುವುದಾಗಿ ನಿರೀಕ್ಷಿಸಲಾಗಿದೆ. ಮೊದಲು ಡಾರ್ಜಲಿಂಗ್ ಗುಡ್ಡಪ್ರದೇಶವು ಭೂಮಿತಿ ಕಾಯಿದೆಯ ವ್ಯಾಪ್ತಿಯ ಹೊರಗುಳಿದಿತ್ತು. ಆದರೆ, ಏಪ್ರಿಲ್ 1, 1978ರಿಂದ ಆ ಪ್ರದೇಶವನ್ನೂ ಭೂಮಿತಿ ಕಾಯಿದೆಗೆ ಒಳಪಡಿಸಲಾಗಿದೆ.

ಎಡರಂಗ ಸರಕಾರವು ತನ್ನ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಸ್ತ ರೈತರೂ ಮತ್ತು ಪ್ರಜಾತಾಂತ್ರಿಕ ಜನಸಮೂಹವೂ ಸಹಭಾಗಿಗಳಾಗುವುದಕ್ಕೆ ಅತ್ಯಂತ ಪ್ರಾಶಸ್ತ್ಯ ನೀಡುತ್ತದೆ. ಈಗ ಅಸ್ತಿತ್ವದಲ್ಲಿರುವ ಮತ್ತು ಬೆಳೆಸಿಕೊಂಡು ಬಂದಿರುವ ಆಡಳಿತ ಯಂತ್ರದಿಂದ ಉಪಕಾರಕ್ಕಿಂತ ಉಪದ್ರವೇ ಹೆಚ್ಚು. ಪ್ರಬಲವಾದ ಮತ್ತು ಶಕ್ತಿಯುತವಾದ ಕಿಸಾನ್ ಆಂದೋಳನವು ಸಾರ್ವತ್ರಿಕವಾದ ಪ್ರಜಾಸತ್ತಾತ್ಮಕ ಆಂದೋಳನದ ಅವಿಭಾಜ್ಯ ಅಂಗವಾಗಿ ಬೆಳೆದು ಬಂದು ಆಡಳಿತದ ಮೇಲೆ ಒತ್ತಾಯ ಹೇರದಿದ್ದರೆ, ಏನನ್ನೂ ಸಾಧಿಸಲು ಅಸಾಧ್ಯ. ಆದುದರಿಂದ ಈ ವಿಷಯಕ್ಕೆ ಸೂಕ್ತ ಗಮನವನ್ನೂ ಮತ್ತು ಒತ್ತಾಸೆಯನ್ನು ಕೊಡಲಾಗುತ್ತಿದೆ. ರೈತರ ಮತ್ತು ಇತರ ಜನರ ಸಕ್ರಿಯ ಪಾತ್ರದಿಂದ ಅಭೂತಪೂರ್ವವಾದ ಮತ್ತು ವಿನಾಶಕಾರಿಯಾದ ನೆರೆ ಹಾವಳಿಯ ವಿರುದ್ಧ ನೆರವು ಮತ್ತು ಮರುವಸತಿ ಕಾರ್ಯಗಳ ಹೊಣೆಗಾರಿಕೆಯನ್ನು ಹೊತ್ತ ಭೀಮ ಸಾಹಸದ ಕಾರ್ಯವನ್ನು ನಾನು ಇಲ್ಲಿ ಪ್ರಸ್ತಾಪಿಸದಿದ್ದರೆ, ನನ್ನಿಂದ ಕರ್ತವ್ಯ ಚ್ಯುತಿಯಾದೀತು. ಕಿಸಾನ್ ಸಭೆಯು ವಿವಿಧ ಹಂತಗಳಲ್ಲಿ ನೆರವು ಮತ್ತು ಮರುವಸತಿಯ ಕೆಲಸಗಳಲ್ಲಿ ಸಕ್ರಿಯವಾಗಿ ಪಾತ್ರವಹಿಸಿತ್ತು. ಈ ಕೆಲಸದಲ್ಲಿ ಆರುಜನ ರೈತಬಾಂಧವರು ತಮ್ಮ ಪ್ರಾಣಾರ್ಪಣೆ ಮಾಡಿದರು.

ಇನ್ನಷ್ಟು ಮಾಡಬೇಕಾಗಿದೆ :

ಏನೆಲ್ಲಾ ಮಾಡಬೇಕಾಗಿದೆಯೋ ಅವೆಲ್ಲವನ್ನೂ ಮಾಡಿ ಮುಗಿಸಿಯಾಯಿತೆಂಬ ಕಲ್ಪನೆಯನ್ನು ನಾನು ನಿಮಗೆ ಕೊಡಲು ಬಯಸುವುದಿಲ್ಲ. ಸಧ್ಯದ ಪರಿಸ್ಥಿತಿಯು ನಮ್ಮಿಂದ ಏನೆಲ್ಲಾ ನಿರೀಕ್ಷಿಸುತ್ತದೆಯೋ ಅವುಗಳಿಂದ ನಾವು ಪಶ್ಚಿಮ ಬಂಗಾಳದಲ್ಲಿ ತುಂಬಾ ಹಿಂದುಳಿದಿದ್ದೇವೆ. ಕಿಸಾನ್ ಆಂದೋಳನ ಮತ್ತು ದೇಶದ ಸಧ್ಯದ ಪರಿಸ್ಥಿತಿಯಲ್ಲಿ ಅತ್ಯಗತ್ಯವಾದ ದೇಶಾದ್ಯಂತ ಎಡ ಮತ್ತು ಪ್ರಜಾಸತ್ತಾತ್ಮಕ ಆಂದೋಳನದಲ್ಲಿ ವಿದ್ಯುಲ್ಲಹರಿ ಹರಿಸಲು ಪ. ಬಂಗಾಳದಲ್ಲಿ ನಾವು ಎರಡು ಶಕ್ತಿಗಳನ್ನು ಬಳಸಿಕೊಳ್ಳಬಹುದು. ಒಂದು ಬೃಹತ್ ಕಿಸಾನ್ ಆಂದೋಳನವಾದರೆ, ಇನ್ನೊಂದು ಎಡರಂಗ ಸರಕಾರ. ಈ ವಿಷಯದಲ್ಲಿ ನಮ್ಮ ಜವಾಬ್ದಾರಿಯನ್ನು ಪೂರೈಸಲು ನಾವು ಶಕ್ತಿಮೀರಿ ಶ್ರಮಿಸುತ್ತೇವೆ ಎಂದು ನಾನು ಭರವಸೆ ನೀಡಬಲ್ಲೆ.

ಒಡನಾಡಿಗಳೇ, ದೇಶಾದ್ಯಂತ ಎಡ ಮತ್ತು ಪ್ರಜಾಸತ್ತಾತ್ಮಕ ಆಂದೋಳನವನ್ನು ವಿಸ್ತರಿಸಲು ಮತ್ತು ಬಲಪಡಿಸಲು ಮತ್ತು ಶಕ್ತಿಗಳ ಸಂಯೋಜನೆಯನ್ನು ಬದಲಾಯಿಸಲು, ಈ ಸನ್ನಿವೇಶದಲ್ಲಿ ರೈತರು ಶ್ರಮಿಕವರ್ಗದ ಸಖ್ಯತೆಯೊಡನೆ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ಈ ಸಂದೇಶವನ್ನು ಅವರವರ ರಾಜ್ಯಗಳ ರೈತರಿಗೆ ತಲುಪಿಸಬೇಕೆಂದೂ ಅವರೆಲ್ಲರೂ ಒಗ್ಗಟ್ಟಿನ ಮತ್ತು ಶಕ್ತಿಶಾಲಿಯಾದ ಕಿಸಾನ್ ಆಂದೋಳನವನ್ನು ಬೆಳೆಸಬೇಕು ಎಂದು ವಿವಿಧ ರಾಜ್ಯಗಳಿಂದ ಬಂದಿರುವ ಪ್ರತಿನಿಧಿಗಳಿಗೆ ನಾನು ವಿನಂತಿಸಿಕೊಳ್ಳುತ್ತೇನೆ.

ಒಡನಾಡಿಗಳೇ, ನಿಮ್ಮೆಲ್ಲರಿಗೂ ನಾನು ಇನ್ನೊಮ್ಮೆ ಶುಭ ಹಾರೈಸುತ್ತೇನೆ. (ಪಿ.ಡಿ. 8/4/79). —

ಆರ್ಥಿಕ ಸಮೀಕ್ಷೆ

(17ನೇ ಪುಟದಿಂದ)

ಪರಿಷ್ಕರಿಸಬೇಕೆಂದು 1975ರಲ್ಲಿ ರಾಜ್ಯ ಕಾರ್ಮಿಕ ಮಂತ್ರಿಗಳ ಸಭೆಯಲ್ಲಿ ನಿರ್ಧರಿಸಲಾಗಿದ್ದರೂ, ಹೆಚ್ಚಿನ ರಾಜ್ಯಗಳು ಈ ದಿಸೆಯಲ್ಲಿ ತಮ್ಮ ಅಲಕ್ಷ್ಯ ವ್ಯಕ್ತಪಡಿಸಿವೆ. ಕನಿಷ್ಟ ಕೂಲಿದರಗಳನ್ನು ಜಾರಿಗೆ ಮಾಡುವ ಆಡಳಿತ ವ್ಯವಸ್ಥೆಯೂ ರಾಜ್ಯ ಸರಕಾರಗಳಲ್ಲಿ ಸಮರ್ಪಕವಾಗಿಲ್ಲ. ಹೀಗಾಗಿ ಲಕ್ಷಾಂತರ ಕೃಷಿಕಾರ್ಮಿಕರ ಜೀವನ ಸ್ಥಿತಿಯು ಶೋಚನೀಯವಾಗಿರುವುದರಲ್ಲಿ ಆಶ್ಚರ್ಯವಿಲ್ಲ.

1971ರಲ್ಲಿ 44.2 ಮಿಲಿಯ ಕೃಷಿ ಕಾರ್ಮಿಕರಲ್ಲಿ, ಆಂಧ್ರದೇಶದಲ್ಲಿ 6.83 ಮಿ., ಬಿಹಾರ್‌ನಲ್ಲಿ 6.81ಮಿ., ಉ. ಪ್ರದೇಶದಲ್ಲಿ 5.45ಮಿ., ಮಹಾರಾಷ್ಟ್ರದಲ್ಲಿ 5.39ಮಿ., ತಮಿಳುನಾಡಿನಲ್ಲಿ 4.49ಮಿ., ಮಧ್ಯಪ್ರದೇಶದಲ್ಲಿ 4.06 ಮಿ., ಕರ್ನಾಟಕದಲ್ಲಿ 2.72ಮಿ., ಒರಿಸ್ಸಾದಲ್ಲಿ 1.94ಮಿ., ಕೇರಳದಲ್ಲಿ 1.91ಮಿ., ಮತ್ತು ಗುಜರಾತ್‌ನಲ್ಲಿ 1.89ಮಿ. ಇದ್ದು, ಒಟ್ಟು ಈ ಹತ್ತು ಪ್ರಮುಖ ರಾಜ್ಯಗಳಲ್ಲಿಯೇ 41.45 ಮಿ. ಕೃಷಿಕಾರ್ಮಿಕರು ಕೇಂದ್ರೀಕೃತರಾಗಿರುವರು. ಕೃಷಿಕಾರ್ಮಿಕರ ಸಂಘಟಿತ ಹೋರಾಟವು ಈ ರಾಜ್ಯಗಳಲ್ಲಿ ಅತ್ಯಂತ ಆಧ್ಯತೆಯನ್ನು ಪಡೆಯಬೇಕಾಗಿದೆ. ಅವರ ಹೋರಾಟವು ಬಡ ರೈತರ ಹೋರಾಟದೊಂದಿಗೆ ನಿಕಟ ಸಂಬಂಧ ಹೊಂದಿರಬೇಕಾಗಿದೆ.

ಕನಿಷ್ಟ ಕೂಲಿದರಗಳನ್ನು ಹೆಚ್ಚಿಸುವುದು ಮತ್ತು ಅವುಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸುವುದು, ಕೆಲಸಕ್ಕಾಗಿ ಆಹಾರಧಾನ್ಯಗಳ ರೂಪದಲ್ಲಿ ಕೂಲಿಕೊಡುವುದು, ವಾಸಿಸಲು ಮನೆ ಅಡಿಗಳನ್ನು ಕೊಡಿಸುವುದು, ಭೂಮಾಲಕರ ಮತ್ತು ಶ್ರೀಮಂತ ರೈತರ ಹೆಚ್ಚುವರಿಭೂಮಿಯನ್ನೂ, ಸರಕಾರದ ಖಾಲಿ ಭೂಮಿಯನ್ನೂ, ಬಂಜರು ಭೂಮಿಯನ್ನೂ ಭೂಹೀನ ಕೃಷಿಕಾರ್ಮಿಕರಿಗೂ ಬಡ ರೈತರಿಗೂ ಧರ್ಮಾರ್ಥವಾಗಿ ಮರುವಿತರಣೆ ಮಾಡುವುದು, ಅವರ ಋಣಭಾರವನ್ನು ರದ್ದುಗೊಳಿಸುವುದು, ಬಿನಾಮಿ ಭೂಮಿಯನ್ನು ಭೂಮಿತಿಕಾಯಿದೆಯಂತೆ ಹೆಚ್ಚುವರಿ ಭೂಮಿಯನ್ನು ಪತ್ತೆಹಚ್ಚುವುದು, ಪೋಲೀಸರ ಮತ್ತು ಗೂಂಡಾಗಳ ಧಾಳಿಗಳನ್ನು ಎದುರಿಸುವುದು, ಬ್ಯಾಂಕುಸಾಲ ಹಾಗೂ ವಿಮಾ ಸೌಲಭ್ಯಗಳನ್ನು ನೀಡುವುದು, ವರುಷದ ಹೆಚ್ಚಿನ ದಿನಗಳಲ್ಲಿ ಕೆಲಸ ದೊರಕಿಸಿಕೊಡುವುದು, ಪಾಲು ಬೆಳೆಗಾರರ ಮತ್ತು ಒಕ್ಕಲುಗಳ ಹಕ್ಕುಗಳನ್ನು ರಕ್ಷಿಸುವುದು ಮುಂತಾದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಕೃಷಿಕಾರ್ಮಿಕರ ಮತ್ತು ಬಡರೈತರ ಹೋರಾಟವು ಸಾಗಬೇಕಾಗಿದೆ. ಈ ಹೋರಾಟದ ಅಂತಿಮ ಗುರಿಯು ಭಾರತದಲ್ಲಿ ಬಂಡವಾಳಗಾರರ ಮತ್ತು ಭೂಮಾಲಕರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ಕೊನೆಗಾಣಿಸಿ ಕಾರ್ಮಿಕರ ಹಾಗೂ ರೈತರ ಪ್ರಭುತ್ವವನ್ನು ಸ್ಥಾಪಿಸುವುದಾಗಿರಬೇಕು. ಸಮಾಜವಾದಿ ವ್ಯವಸ್ಥೆಗೆ ಭದ್ರ ಬುನಾದಿ ಹಾಕುವುದಾಗಿರಬೇಕು. ●

'ನಾನೇಕೆ ಮಾತಾಡುವುದಿಲ್ಲ
ಬಯಕೆಗಳ ಬಗ್ಗೆ
ಎಲೆಗಳ ಬಗ್ಗೆ
ನನ್ನನಾಡಿನ ಮಹಾಅಗ್ನಿ ಪರ್ವತಗಳಬಗ್ಗೆ
—ಎಂದು ನೀವು ಕೇಳುತ್ತೀರಿ;
ನೋಡಿ : ಬೀದಿಯ ಮೇಲೆ ರಕ್ತವಿದೆ!
ನೋಡಿ : ರಕ್ತವಿದೆ ಬೀದಿಯ ಮೇಲೆ!'

—ಪಾಬ್ಲೊ ನೆರೂದ

ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಆಹ್ವಾನಿಸಿದ ಕೆಲವು ಲೇಖನಗಳು ತಡವಾಗಿ ದೊರೆತದ್ದರಿಂದ, ಅವುಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲು ಸಾಧ್ಯವಾಗದಿದ್ದಕ್ಕೆ ಸಂಪಾದಕ ಮಂಡಳಿಯು ವಿಷಾದವನ್ನು ವ್ಯಕ್ತಪಡಿಸುತ್ತದೆ. ಮುಂದೆ ಸಂದರ್ಭ ಮತ್ತು ಅವಕಾಶ ದೊರೆತಂತೆ ಇವುಗಳನ್ನು ಪ್ರಕಟಿಸಲಾಗುವುದು.

ಸಂಪಾದಕ ಮಂಡಳಿ

ಬರ್ಟೋಲ್ಟ್ ಬ್ರೆಕ್ಟ್

(9ನೇ ಪುಟದಿಂದ)

ರ್ಭದಲ್ಲಿ ಅವನು 'ನೀವು ಪ್ರಪಂಚವನ್ನು ಒಳ್ಳೆಯವರಾಗಿಬಿಡುವ ಮುಂಚೆ ಒಳ್ಳೆಯ ಪ್ರಪಂಚವನ್ನು ಬಿಟ್ಟುಹೋಗಿ' ಎಂದಿದ್ದಾನೆ.

ಬ್ರೆಕ್ಟ್ ಸೋಷಿಯಲಿಸ್ಟ್ ಜರ್ಮನಿಯಲ್ಲಷ್ಟೇ ಅಲ್ಲ ಅವನು ಇಡೀ ವಿಶ್ವದ ಮಾತಾಗಿದ್ದಾನೆ. ಎಲ್ಲೆಡೆಯೂ ಅವನು ಗೌರವಿಸಲ್ಪಟ್ಟಿದ್ದಾನೆ. ಅವನಿಗೆ 'ಅಂತರಾಷ್ಟ್ರೀಯ ಲೆನಿನ್ ಶಾಂತಿ ಪಾರಿತೋಷಕ'ವನ್ನು 1955ರಲ್ಲಿ ಮಾಸ್ಕೋದಲ್ಲಿ ನೀಡಿ ಗೌರವಿಸಲಾಯಿತು.

ಬ್ರೆಕ್ಟ್ ತನ್ನ ಕೊನೆಯುಸಿರೆಳೆದು ಇಪ್ಪತ್ತೆರಡು ವರ್ಷಗಳು ಸಂದವು, ಅವನ ವಿಚಾರಗಳು ಜಗತ್ತನ್ನು ಹೊಸ ಹಾದಿಯಲ್ಲಿ ಕೊಂಡೊಯ್ಯುವ ಪ್ರಯತ್ನವನ್ನು ಮಾಡುತ್ತಿವೆ. ●

ಸಾಹಿತ್ಯ-ಲೇಖಕ-ಜನತೆ

[5ನೇ ಪುಟದಿಂದ]

ಸಾಹಿತ್ಯ ಹೇಳಿದ್ದನ್ನೇ ಹೇಳುವ ಸ್ಥಿತಿಗೆ ಬಂದಾಗಲೆಲ್ಲಾ ಸಂಪ್ರದಾಯದ ಕವಿಗಳೇ 'ಜನತೆಯ ಭಾಷೆ'ಯಲ್ಲಿ ಬರೆದು ಕೆಲವೇ ಜನಕ್ಕಾಗಿ ಬರೆದ ಸಾಹಿತ್ಯವನ್ನೂ ಜೀವಂತಗೊಳಿಸಿದ್ದಾರೆ. ಇನ್ನು ಜನತೆಗಾಗಿಯೇ ಬರೆಯುವವನಿಗೆ ಆ ಜನತೆಯ ನುಡಿ-ನಡೆಗಳೇ ಜೀವಂತಿಕೆಯನ್ನು ಕೊಡುತ್ತವೆ. ಬರಹಗಾರ ಜನತೆಗೆ ಏನನ್ನು ಕೊಡಬೇಕೆಂದು ಆಶಿಸುತ್ತಾನೋ ಅದಕ್ಕೆ ಬೇಕಾಗುವ ಮೂಲದ್ರವ್ಯ ಆ ಜನತೆಯಲ್ಲೇ ಇದೆ. ಅದನ್ನು ಕಲಿತು, ಅರಗಿಸಿಕೊಂಡು ಹೊಸತನ ಕೊಟ್ಟು ಅವರನ್ನು ಕ್ರಾಂತಿಕಾರಿ ಹೋರಾಟಕ್ಕೆ ಅಣಿಗೊಳಿಸುವುದಕ್ಕೆ ನೆರವಾಗುವುದಕ್ಕಿಂತ ಲೇಖಕನಿಗೆ ಬೇರೆ ಜವಾಬ್ದಾರಿ ಯಾವುದಾದರೂ ಉಂಟೆ? —

ನಾವು ಎಂದಿನವರೆಗೆ ಹೆಂಗಸರನ್ನು ಸಾರ್ವಜನಿಕ ಕ್ಷೇತ್ರಕ್ಕೆ ಎಳೆದು ತರುವುದಿಲ್ಲವೋ, ಎಂದಿನವರೆಗೆ ಅವರು ದೇಶದ ರಾಜಕೀಯದಲ್ಲಿ ಪಾತ್ರ ವಹಿಸುವುದಿಲ್ಲವೋ, ಎಂದಿನವರೆಗೆ ಆಕೆ ಅಡಿಗೆಮನೆಯ ನಾಲ್ಕು ಗೋಡೆಗಳಿಂದೀಚೆ ಬರುವುದಿಲ್ಲವೋ ಅಂದಿನವರೆಗೂ 'ಪ್ರಜಾಪ್ರಭುತ್ವ' ಮತ್ತು 'ಸಮಾಜವಾದ'ದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾಗುತ್ತದೆ.

—ಲೆನಿನ್.

ನನಗನಿಸುತ್ತದೆ : ಅಷ್ಟೊಂದು ವಸ್ತುಗಳನ್ನು ನಿರ್ಮಿಸಿದವರು
ಎಲ್ಲದರ ಒಡೆಯರಾಗಿರಬೇಕು.
ರೊಟ್ಟಿ ಮಾಡುವವರು ಉಣ್ಣಬೇಕು!
ಗಣಿಯಲ್ಲಿರುವವರಿಗೆ ಬೆಳಕು ಬೇಕು!
ಸರಪಳಿತೊಟ್ಟ ಬೂದುಬಣ್ಣದ ಜನರು ಸಾಕು!
ಕಳೆದು ಹೋದ ಕಾಂತಿಹೀನ ಜನರು ಸಾಕು!
ಪ್ರಭುವಾಗಿಯಲ್ಲದೆ ಯಾರೂ ಹಾದು ಹೋಗಬಾರದು.
ಕಿರೀಟವಿಲ್ಲದೆ ಯಾವ ಸ್ತ್ರೀಯೂ ಇರಬಾರದು.
ಪ್ರತಿ ಕೈಗೂ ಚಿನ್ನದ ಗವುಸು.
ಕತ್ತಲು ಕವಿದವರಿಗೆ ಸೂರ್ಯನ ಫಲ.

—ಪಾಬ್ಲೊ ನೆರೂದ.

ಈ ವಿಶೇಷ ಸಂಚಿಕೆಯನ್ನು ಹೊರತರುವುದಕ್ಕೆ ಸಹಾಯ ಮಾಡಿದ ಲೇಖಕರು, ಜಾಹೀರಾತುದಾರರು, ಓದುಗರು ಮತ್ತು ಐಕ್ಯರಂಗದ ಎಲ್ಲಾ ಹಿತಚಿಂತಕರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಸಂಪಾದಕ ಮಂಡಳಿ

ಮೇ ದಿನಾಚರಣೆಯನ್ನು ಕುರಿತು

[ಒಂದನೇ ಪುಟದಿಂದ]

ಕಾಂಗ್ರೆಸ್ ಎಂಟುಗಂಟೆ ದುಡಿಮೆಗೆ ಒಂದು ನಿಯಮವನ್ನು ಜಾರಿಗೆ ತಂದಿತು. ಹೀಗೆ ಮೊದಲ ಕಾರ್ಮಿಕ ಸಂಘಟನೆಗಳಿಗೆ ನಿಷ್ಕೃರವಾದ ಮತ್ತು ವಿಶಾಲವಾದ ಧ್ಯೇಯೋದ್ದೇಶಗಳಿಲ್ಲದಿದ್ದರೂ ಅವುಗಳ ರಚನೆ ಮತ್ತು ಚಳುವಳಿಗಳು ಟ್ರೇಡ್ ಯೂನಿಯನ್ ಇತಿಹಾಸದಲ್ಲಿ ಒಂದು ಗಟ್ಟಿ ಸ್ಥಾನವನ್ನು ಪಡೆಯುತ್ತವೆ.

ಮಾರ್ಕ್ಸ್, ಎಂಗೆಲ್ಸ್ ಅವರ ಸಂಪರ್ಕದಿಂದ ಬೆಳೆದ ಮೊದಲನೇ ಇಂಟರ್‌ನ್ಯಾಷನಲ್‌ದ ಜಿನೀವ ಅಧಿವೇಶನದಲ್ಲಿ ಎಂಟುಗಂಟೆ ಕೆಲಸದ ಬಗ್ಗೆ ಒಂದು ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಇದರಿಂದ ಎಂಟುಗಂಟೆ ಚಳುವಳಿಗೆ ಒಂದು ಅಂತರಾಷ್ಟ್ರೀಯ ಸ್ವರೂಪ ದೊರೆಯಿತು. ಮೊದಲನೇ ಇಂಟರ್‌ನ್ಯಾಷನಲ್‌ನ ಪತನಾನಂತರ ಪ್ಯಾರಿಸ್‌ನಲ್ಲಿ 1889ರಲ್ಲಿ ಸಮಾವೇಶಗೊಂಡ ಎರಡನೇ ಇಂಟರ್‌ನ್ಯಾಷನಲ್‌ನಲ್ಲಿ, ಕಾರ್ಮಿಕರ ಬೇಡಿಕೆಯನ್ನು ಮುಂದಿಡುವುದಕ್ಕೆ ಮೇ ಒಂದನೇ ತಾರೀಕನ್ನು ಅಧಿಕೃತವಾಗಿ ಆರಿಸಿಕೊಳ್ಳಲಾಯಿತು.

ಮೇ ಒಂದನೇ ತಾರೀಕಿನಂದು ನಡೆದ ಚಳುವಳಿಗಳಲ್ಲೆಲ್ಲ ತುಂಬ ಪ್ರಸಿದ್ಧವಾದದ್ದು-1886ರಲ್ಲಿ ಅಮೆರಿಕಾದಲ್ಲಿ ನಡೆದ ಬೃಹತ್ ಕಾರ್ಮಿಕ ಚಳುವಳಿ. ಚಳುವಳಿಯ ಮುಖ್ಯ ಕೇಂದ್ರ ಚಿಕಾಗೋ ನಗರವಾಗಿದ್ದರೂ ಸುತ್ತಲಿನ ಅನೇಕ ನಗರಗಳಿಗೂ ಅದು ಹರಡಿತ್ತು. ಸ್ಪಷ್ಟವಾದ ವಾಮಛಾಯೆಯನ್ನು ಪಡೆದಿದ್ದ ಈ ಚಳುವಳಿ ಅಸಂಖ್ಯಾತ ಕಾರ್ಮಿಕರನ್ನು ಆಕರ್ಷಿಸಿತ್ತು. ನಂತರ 1890ರ ಮೇ ಒಂದನೇ ತಾರೀಕು ಮತ್ತೊಂದು ದೊಡ್ಡ ಚಳುವಳಿ ನಡೆಯಿತು. ಇದನ್ನು ಇತರ ರಾಷ್ಟ್ರಗಳ ಕಾರ್ಮಿಕ ಸಂಘಗಳು ಅಂತರರಾಷ್ಟ್ರೀಯ ಪ್ರತಿಭಟನಾ ದಿನವಾಗಿ ಅಂಗೀಕರಿಸಿದರು. ಯೂರೋಪಿನ ಅನೇಕ ದೇಶಗಳಲ್ಲಿ 1890ರ ಮೇ ದಿನವನ್ನು ಆಚರಿಸಲಾಯಿತು.

1890ರ ಮೇ ದಿನದ ನಂತರ ಎಂಟುಗಂಟೆ ಕೆಲಸದ ಬೇಡಿಕೆಯೊಂದೇ ಅಲ್ಲದೆ, ಕಾರ್ಮಿಕರ ದುಡಿಮೆ ಪರಿಸ್ಥಿತಿ ಸುಧಾರಣೆ ಮುಂತಾದ ಇತರ ಬೇಡಿಕೆಗಳೂ ಮೇ ದಿನಾಚರಣೆಯಲ್ಲಿ ಸೇರಿಕೊಂಡವು. ಮೇ ದಿನಕ್ಕೆ ಬರುಬರುತ್ತಾ ಸ್ಪಷ್ಟವಾದ ವರ್ಗಸ್ವರೂಪ ಬಂದಿತು. 1893ರಲ್ಲಿ ಇಂಟರ್‌ನ್ಯಾಷನಲ್‌ನ ಜ್ಯುರಿಚ್ ಅಧಿವೇಶನ ನಡೆದಾಗ ಮೇ ದಿನದ ವರ್ಗಛಾಯೆಯನ್ನು ಮತ್ತಷ್ಟು ಖಚಿತಗೊಳಿಸಲಾಯಿತು. ವರ್ಗಭೇದಗಳನ್ನು ತೊಡೆದು ಹಾಕಲು ಮತ್ತು ಅಂತರರಾಷ್ಟ್ರೀಯ ಶಾಂತಿಯನ್ನು ಸ್ಥಾಪಿಸಲು ಒಂದುಗೂಡುವ ಕಾರ್ಮಿಕವರ್ಗದ ದೃಢ ಮನಸ್ಸಿನ ಸಂಕೇತವಾಗಿ ಮೇ ದಿನಾಚರಣೆಯನ್ನು ನಡೆಸಬೇಕೆಂಬ ನಿರ್ಧಾರವನ್ನು ಅಲ್ಲಿ ಕೈಗೊಳ್ಳಲಾಯಿತು. ಮೇ ದಿನ ಅಂದಿನಿಂದ ಕೆಂಪುದಿನವಾಗಿ ಪರಿವರ್ತನೆ ಹೊಂದಿತು.

ಅಂತರರಾಷ್ಟ್ರೀಯ ಕಾರ್ಮಿಕವರ್ಗದ ಸೌಹಾರ್ದತೆ, ಮತದಾನದ ಹಕ್ಕು, ಸಾಮ್ರಾಜ್ಯಶಾಹಿ ಯುದ್ಧ ಮತ್ತು ವಸಾಹತುಶಾಹಿ ದಬ್ಬಾಳಿಕೆಗೆ ವಿರೋಧ, ರಾಜಕೀಯ ಕೈದಿಗಳ ಬಿಡುಗಡೆ, ಕಾರ್ಮಿಕವರ್ಗಕ್ಕೆ ರಾಜಕೀಯ ಮತ್ತು ಆರ್ಥಿಕ ಸಂಘಟನೆಯನ್ನು ಕಟ್ಟಿಕೊಳ್ಳುವ ಹಕ್ಕು, ಮುಂತಾದ ಅನೇಕ ಬೇಡಿಕೆಗಳು ಕ್ರಮೇಣವಾಗಿ ಸೇರಿಕೊಂಡು ಮೇ ದಿನಾಚರಣೆಯ ಅರ್ಥವಂತಿಕೆ ಮತ್ತು ಸಾಂಕೇತಿಕತೆಯನ್ನು ಹೆಚ್ಚಿಸಿದವು. ಮಹಾಯುದ್ಧಗಳ ಸಮಯದಲ್ಲೂ ಮೇ ದಿನಾಚರಣೆಯನ್ನು ನಡೆಸಿಕೊಂಡು ಬರಲಾಗಿದ್ದು, ಆ ದಿನ ಕಾರ್ಮಿಕರು ಯುದ್ಧಕ್ಕೆ ತಮ್ಮ ಪ್ರತಿಭಟನೆ ಸೂಚಿಸಿದ್ದರು.

ಹೀಗೆ ಕಾರ್ಮಿಕರ ವರ್ಗಐಕ್ಯತೆಯನ್ನು, ಧ್ಯೇಯೋದ್ದೇಶಗಳನ್ನು ಸಾರುವ ಮೇ ದಿನಾಚರಣೆಯು "ವಿಶ್ವಕಾರ್ಮಿಕರೇ ಒಂದಾಗಿರಿ" ಎಂಬ ಘೋಷಣೆಗೆ ಅನುಸಾರವಾಗಿ ಜಗತ್ತಿನ ಕಾರ್ಮಿಕರ ಸೋದರತ್ವವನ್ನು ಶ್ರುತಪಡಿಸುವ ದಿನವಾಗಿಯೂ ಇದೆ. ಮೇ ದಿನಾಚರಣೆಯ ಸಂದರ್ಭದಲ್ಲಿ ಎಲ್ಲ ರಾಷ್ಟ್ರಗಳ ಕಾರ್ಮಿಕರಂತೆ ಭಾರತದ ಕಾರ್ಮಿಕವರ್ಗವೂ ತನ್ನ ಕರ್ತವ್ಯಗಳನ್ನು ಪರೀಕ್ಷಿಸಿಕೊಳ್ಳುವ, ತನ್ನ ಧ್ಯೇಯಗಳ ಸಾಧನೆಗಾಗಿ ಮತ್ತಷ್ಟು ಒಗ್ಗಟ್ಟಾಗುವ ಕೆಲಸವನ್ನು ಮಾಡಬೇಕಾಗಿದೆ. ತನ್ನ ವರ್ಗದ ಮತ್ತು ದೇಶದ ಪ್ರಜಾಪ್ರಭುತ್ವವಾದಿ ಹಕ್ಕುಗಳಿಗೆ ಚ್ಯುತಿಬಂದಾಗ ಪ್ರತಿಭಟಿಸುವ ಎಚ್ಚರವನ್ನು ಇನ್ನು ಮುಂದಾದರೂ ನಮ್ಮ ಕಾರ್ಮಿಕವರ್ಗ ಕಾಯ್ದುಕೊಳ್ಳಬೇಕಾಗಿದೆ. ಕರ್ನಾಟಕದ ಕಾರ್ಮಿಕವರ್ಗವೂ ಅಷ್ಟಾಗಿ ಇನ್ನೂ ತನ್ನ ವರ್ಗಸೌಹಾರ್ದತೆಯನ್ನು ಸ್ಥಾಪಿಸಿಕೊಂಡಿಲ್ಲ. ಕೇವಲ ಆರ್ಥಿಕಬೇಡಿಕೆಗಳ ಬಗ್ಗೆ ಮುಷ್ಕರ ನಡೆಸುವುದು ಮಾತ್ರವಲ್ಲದೆ, ಆಳವಾದ ರಾಜಕೀಯ ಪ್ರಜ್ಞೆ, ಆರ್ಥಿಕ ಪ್ರಜ್ಞೆಗಳನ್ನು ಬೆಳೆಸಿಕೊಳ್ಳುವ ಮತ್ತು ಆ ಮೂಲಕ ವರ್ಗಹೋರಾಟದ ನೇತೃತ್ವ ವಹಿಸಿ ರಾಜ್ಯಾಧಿಕಾರವನ್ನು ಪಡೆಯುವ ದಿಸೆಯತ್ತ ಕಾರ್ಮಿಕವರ್ಗ ಇನ್ನೂ ಕಣ್ಣು ಹೊರಳಿಸಬೇಕಾಗಿದೆ. ಈಗ ಸಂಘಟಿತರಾಗಿರುವ ಕಾರ್ಮಿಕರು ತಮ್ಮ ಅಸಂಘಟಿತ ಸೋದರರ ಬಗ್ಗೆ ಗಮನ ಹರಿಸಿ, ಅವರ ಪ್ರಜ್ಞೆಯನ್ನು ಹೆಚ್ಚಿಸುವ ಕೆಲಸವನ್ನೂ ಕೈಗೊಳ್ಳಬೇಕಾಗಿದೆ. ಇವಲ್ಲದೆ ಇನ್ನೂ ಒಂದು ಮಹತ್ವದ ಹೊಣೆ ನಮ್ಮ ಕಾರ್ಮಿಕವರ್ಗದ ಹೆಗಲ ಮೇಲಿದೆ. ತನ್ನ ವರ್ಗದ ಸಂಖ್ಯೆಯನ್ನು ಹತ್ತುಪಟ್ಟು ಮೀರುವ ಮತ್ತು ಇಡೀ ದೇಶದಲ್ಲಿ ಬಹುಸಂಖ್ಯೆಯಲ್ಲಿರುವ ರೈತ ಜನಾಂಗವನ್ನು ತನ್ನ ಧ್ಯೇಯೋದ್ದೇಶಗಳಿಗಾಗಿ ಸೆಳೆದುಕೊಳ್ಳುವ, ಅವರೊಡನೆ ವರ್ಗಸೌಹಾರ್ದ ಸ್ಥಾಪಿಸುವ ಮತ್ತು ಅವರಲ್ಲಿ ವರ್ಗ ಪ್ರಜ್ಞೆಯನ್ನು ಬೆಳೆಸುವ ಜವಾಬ್ದಾರಿ ಕಾರ್ಮಿಕವರ್ಗಕ್ಕೆ ಸೇರಿದೆ. ಭಾರತದಂಥ ಕೃಷಿಮೂಲವಾದ ಮತ್ತು ಅತ್ಯಂತ ಹಿಂದುಳಿದ ರೈತಜನಾಂಗವನ್ನುಳ್ಳ ದೇಶದಲ್ಲಿ ಈ ಜವಾಬ್ದಾರಿ ಇನ್ನೂ ಗುರುತರವಾಗಿ ಮತ್ತು ತುರ್ತಿನದಾಗಿ ಕಾಣಿಸಿಕೊಳ್ಳುತ್ತದೆ. ಈ ಕರ್ತವ್ಯವನ್ನು ಕಾರ್ಮಿಕವರ್ಗವು ಪೂರೈಸದಿದ್ದಲ್ಲಿ ಅಥವಾ ಪೂರೈಸಲು ತಡಮಾಡಿದಲ್ಲಿ ಅದರ ಗುರಿಸಾಧನೆ ದೂರದಲ್ಲೇ ಉಳಿಯುತ್ತದೆ. ಕಾರ್ಮಿಕರು ಈ ಬಗ್ಗೆ ಎಚ್ಚರಗೊಂಡು ಕಾರ್ಯೋನ್ಮುಖರಾದರೆ ಮೇ ದಿನಾಚರಣೆ ಅರ್ಥಪೂರ್ಣವಾಗುತ್ತದೆ.

—ಉಮಾ

ಕಮ್ಯುನಿಸ್ಟ್ ಪಾರ್ಟಿಯ ಸಂಸ್ಥಾಪನೆ

[21ನೇ ಪುಟದಿಂದ]

ಎಂದು ತಿಳಿದು ಬಂದ ನಂತರ ತಾನಾಗಿಯೇ ಆತ ನಮ್ಮನ್ನು ತ್ಯಜಿಸಿದ, ಅವನು ಹೋದನಂತರ S. V. ಘಾಟೆ ಪ್ರಧಾನ ಕಾರ್ಯದರ್ಶಿಯಾದರು. 1926–29ರವರೆಗೆ ಕೇಂದ್ರ ಸಮಿತಿಯ ಅನೇಕ ಸಭೆಗಳು ಗುಪ್ತವಾಗಿ ಸಮಾವೇಶಗೊಂಡವು. ಕೆಲವು ವರ್ಷಗಳ ಕೇಂದ್ರ ಸಮಿತಿಯು ವರ್ಷಕ್ಕೆ ನಾಲ್ಕು ಬಾರಿ ಸೇರಿದ್ದಿತು. 1927ರಲ್ಲಿ ಪಾರ್ಟಿಯ ಘಟನಾವಳಿಯನ್ನು ತಯಾರಿಸಲಾಯಿತು.

ಕನ್ನಡಕ್ಕೆ: ಆರ್. ರವೀಂದ್ರ ನಾಯಕ್

ನಾನು ಯಾರನ್ನೂ ದ್ವೇಷಿಸುವುದಿಲ್ಲ;
ನಾನು ಯಾರನ್ನೂ ದೋಚುವುದಿಲ್ಲ;
ಆದರೆ,
ಜಾಗರೂಕರಾಗಿರಿ……
ನಾನು ಹಸಿದಿರುವಾಗ—
ನನ್ನನ್ನು ಕೊಳ್ಳೆ ಹೊಡೆದವರ ಮಾಂಸ ತಿನ್ನುತ್ತೇನೆ—
ನನ್ನ ಹಸಿವೆಯ ಬಗ್ಗೆ—ಜಾಗ್ರತೆಯಿಂದಿರಿ,
ಜಾಗ್ರತೆಯಿಂದಿರಿ—ನನ್ನ ಸಿಟ್ಟಿನ ಬಗ್ಗೆ.

—ಮುಹಮ್ಮದ್ ದರ್‌ವೀರ್

ಸಂಪಾದಕೀಯ

[ಒಂದನೇ ಪುಟದಿಂದ]

ಸರಿಯಾಗಿ ಜಾರಿಯಾಗಿಲ್ಲ. ಯೋಜನೆಗಳಿಗಾಗಿ ಮಂಜೂರಾದ ಹಣ ಬಹಳಷ್ಟು ಖರ್ಚೆ ಆಗಿಲ್ಲ; ಖರ್ಚು ಆಗಿದ್ದು ಕೆಲವರ ಬೊಕ್ಕಸಕ್ಕೆ ಮಾತ್ರ ಹೋಗಿದೆ. ಜನತಾ ವಸತಿ ಯೋಜನೆಯಂತಹ ಕಾರ್ಯಕ್ರಮಗಳು ಜನರಲ್ಲಿ ಭ್ರಮೆ ಹುಟ್ಟಿಸಲು ಮಾತ್ರ ಎಂಬುದು ಈಗೀಗ ಸ್ಪಷ್ಟವಾಗುತ್ತಲಿದೆ. ಎಷ್ಟೋ ಮನೆಗಳು ವಾಸಕ್ಕೆ ಮೊದಲೇ ಕುಸಿದು ಬಿದ್ದಿವೆ! ಗ್ರಾಮಾಂತರ ನಿರುದ್ಯೋಗ ಮತ್ತು ಅರೆ ಉದ್ಯೋಗ ದಿನೆ ದಿನೆ ಬೃಹದಾಕಾರವಾಗಿ ಹೆಚ್ಚುತ್ತಲಿವೆ. ರೈತರು ಮತ್ತು ಬಡವರು ಸಾಲದ ಹೊರೆಯಿಂದ ವಿಮೋಚನೆ ಇಲ್ಲದಾಗಿದ್ದಾರೆ. ಇರುವ ಕಾನೂನುಗಳ ಪ್ರಯೋಜನ ಪಡೆಯುವುದಕ್ಕಾಗಿ ಪ್ರಜಾಪ್ರಭುತ್ವ ಹೋರಾಟಗಳು ನಡೆದಾಗಲೆಲ್ಲಾ, ಇವುಗಳನ್ನು ಹತ್ತಿಕ್ಕಲಾಗುತ್ತಿದೆ. ಭ್ರಷ್ಟಾಚಾರ, ರಾಜಕೀಯ ಕುತಂತ್ರ, ಸ್ವಜನ ಪಕ್ಷಪಾತಗಳಿಂದ ಬಡವರಿಗೆ ನ್ಯಾಯ ಸಿಗದಂತಾಗಿದೆ. ರಾಜ್ಯದಲ್ಲಿ ಹಳ್ಳಿಯ ಬಡವರ, ರೈತರ ಸಂಘಟನೆ ಮತ್ತು ಹೋರಾಟ ಅಲ್ಲಲ್ಲಿ ಬೆಳೆದು ಬಂದಿದ್ದರೂ, ರಾಜ್ಯದಾದ್ಯಂತ ಬಲಿಷ್ಟ ಸಂಘಟನೆ ಮತ್ತು ಸತತ ಚಳುವಳಿಯ ಅಭಾವದಿಂದ ಸಂಕಷ್ಟಗಳು ಇನ್ನೂ ಜಾಸ್ತಿಯಾಗಿವೆ. ಹಳ್ಳಿಯ ಬಡವರಲ್ಲಿ ಭ್ರಮೆಯೂ ಮೂಡಿದೆ.

ಈ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಕಿಸಾನ್ ಸಮ್ಮೇಳನ ಹೆಸರಿನಲ್ಲಿ ಶ್ರೀಮಂತ ರೈತರನ್ನು ಸಂಘಟಿಸಲು ಶ್ರೀ ಚರಣಸಿಂಗರ ಅನುಯಾಯಿಗಳು ಮುಂದಾಗಿರುವಾಗ ಮಂಗಳೂರಿನಲ್ಲಿ ಕರ್ನಾಟಕ ಪ್ರಾಂತ ರೈತಸಂಘದ ಸಮ್ಮೇಳನವು ಮೇ 12, 13 ಮತ್ತು 14 ರಂದು ಸೇರುತ್ತಲಿದೆ. ರಾಜ್ಯದಾದ್ಯಂತ ಭೂಹೀನ ಬಡಜನರು, ಕೃಷಿಕೂಲಿಗಾರರು, ಬಡ ರೈತರು, ಮಧ್ಯಮ ರೈತರು ಮತ್ತು ಸಾಮಾಜಿಕವಾಗಿ ಕೆಳತಳ್ಳಲ್ಪಟ್ಟವರು-ಇವರಿಗೆ ಆದ್ಯತೆಯನ್ನಿತ್ತು ಸಂಘಟಿಸಿ, ಸತತ ಸಂಘಟಿತ ಚಳುವಳಿಯನ್ನು ಬೆಳೆಸುವ ದೃಷ್ಟಿಯಿಂದ ಮಂಗಳೂರಿನಲ್ಲಿ ಜರುಗಲಿರುವ ಸಮ್ಮೇಳನದ ಮೇಲೆ ದೊಡ್ಡದಾದ ಚಾರಿತ್ರಿಕ ಜವಾಬ್ದಾರಿಯಿದೆ. ಆಂಧ್ರ, ಅಸ್ಸಾಮ್ ಮತ್ತು ಇತರ ರಾಜ್ಯಗಳಲ್ಲಿನಂತೆ ನಮ್ಮ ರಾಜ್ಯದಲ್ಲೂ ಇತರ ಸಂಘಟನೆಗಳೊಂದಿಗೆ ಸೇರಿ ಸಂಯುಕ್ತ ಚಳುವಳಿಗಳನ್ನು ನಡೆಸುವ ಅವಶ್ಯಕತೆಯಿದೆ. ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಂಪೂರ್ಣಗೊಳಿಸಿ, ಸಮಾಜವಾದದೆಡೆಗೆ ಹೋಗಲು ಹಳ್ಳಿಯ ಬಡವರ ಮತ್ತು ಕಾರ್ಮಿಕರ ಸಖ್ಯತೆಯನ್ನು ಬೆಳೆಸುವುದರಲ್ಲೂ ಸಮ್ಮೇಳನವು ಮಾರ್ಗದರ್ಶನವೀಯಬೇಕು. ಪಟ್ಟಣದ ಕಾರ್ಮಿಕರು ಮತ್ತು ಹಳ್ಳಿಯ ಬಡವರನ್ನು ವಿಂಗಡಿಸಿ, ಪ್ರತ್ಯೇಕಿಸುವ ಆಳುವ ವರ್ಗಗಳ ಕುತಂತ್ರದ ವಿರುದ್ಧ ಹೋರಾಡಬೇಕು. ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗೆ ಅಪಾರ ಅನುಭವವಿದೆ; ಅನೇಕ ಕಷ್ಟ ಸಂಕಷ್ಟಗಳನ್ನು ಅನುಭವಿಸಿದವರು ಇವರಲ್ಲಿ ಬಹಳ ಮಂದಿ. ಹಿಂದಿನ ಅನುಭವ ಮತ್ತು ಇಂದಿನ ಪರಿಸ್ಥಿತಿಯ ಆಧಾರದಲ್ಲಿ ಸಂಘಟನೆ ಮತ್ತು ಹೋರಾಟಗಳನ್ನು ಬೆಳೆಸಲು ಮಂಗಳೂರಿನಲ್ಲಿ ಜರಗಲಿರುವ ರೈತ ಸಮ್ಮೇಳನವು ಮುಂದಾಗಲಿ. ●

ವಿಶೇಷಾಂಕದಲ್ಲಿ ಸುದ್ದಿ, ಸಮಾಚಾರಗಳನ್ನು ಪ್ರಕಟಿಸಿಲ್ಲ. ಮುಂದಿನ ಸಂಚಿಕೆಯಲ್ಲಿ ಇವುಗಳನ್ನು ಎಂದಿನಂತೆ ಪ್ರಕಟಿಸಲಾಗುವುದು.

ಸಂಪಾದಕ ಮಂಡಳಿ

ಹೊಸ ಯುಗ ಹೊಸ ಬಗೆ

ಚಂದ್ರ ನಿಂದ್ರದೃಷ್ಟಿ ಮುಟ್ಟಿ ನವರಸ ನವಿರು
ಮಳೆಯ ಹದಿನೆಂಟು ಮಮತೆ ಮುತ್ತಿಟ್ಟು
ಸೋಜಿಗ ತೆವರು.
ಇಳಿನೀರು ಸುಳಿಗಾಳಿ ಎಳೆಬಿಸಿಲು ಸಮತೆ ಆರೈಕೆ
ತೋಳಿದ ಮುತ್ತಿನ ಬಾನು ಉತ್ತು ಬಿತ್ತಿದ ಭೂಮಿ
ಒಬ್ಬನಿಗೆ ಎಷ್ಟೊ ಇನ್ನೊಬ್ಬನಿಗು ಅಷ್ಟೆ.
ಉಗುರುಕಣ್ಣು ಮಣ್ಣು ಮಾಡಿಕೊಳ್ಳದೆ
ನಲಿಯುವ ಬೆರಳಣಿಕೆ,
ಉಳಿದದ್ದು ಬರಿ ಉಸಿರು–
ಸತ್ತು ಸತ್ತು ಹುಟ್ಟಿ ಕಣ್ಣೀರಲ್ಲಿ ಕೈ ತೊಳೆದು
ನೆಗ್ಗಿ ನರಳುವ ಕೋಟಿ.
ಪರ
ಕತ್ತಲ ಜೊತೆ ಕಸರತ್ತು ಮಾಡಿತು ಬೆಳಕು
ಇರುಳ ಮಗ್ಗುಲ ಬೊಗ್ಗು ಬಡಿವ ಹಗಲು.
ವಿಷಮ ಅರ್ಥವ್ಯವಸ್ಥೆ ಕಷ್ಟದ ಮೂಲ
ತಡೆ ತಡೆದು ಬೆವೆತು ಹನಿಯೊಡೆದು
ಕಾವೇರಿ ಕ್ರಾಂತಿ ಮೈ ಕೋರೈಸಿ
ಕಣ್ಣನಾವರಿಸಿ ಕಿವಿ ಸುತ್ತಲೂ ಹಂಚುತಿದೆ
ಹೊಸಯುಗ ಹೊಸ ಬಗೆ
ಮೂಕ ದಲಿತ ದುಡಿವವಗೆ ಮಾನವತೆ
ಸೋದರತೆ ಸಂಕೀರ್ತನೆ.

ವೀಚಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053. Editorial and managerial office: L-56, K. V. Temple Street, Sultanpet, Bangalore-560 053. Phone : 24154